ಜನಶಕ್ತಿ

ದುಡಿವ ಜನರ ಪ್ರಾಣಮಿತ್ರ


ಸಂಪುಟ 2 ಸಂಚಿಕೆ 37

ಸೆಪ್ಟೆಂಬರ್ 14.2008

ಕನ್ನಡ ವಾರಪತ್ರಿಕೆ

ರೂ. 5/-

www.janashakthi.org



ಬಿಜೆಪಿಯ ನೂರು ದಿನಗಳು


ಹಲವು ವೈಫಲ್ಯಗಳು ದ್ರೋಹಗಳು

ಅಣು ಒಪ್ಪಂದ :
ಬಯಲಾದ ಬುಶ್-ಸಿಂಗ್ ದ್ರೋಹ

ಕೋಕಾ ಎಂಬ ಮಹಾ ದೋಖಾ



ನೆರೆ-ಬರ ಸರ್ಕಾರದ ನಿರ್ಲಕ್ಷ್ಯ



ವಿದ್ಯಾರ್ಥಿ ಚಳುವಳಿ ಮುಂದಿದೆ ದೊಡ್ಡ ಸವಾಲು

ನೋಟ



ಡಾ. ಜಿ. ಭಾಸ್ಕರ ಮಯ್ಯ

ಅತೀಂದ್ರಿಯ ಭ್ರಮಾಲೋಕ ಮತ್ತು ಕೋವೂರ್

ಡಾ. ಕೋವೂರ್ ಈ ಮಾನವ ನಿರ್ಮಿತ ಮೂಢನಂಬಿಕೆಗಳನ್ನು ತಮ್ಮ ಯೌವನಾವಸ್ಥೆಯಲ್ಲಿಯೇ ಅರ್ಥೈಸಿ ಕೊಂಡಿದ್ದರೂ ಅದಕ್ಕೆಂದೇ ಅವರು ಎರಡು ವರ್ಷಗಳ ಕಾಲ ಜೋತಿಷ್ಯ, ಹಸ್ತಸಾಮುದ್ರಿಕೆ ಮುಂತಾದವುಗಳನ್ನೆಲ್ಲಾ ಆಮೂಲಾಗ್ರವಾಗಿ ಕಲಿತರು. ಅವರೇ ಎನ್ನುವಂತೆ ಅದರಿಂದಾದ ಲಾಭವೆಂದರೆ ಅವುಗಳು ಕೇವಲ 'ನಿರರ್ಥಕ' – ಎಂಬ ತಿಳಿವು ಬಂದುದು.

ಭಾಗ 2


ಕೋವೂರ್ ನಿವೃತ್ತರಾದ ಮೇಲೆ ಅವರು ಜ್ಯೋತಿಷ್ಯ, ಮಾಟ, ಮಂತ್ರ, ದೆವ್ವಗಳ ಕುರಿತು ಅಸಂಖ್ಯಾತ ಬರಹಗಳನ್ನು ಬರೆದರು. ಇದರ ಪರಿಣಾಮವಾಗಿ ಮಠಾಧಿಪತಿಗಳಿಂದ, ಪಾದ್ರಿಗಳಿಂದ, ವಂಚಕ ಮಾಟಗಾರರು ಹಾಗೂ ಮಾಂತ್ರಿಕರಿಂದ, ಜ್ಯೋತಿಷ್ಯ - ಹಸ್ತ ಸಾಮುದ್ರಿಕಾ ತಜ್ಞರಿಂದ, ದೆವ್ವಪತಿಗಳಿಂದ, ಟೆಲಿಪತಿಯನ್ನು ನಂಬುವ ಅವೈಜ್ಞಾನಿಕ ವಿಜ್ಞಾನಿಗಳಿಂದ ತೀವ್ರ ಪ್ರತಿಭಟನೆಗೆ ಗುರಿಯಾಗಬೇಕಾಯಿತು. ತಮ್ಮ ಮಾಟದಿಂದ ಅವರನ್ನು ಕೊಲ್ಲುವುದಾಗಿ 'ಭೂತಪತಿ'ಗಳು ಬೆದರಿಕೆಯನ್ನು ಒಡ್ಡಿದ್ದರು. ನಗ್ನವಾಗಿ, ಗುಪ್ತಕಷಾಯ ಕುಡಿದು ತಮ್ಮೊಡನೆ ರಾತ್ರಿ ಸ್ಮಶಾನಕ್ಕೆ ಬಂದಲ್ಲಿ ಭೂತಗಳನ್ನು ತೋರಿಸುವುದಾಗಿ ಕೆಲವರು ಹೇಳಿದ್ದರು!

ಕೊನೆಗವರು ನಿಶ್ಚಯಿಸಿದ್ದೇನೆಂದರೆ ಈ ಮೋಸ ಮತ್ತು ದಗಲ್‌ಬಾಜಿತನಗಳನ್ನು ಹೊರತರುವ ಏಕೈಕ ಮಾರ್ಗವೆಂದರೆ ಆ ವ್ಯಕ್ತಿಗಳಿಗೆ ತಮ್ಮ ಸಾಧನೆಗಳನ್ನು 'ವಂಚನಾ ನಿಶ್ಚಯ ಪರೀಕ್ಷೆಗೊಳಪಡಿಸಲು ಜನರೆದುರಿಗೆ ಆಹ್ವಾನಿಸುವುದು. ಅವರ ಮಾತುಗಳನ್ನೇ ಉದಾಹರಿಸುವುದಾದರೆ-

'ನನ್ನ ದೊಡ್ಡ ಮೊತ್ತದ ಬೇರೆ ಬೇರೆ ಆಹ್ವಾನಗಳು ಜನರ ಮನಸ್ಸಿನಲ್ಲಿ ನಾನು ಅಪರಿಮಿತ ಸಿರಿವಂತ, ರಾಶಿಗಟ್ಟಲೆ ಹಣವನ್ನು ಕೀಳು ಪ್ರಚಾರಕ್ಕಾಗಿ ಸುರಿಯುತ್ತಾನೆಂಬ ಎಂಬ ಕೆಟ್ಟ ಅಭಿಪ್ರಾಯ ಮೂಡಬಹುದೆಂಬ ಅರಿವೂ ನನಗಿತ್ತು. ನನ್ನ ಪಂಥಾಹ್ವಾನಗಳ ನೇರ ಪರಿಣಾಮಗಳೇನೆಂಬೂದೂ ನನಗೆ ಗೊತ್ತು. ಇಡೀ ಜಗತ್ತಿನಲ್ಲಿ ಯಾವನೇ ಒಬ್ಬ ಅಲೌಕಿಕಶಕ್ತಿಯುಳ್ಳ ಮನುಷ್ಯನಿದ್ದಲ್ಲಿ - ಆಗ ನಾನು ಸಕಾರಣವಾಗಿ ನನ್ನ ವೃದ್ಧಾಪ್ಯವನ್ನು ನಿರ್ಗತಿಕರು ವಾಸಿಸುವ ಜೋಪಡಿಯಲ್ಲಿ ವಾಸಿಸಬೇಕಾಗುತ್ತದೆ. ಆದರೆ ಎಂದಿನಂತೆ ಇಂದೂ ನನಗೆ ಭರವಸೆಯಿದೆ- ಏನೆಂದರೆ ನನ್ನ ಪಂಥಾಹ್ವಾನದಿಂದಾಗಿ ನಾನು ಒಂದು ಸೆಂಟನ್ನೂ ಕಳೆದುಕೊಳ್ಳುವುದಿಲ್ಲ. ಆದ್ದರಿಂದಲೇ ನನ್ನ ಆಹ್ವಾನಗಳನ್ನು ಸಾವಿನ ತನಕವೂ ತೆರೆದಿಟ್ಟಿರುವುದು. ನನ್ನ ಕಾಲಾನಂತರ ತನ್ನ ಆರ್ಥಿಕತೆಗೆ ಒಪ್ಪುವಷ್ಟು ನನ್ನ ಮಗನೂ ಈ ಪಂಥಾಹ್ವಾನಗಳನ್ನು ಮುಂದುವರಿಸುತ್ತಾನೆಂದು ನನ್ನ ಹಾರೈಕೆ'.

ಮೊದಲ ಪಂಥಾಹ್ವಾನ

ಅವರ ಮೊದಲ ಪಂಥಾಹ್ವಾನವು (challenge) ಹೊರ ಬಂದುದು 1963 ನೆಯ ಜೂನ್ ತಿಂಗಳಲ್ಲಿ, ಆ ಆಹ್ವಾನವನ್ನು ಎದುರಿಸುವವನು ಮೊದಲು ಒಂದು ಸಾವಿರ ರೂಪಾಯಿಗಳನ್ನು ಕಟ್ಟತಕ್ಕದ್ದು, ಗೆದ್ದಲ್ಲಿ ಆತನಿಗೆ ಸಲ್ಲುವ ಹಣ 25,000-00 ರೂ. ಮತ್ತು ಆತ ಮೊದಲು ಕಟ್ಟಿದ ಮೊಬಲಗು, ಯಾವುದೇ ಅಲೌಕಿಕ ಆಧ್ಯಾತ್ಮಿಕ ಶಕ್ತಿಯ ಮೂಲಕ ಸೀಲು ಮಾಡಿದ ಕವರಿನಲ್ಲಿಟ್ಟ ಕರೆನ್ಸಿ ನೋಟಿನ ಸೀರಿಯಲ್ ನಂಬರನ್ನು ಓದುವುದು. ತಮಗೆ 'ಟೆಲಿಪತಿ' ಸಾಮರ್ಥ್ಯವಿದೆ ಎಂದು ಸಾರುವವರ ಅನುಕೂಲಕ್ಕಾಗಿ ನ್ಯಾಯಾಧೀಶರಲ್ಲೊಬ್ಬರಿಗೆ ನೋಟು ಓದಲು ಅವಕಾಶ ಕೊಡುವುದು. ESP ವಿಚಾರದಲ್ಲಿ ಪ್ರಚಂಡರೆಂದು ಪ್ರಖ್ಯಾತರಾದ ಡ್ಯೂಕ್ ವಿಶ್ವವಿದ್ಯಾಲಯದ ಡಾ. ಜೆ. ಬಿ. ರೈನ್ ಅವರಿಗೆ



ಈ ವಿಶೇಷ ಆಹ್ವಾನ ಕಳಿಸಲಾಗಿತ್ತು. ತಮ್ಮ ವಾಯುಯಾನದ ಖರ್ಚನ್ನೂ ಕಳೆದು ಸಾಕಷ್ಟು ಲಾಭ ಪಡೆಯಲೆಂದು ತಮ್ಮ ವಿದೇಶೀ ಅಲೌಕಿಕ - ಪರಿಣತರ ಅನುಕೂಲಕ್ಕಾಗಿ ಪಂಥಾಹ್ವಾನದ ಮೌಲ್ಯವನ್ನು ಕೋವೂರ್ ಅವರು ಜನವರಿ 1965 ರಲ್ಲಿ ರೂ. 75,000-00 ಏರಿಸಿದರು.

ಇವ ತಪ್ಪಿಸಿಕೊಂಡ – ಅವನಿಗೆ ಧೈರ್ಯವೇ ಬರಲಿಲ್ಲ

1966 ರಲ್ಲಿ ಸಿಲೋನಿನ ಕಲ್ಲಡಿಯಾಸ್ ತಾನು ಸೀಲು ಮಾಡಿದ ಕವರಿನೊಳಗಿಂದ ನೋಟಿನ ನಂಬರನ್ನು ಓದುವುದಾಗಿಯೂ ಆದರೆ, ಪಣವಾಗಿ ಕೊಡಬೇಕಾದ ರೂ. 1,000-00 ತನ್ನ ಸ್ಥಿತಿಗೆ ಕಷ್ಟಕರವೆಂದು ಹೇಳಿದ್ದರಿಂದ ಕೋವೂರರು ಆ ಹಣವನ್ನು ಶೇ. 75ಕ್ಕೆ ಇಳಿಸಿದರು. ಆದರೆ, ಆತ ತಪ್ಪಿಸಿಕೊಂಡನೇ ಹೊರತು ಕೋವೂರರನ್ನು ಎದುರಿಸಲಿಲ್ಲ.

ಪ್ರಾಥಮಿಕ ಹಂತದಲ್ಲಿ ಡಾ. ಕೋವೂರ್ ಅವರು ಯಾರೇ ಆಗಲಿ ಭೂತ ಯಾ ದೆವ್ವವನ್ನು ತೋರಿಸಿದಲ್ಲಿ ತಾನು ರೂ. 5,000-00 ಕೊಡುವುದಾಗಿ ಪಣ ಒಡ್ಡಿದ್ದರು.

ಜ್ಯೋತಿಷ್ಯಶಾಸ್ತ್ರ ಶುದ್ಧ ಮೋಸವೆಂಬುದನ್ನು ಸಾಧಿಸಲು - ಸೆಕೆಂಡ್ ಮಿನಿಟ್‌ಗೆ ಸರಿಯಾಗಿರುವಂತೆ - ಹತ್ತು ಜನರ ಜಾತಕಗಳು (ಅವುಗಳಲ್ಲಿ ಕೆಲವು ಹೆಣ್ಣುಗಳ ಜಾತಕ, ಕೆಲವು ಗಂಡುಗಳದು, ಕೆಲವು ಸತ್ತವರದು) ಕೊಟ್ಟಲ್ಲಿ ಯಾವುದೇ ಜ್ಯೋತಿಷಿಯು - ಸತ್ತವರಾರು. ಇದ್ದವರಾರು, ಹೆಣ್ಣಿನ ಜಾತಕ ಯಾವುದು, ಗಂಡಿನ ಜಾತಕ ಯಾವುದು - ಇಷ್ಟನ್ನು ಶೇ. 5ರಷ್ಟು ತಪ್ಪಿನ ರಿಯಾಯತಿಯೊಂದಿಗೆ ಸರಿಯಾಗಿ ಹೇಳಿದಲ್ಲಿ ಒಂದು ಲಕ್ಷ ಬಹುಮಾನ ಕೊಡುವುದಾಗಿ ಘೋಷಿಸಿದರು. ಬಡ್ತಿ, ಮದುವೆ, ಮಕ್ಕಳೆಷ್ಟು, ಈ ಯಾವುದರ ಬಗ್ಗೆಯೂ ಭವಿಷ್ಯ ಹೇಳುವ ಅಗತ್ಯವಿಲ್ಲ! ಕನಿಷ್ಠ ಇಷ್ಟನ್ನಾದರೂ ಹೇಳುವ ಧೈರ್ಯ ಈ ಜಗತ್ತಿನ ಯಾವುದೇ ಜ್ಯೋತಿಷಿಗೂ ಬರಲಿಲ್ಲ! ಅದೇ ರೀತಿ ಕೋವೂರರು ಹಸ್ತ ಸಾಮುದ್ರಿಕೆಯ ಠಕ್ಕನ್ನು ಬಹಿರಂಗ ಪಡಿಸಲು ಹತ್ತು ಹಸ್ತಗಳ ಅಚ್ಚನ್ನು ಕೊಟ್ಟು ಅದರಲ್ಲಿ ಗಂಡು ಯಾರು, ಹೆಣ್ಣು ಯಾರು, ಸತ್ತವರಾರು, ಇದ್ದವರಾರು - ಇಷ್ಟನ್ನಷ್ಟೇ ಸ್ಪಷ್ಟಪಡಿಸಲು ಹೇಳಿದರು. ಜಗತ್ತಿನ ಯಾವುದೇ ಹಸ್ತ ಸಾಮುದ್ರಿಕತಜ್ಞನೂ ಈ ಪಂಥಾಹ್ವಾನವನ್ನು ಇಂದು ತನಕ ಸ್ವೀಕರಿಸಿಲ್ಲ.

ಇಲ್ಲಿ ಒಂದು ಮುಖ್ಯ ಅಂಶವೆಂದರೆ - ಮೂಲ Deposit 1,000/- ಏಕೆ ಇಡಲಾಗಿದೆಯೆಂದರೆ ಪುಕ್ಕಟೆ ಪ್ರಚಾರಕ್ಕೆ ಧಾವಿಸಿ ಬರುವ ಜನರ ಹಿಂಡಿನಿಂದ ವ್ಯರ್ಥ ಸಮಯ ಹಾಳು ಎಂಬುದರಿಂದ.

ಮಾಟದ ತಾಯತ

ಕೋವೂರರ ಪಂಥಾಹ್ವಾನಕ್ಕೆ ಹಿಂದುಸ್ಥಾನದ ಎರಡು ಪತ್ರಿಕೆಗಳು ಮಾತ್ರ ಮುಂದೆ ಬಂದರೂ ಅಷ್ಟೇ ವೇಗವಾಗಿ ಹಿಂದೆ ಹೋದವು. ಬಿ. ವಿ. ರಾಮನ್ ಮತ್ತು ಕೆಲವು ಜ್ಯೋತಿಷ್ಯಶಾಸ್ತ್ರದ ಪ್ರೊಫೆಸರ್‌ಗಳಿಗೆ ಪ್ರೆಸ್ ಕಟ್ಟಿಂಗ್ಸ್‌ಗಳನ್ನು ಕಳಿಸಲಾಗಿತ್ತು. ಆದರೆ ಇವರ್‍ಯಾರೂ ಈ ಪಂಥಾಹ್ವಾನವನ್ನು ಸ್ವೀಕರಿಸಲು ತಯಾರಾಗಲಿಲ್ಲ. ಕೋವೂರರಿಗೆ ಎಷ್ಟೋ ಯಂತ್ರಗಳು, ಮಂತ್ರಲಿಖಿತ ತಾಯಿತಗಳು ಅಂಚೆಯ ಮೂಲಕ ಕೈ ಸೇರಿದವು. ಅವರೇ ಎನ್ನುವಂತೆ 'ಐವತ್ತಕ್ಕೂ ಮಿಗಿಲಾಗಿ ತಾಮ್ರ, ಬೆಳ್ಳಿಯ 'ಪವಿತ್ರ ಯಂತ್ರಗಳು!? ನನ್ನ ಕೈ ಸೇರಿದವು. ಇಷ್ಟೆಲ್ಲಾ ಮಾಟಗಳಾದರೂ ನಾನು ಸುಖವಾಗಿ ಆರೋಗ್ಯವಾಗಿ ಇದ್ದೇನೆ. ಎಲ್ಲಾ ಮನುಷ್ಯರೂ ಸಾಯುವಂತೆ ಒಂದು ದಿನ ನಾನು ಸತ್ತಾಗ ಈ ಜನ ತಮ್ಮ ಮಂತ್ರಗಳು ನಿಧಾನವಾಗಿ ವರ್ತಿಸಿ ತಾನು ಸತ್ತೇನೆಂದು ಹೇಳಬಹುದು! ಎಂದರು.

ಕೋವೂರ್ ಅವರು 1970 ರಲ್ಲಿ ಕೆಂಡದ ಮೇಲೆ ನಡೆಯುವ ಕಟರಗಾಮ ಭಕ್ತರ ಸಂಘದ ಅಧ್ಯಕ್ಷರಿಗೆ ಉತ್ತರವಾಗಿ - ಬೆಂಕಿಯ ಮೇಲೆ 30 ಸೆಕೆಂಡ್‌ಗಳ ಕಾಲ ತಮ್ಮ ಪಾದಗಳಲ್ಲಿ ಗುಳ್ಳೆ ಬರದೇ ನಿಂತಲ್ಲಿ ತಾನು ಒಂದು ಲಕ್ಷ ರೂ. ಕೊಡುವುದಾಗಿ ಸಾರಿದರು. ಆದರೆ, ಆ ಮನುಷ್ಯನು ಪಂಥಾಹ್ವಾನವನ್ನು ಎದುರಿಸಲು ಮುಂದೆ ಬರಲಿಲ್ಲ.

ಮುಂದುವರಿಯುವುದು

ಜನಶಕ್ತಿ
ಕನ್ನಡ ವಾರಪತ್ರಿಕೆ

ಸಂಪಾದಕೀಯ

ಉಕ್ಕಿ ಹರಿವ ಪ್ರವಾಹವೂ, ಆಳುವವರ ತಾತ್ಸಾರವೂ

ಕೋಸಿ ನದಿ ಎಂಬ ಕಣ್ಣೀರಿನ ಪ್ರವಾಹ ಬಿಹಾರದ ಮಿಲಿಯಾಂತರ ಜನರನ್ನು ಅಂಗೈಯಲ್ಲೇ ಜೀವಹಿಡಿದು ನೀರಿನಲ್ಲಿ ನಿಲ್ಲುವಂತೆ ಮಾಡಿದೆ. ಲಕ್ಷಾಂತರ ಜನ ನಿರಾಶ್ರಿತರಾಗಿ ಅನ್ನ - ನೀರಿಗೆ, ಆಶ್ರಯಕ್ಕೆ ಹಾತೊರೆಯುತ್ತಿದ್ದಾರೆ. ಕೇಂದ್ರ ಒಂದಿಷ್ಟು ನೆರವಿನ ಹಸ್ತ ಚಾಚಿದ್ದರೆ, ನಿತೀಶ್ ಕುಮಾರ್‌ರ ರಾಜ್ಯ ಸರ್ಕಾರ ಕಿರು ಬೆಳಕು ಚಾಚಿದೆ. ಇಂತಹ ದುರಂತದ ನಡುವೆ ಜನ ಕಂಗಾಲಾಗಿರುವಾಗಲೇ ನೆರವಿನ ಹೆಸರಿನಲ್ಲಿ ಕಾಲಿಟ್ಟವರು ಕೈಬಂದಷ್ಟು ಲೂಟಿ ಮಾಡುತ್ತಿರುವ ಅಮಾನವೀಯ ವರದಿಗಳು ಇವೆ. ನೆರೆ, ಬರ, ಭೂಕಂಪನಗಳು ಸಂಭವಿಸಿದಲ್ಲೆಲ್ಲಾ 'ಸೇವೆಯ ಸೋಗಿನ' ವಿವಿಧ ವೇಷಧಾರಿಗಳಿಂದ ಸತತ ಲೂಟಿ, ವಂಚನೆಗಳು, ನಕಾರಾತ್ಮಕ ರಾಜಕಾರಣ ಹಲವು ರೂಪಗಳಲ್ಲಿ ನಡೆಯುತ್ತಲೇ ಇರುತ್ತದೆ. ಇಂತಹದ್ದಕ್ಕೆ ಕಾದು ಕುಳಿತವರಂತೆ ರಣಹದ್ದುಗಳು ಎರಗುತ್ತವೆ. ಆದರೆ ಈ ನಡುವೆಯೇ ಈ ಮಹಾದುರಂತದಿಂದ ನೊಂದು, ದೇಶ-ವಿದೇಶಗಳಾದ್ಯಂತ ಇಲ್ಲಿಯ ಜನರಿಗಾಗಿ ಮಿಡಿದ ಮಾನವೀಯ ಹೃದಯಗಳು, ಚಾಚಿದ ನೆರವಿನ ಹಸ್ತಗಳು ನಿಜಕ್ಕೂ ಅಭಿನಂದನೀಯ.

ಇತ್ತ ಕರ್ನಾಟಕವೂ ಕಳೆದ ತಿಂಗಳಿನಿಂದಲೂ ಸುರಿದ ಸತತ ಮಳೆಗೆ ಸಿಲುಕಿದೆ. ಒಂದೆರಡಲ್ಲ ಸರಿಸುಮಾರು ಒಂಬತ್ತು ಜಿಲ್ಲೆಗಳಲ್ಲಿ 200 ಗ್ರಾಮಗಳು ಪ್ರವಾಹಪೀಡಿತವಾಗಿವೆ. ಅತೀ ವೃಷ್ಟಿಯಿಂದಾಗಿ ಜನ ಜಾನುವಾರುಗಳು ಬಯಲಿಗೆ ನಿಂತಿವೆ. 3000 ಕ್ಕೂ ಅಧಿಕ ಮನೆಗಳು ನಾಶ. ಇದ್ದಬದ್ದ ಆಸ್ತಿಯನ್ನು ಜನ ಕಳೆದುಕೊಂಡಿದ್ದಾರೆ. ಈಗಲೂ ಮುರುಕು ಮನೆಗಳಲ್ಲಿ ಕಾಲ ನೂಕುತ್ತಿದ್ದಾರೆ. ಬೆಳೆ ಹಾನಿಯಾಗಿದೆ . ಹಾಸನದಂತಹ ಒಂದು ಜಿಲ್ಲೆಯಲ್ಲೇ 122 ಕೋಟಿ ರೂಪಾಯಿಗಳಷ್ಟು ಹಾನಿ ಸಂಭವಿಸಿದೆ ಎಂಬ ಅಂದಾಜು ಸನ್ನಿವೇಶದ ಗಂಭೀರತೆಯನ್ನು ತೋರಿಸುತ್ತದೆ.

ಇದು ಗ್ರಾಮಾಂತರ ಕರ್ನಾಟಕದ ಧಾರುಣ ಚಿತ್ರವಾದರೆ, ಬೆಂಗಳೂರಿನಂತಹ ಹೈಟೆಕ್ ಸಿಟಿಯೂ ಮಳೆಯ ದಾಳಿಗೆ ಸಿಲುಕಿರುವುದು ಶೋಚನೀಯ. ಇಲ್ಲಿ ನಿಸರ್ಗದ ಪ್ರಕೋಪಕ್ಕಿಂತ ಆಡಳಿತಗಾರರು, ಭೂದಂಧೆಗಾರರು ಸೃಷ್ಟಿಸಿರುವ ಅವಾಂತರಗಳೇ ಪ್ರಧಾನ. ಏನಿಲ್ಲವೆಂದರೂ ಬೆಂಗಳೂರಿನ 15 ಕ್ಕೂ ಹೆಚ್ಚು ಪ್ರಮುಖ ಬಡಾವಣೆಗಳಲ್ಲಿ ಮಳೆನೀರು ವಸ್ತುಶಃ ಮನೆಗಳೊಳಗೆ ನುಗ್ಗಿದೆ. ಹಲವಾರು ಬಹುಮಹಡಿ ಕಟ್ಟಡಗಳೇ ನಡುನೀರಿನಲ್ಲಿ ನಿಂತಿವೆ. ಇನ್ನು ಸಾಮಾನ್ಯರು ಬದುಕುವ ಸಾಮಾನ್ಯ ಮನೆಗಳು, ಕೊಳಚೆ ಪ್ರದೇಶಗಳು ಅಪಾರ ನಷ್ಟಕ್ಕೆ ಗುರಿಯಾಗಿವೆ. ಇಷ್ಟೆಲ್ಲಾ ದುರಂತಗಳು ನಡೆದರೂ ಮಂತ್ರಿಗಳಾಗಲಿ, ಶಾಸಕರಾಗಲಿ ಸರ್ಕಾರಿ ಆಡಳಿತ ಯಂತ್ರವಾಗಲೀ ಅತ್ಯಗತ್ಯ ಗಮನವನ್ನು ನೀಡಿಯೇ ಇಲ್ಲ. ಪರಿಹಾರದ ತುರ್ತು ಕ್ರಮಗಳನ್ನು ಕೈಗೊಳ್ಳಲೇ ಇಲ್ಲ. ಜನತೆ ನಡುನೀರಿನಲ್ಲಿ ನೆಲ-ಮುಗಿಲು ನೋಡುತ್ತಾ ಆಕ್ರಂದಿಸುತ್ತಿರುವಾಗ ಮುಖ್ಯಮಂತ್ರಿಯವರನ್ನು ಒಳಗೊಂಡು, ಹಲವು ಸಚಿವರು ಸೇರಿ ಒಟ್ಟು 115 ಶಾಸಕರು ಅಮೆರಿಕಾದ ಪ್ರವಾಸದಲ್ಲಿ ಮೈಮರೆತಿದ್ದದ್ದು ಖಂಡನೀಯ. ಅಮೆರಿಕಾದಿಂದ ಬಂದಿಳಿದ ಮುಖ್ಯಮಂತ್ರಿಗಳು ಕೆಲವು ಪ್ರದೇಶಗಳಿಗೆ ಭೇಟಿ ನೀಡಿ ನೆರವಿನ ಮೊತ್ತ ಹೆಚ್ಚಿಸಿರುವುದಾಗಿ ಪ್ರಕಟಿಸಿ ಕೈತೊಳೆದುಕೊಂಡಿದ್ದಾರೆ. ಆದರೆ ಮೂಲತಃ ಈ ಸಮಸ್ಯೆಯ ಉದ್ಭವಕ್ಕೆ ಕಾರಣವಾದ ಸ್ಥಿತಿಯ ಬಗ್ಗೆ ಕಿಂಚಿತ್ತೂ ಯೋಚಿಸಿ, ಕ್ರಮವಹಿಸದಿರುವುದು ಜನವಿರೋಧಿ ತನವನ್ನೇ ತೋರಿಸುತ್ತದೆ.

ಅಲ್ಪಸ್ವಲ್ಪ ಮಳೆಯಾದರೂ ಬೆಂಗಳೂರಿನ ಅನೇಕ ಬೀದಿ-ಬಡಾವಣೆಗಳು ಜಲಾವೃತಗೊಳ್ಳುತ್ತಿವೆ. ಕಳೆದೆರಡು ವರುಷಗಳಿಂದ ಸತತವಾಗಿ ಇದೇ ಸಮಸ್ಯೆ ಸೃಷ್ಟಿಯಾಗುತ್ತಿದ್ದರೂ ಆಡಳಿತ ಹೇಳಿದಂತೆ ನಡೆಯಲೇ ಇಲ್ಲ. ಕ್ರಮವಹಿಸಲಿಲ್ಲ. ಬಹುತೇಕವಾಗಿ ಕೆರೆಗಳು ಮಾಯವಾಗಿವೆ. ಚರಂಡಿ ವ್ಯವಸ್ಥೆಯೂ ಸಮರ್ಪಕವಾಗಿಲ್ಲ. ರಾಜಕಾಲುವೆಗಳನ್ನು ಅಪಾರವಾಗಿ ಒತ್ತುವರಿ ಮಾಡಿಕೊಳ್ಳಲಾಗಿದೆ. ಬೆಂಗಳೂರಿನಲ್ಲಿನ ಭೂ ದಾಹ - ದಂಧೆಯೇ ಈ ಸ್ಥಿತಿಯನ್ನು ನಿರ್ಮಿಸಿದೆ. ಇದನ್ನು ತಡೆಯಬೇಕಾದ ಆಡಳಿತ ಯಂತ್ರ ಅಂತಹ ಅಕ್ರಮಗಳಲ್ಲಿ ಶಾಮೀಲಾಗಿದೆ. ಯಡಿಯೂರಪ್ಪನವರಿಗೆ ಇಚ್ಛಾಶಕ್ತಿ ಇದ್ದರೆ ನೆರವು ಘೋಷಿಸಿ ಮರೆಯಾಗುವ ಬದಲು ನಿಷ್ಠುರ ಕ್ರಮ ವಹಿಸಿ, ದೀರ್ಘಕಾಲಿಕ ಪರಿಹಾರ ರೂಪಿಸಲಿ. ಹಾಗೆಯೇ ರಾಜ್ಯ ಸರ್ಕಾರದ ಕಂದಾಯ ಸಚಿವರು 84 ತಾಲ್ಲೂಕುಗಳಲ್ಲಿ ಬರ ಬಿದ್ದಿರುವುದಾಗಿ ಹೇಳಿ, ಸಾವಿರಾರು ಕೋಟಿಗಳ ಹಾನಿ, ಸಾವಿರಾರು ಕೋಟಿಗಳ ಅಗತ್ಯತೆಯ ಲೆಕ್ಕ ತೋರಿಸಿ ಕಾಗೆ-ಗುಬ್ಬಿಯ ಕಥೆ ಹೇಳುತ್ತಲೇ ಕಾಲ ಹಾಕುತ್ತಿದ್ದಾರೆ.

ಇಂತಹ ನೈಸರ್ಗಿಕ ಪ್ರಕೋಪ, ಹಾನಿ ಸಂದರ್ಭಗಳಲ್ಲಿ ಕೇವಲ ಕೇಂದ್ರದ ನೆರವನ್ನೇ ನಿರೀಕ್ಷಿಸುತ್ತಾ ಕಾಲ ಕಳೆಯುವ ಬದಲು ವಾಸ್ತವವಾಗಿ ಅಂದಾಜಿಸಿ ರಾಜ್ಯ ಸರ್ಕಾರ ತನ್ನ ಪಾಲನ್ನು ಬಿಡುಗಡೆ ಮಾಡಿ ನೆರವಿಗೆ ಧಾವಿಸಬೇಕು. ಇಷ್ಟಾದರೂ ಇನ್ನೂ ಮೀನ-ಮೇಷ ಎಣಿಸಿ, ಕಂತೆ ಪುರಾಣ ಹೇಳುವುದು ಬಿಜೆಪಿ ಸರ್ಕಾರದ ಜನವಿರೋಧಿತನವನ್ನು ತೋರಿಸುತ್ತದೆ. ಇದು ಹೀಗೆ ಮುಂದುವರಿದರೆ ಜನರೂ ಸಹ 'ಕಮಲಧಾರಿ'ಗಳಿಗೆ ಹೊರದಾರಿಯನ್ನು ತೋರಿಸಬೇಕಾಗುತ್ತದೆ.


ಸಂತ್ರಸ್ಥರಿಗೆ ನೆರವು ನೀಡಿ - ಸಂಗ್ರಹಮಾಡಿ

ಬಿಹಾರದಲ್ಲಿ ಪ್ರವಾಹಕ್ಕೆ ಸಿಲುಕಿ ಅನುಭವಿಸುತ್ತಿರುವ ದುರಂತದ ಬಗ್ಗೆ ಹೆಚ್ಚಿಗೆ ಹೇಳಬೇಕಿಲ್ಲ. ಇಂತಹ ಮಹಾದುರಂತದ ಸಂದರ್ಭದಲ್ಲಿ ಎಲ್ಲರೂ ನೆರವಿನ ಹಸ್ತ ಚಾಚುವುದು ತುರ್ತು ಮಾನವೀಯ ಕರ್ತವ್ಯ.

ಇಂತಹ ಜನರಿಗೆ ನೆರವಾಗಲು ಸಿಪಿಐ(ಎಂ) ಕೇಂದ್ರ ಸಮಿತಿ ಉದಾರ ಧನಸಹಾಯ ನೀಡಲು, ಸಂಗ್ರಹಿಸಲು ಮನವಿ ಮಾಡಿದೆ. ಈ ನಿಧಿಯನ್ನು ಸದ್ಬಳಕೆಯಾಗುವಂತೆ ಅಗತ್ಯವಾದ ಎಚ್ಚರ-ಗಮನ ನೀಡಲಿದೆ. ಹಾಗೆಯೇ ತಾವು ಉದಾರ ಧನ ಸಹಾಯ ನೀಡಬೇಕೆಂದು ಜನಶಕ್ತಿ ಸಹ ವಿನಂತಿಸುತ್ತದೆ. ನಿಧಿ ನೀಡಿದವರ ಹೆಸರನ್ನು ಜನಶಕ್ತಿಯಲ್ಲಿ ಪ್ರಕಟಿಸಲಾಗುವುದು.

- ಸಂ.

ಕಾಂಗ್ರೆಸ್‌ಗೆ ಆಪರೇಷನ್ ?



■ ಎಸ್.ವೈ.ಗುರುಶಾಂತ್

ಹಣ, ಅಧಿಕಾರದ ಆಮಿಷವೊಡ್ಡಿ ವಿರೋಧ ಪಕ್ಷಗಳ ಶಾಸಕರನ್ನು ಪಕ್ಷಾಂತರ ಮಾಡಿಸುತ್ತಿರುವ ಅನೈತಿಕ ರಾಜಕಾರಣವನ್ನು 'ಆಪರೇಷನ್ ಕಮಲ' ಯಶಸ್ವಿಯೆಂದೆಲ್ಲಾ ಮುಖ್ಯಮಂತ್ರಿಯಾದಿಯಾಗಿ ನಿರ್ಲಜ್ಜವಾಗಿ ಹೇಳಿಕೊಂಡು ತಿರುಗುತ್ತಿದ್ದಾರೆ. ಸರ್ಕಾರ ರಚನೆಗೆ ಕಾರಣವಾಗಿರುವ ಪಕ್ಷೇತರರ ಮೇಲಿನ ಅನುಮಾನ, ಬಿಜೆಪಿಯೊಳಗಿನ ಅಧಿಕಾರದಾಹ - ಬಂಡಾಯದ ಬೆದರಿಕೆ ಇತ್ಯಾದಿಗಳು 'ಕಮಲ'ದ ಕಸರತ್ತಿಗೆ ಕಾರಣಗಳೆಂದು ಹೇಳಲಾಗುತ್ತಿದೆ. ನೂರು ದಿನಗಳ ಆಡಳಿತದ ಸಂಭ್ರಮದ ಸಿದ್ಧತೆಯಲ್ಲಿರುವಾಗಲೇ ರಾಜ್ಯದ ಜನತೆ ಈ ಕಮಲಧಾರಿಗಳ ಆಡಳಿತದಡಿ ನಲುಗುತ್ತಿದ್ದಾರೆ. ಅಪಾರ ಸಂಕಷ್ಟಗಳನ್ನು ಅನುಭವಿಸುತ್ತಿದ್ದಾರೆ. ಬರ - ನೆರೆ ಹಾವಳಿಗೂ ಜನರನ್ನು ಕೇಳುವವರೇ ಇಲ್ಲ. ಕೋಮುದ್ವೇಷದ ಕೃತ್ಯಗಳ ಸರಣಿ ನಡೆದೇ ಇದೆ.

ಪರಿಸ್ಥಿತಿ ಹೀಗಿರುವಾಗ 'ಅಧಿಕೃತ' ವಿರೋಧ ಪಕ್ಷ ಏನು ಮಾಡುತ್ತಿದೆ? ಸರ್ಕಾರದ ಪ್ರತಿ ಹೆಜ್ಜೆಗಳನ್ನು ಸೂಕ್ಷ್ಮವಾಗಿ ಗಮನಿಸಿ, ಅದಕ್ಕೆ ತಕ್ಕ ಪ್ರತಿಕ್ರಿಯೆ, ಪ್ರತಿರೋಧ ನೀಡಬೇಕಾದ ವಿರೋಧ ಪಕ್ಷ ಜನರ ಕಷ್ಟಗಳೆದುರು ಹಾಸಿ ಹೊದ್ದಂತೆ ಮಲಗಿದೆ ಎನಿಸುತ್ತಿದೆ. ಆಗೀಗ ಕೆಲವು ನಾಯಕರ ಧ್ವನಿ ಕೇಳಿಸುವುದು ಪತ್ರಿಕೆ, ಟಿ.ವಿ. ಗಳಲ್ಲಿ ಮಾತ್ರ. ರಾಜ್ಯದ - ಕೇಂದ್ರದ ಅಧಿಕಾರ ಹಿಡಿಯುವುದಾಗಿ ದಿನವೂ ಜಪಿಸುವ ನಾಯಕರು, ಇಷ್ಟರಿಂದಲೇ ಗೆಲುವು ಸಾಧಿಸಬಲ್ಲರೇ? ಒಟ್ಟಾರೆ ನಡೆ-ನುಡಿಗಳನ್ನು ಗಮನಿಸಿದರೆ ಜನರಿಂದ ಇನ್ನೂ ಒಂದಿಷ್ಟು ಮಾರುದೂರ ಹೋಗುತ್ತಿರುವುದು ಗೋಚರವಾಗುತ್ತದೆ.

ರಾಜಕೀಯವಾಗಿಯೂ ಕಾಂಗ್ರೆಸ್ ಸಕ್ರಿಯವಾಗಿಲ್ಲ. ತಮ್ಮ ಪಕ್ಷದ ಶಾಸಕರನ್ನೇ 'ಆಪರೇಷನ್ ಕಮಲ' ಅಪಹರಿಸಿದಾಗ ಅದನ್ನು ತಡೆಯಲು ಏನೂ ಮಾಡದೆ ಶಾಸ್ತ್ರಕ್ಕಷ್ಟೇ ನಾಲ್ಕು ಮಾತನಾಡಿ ಹೋಗುವವರು ಬೇಕಾದರೆ ಹೋಗಲಿ ಎಂದು ಕೈ ಕಟ್ಟಿ ಕುಳಿತಿದೆ. ಪ್ರತಿಭಟನೆ-ಜನರ ನಡುವಿನಿಂದ ಹೊರಹೊಮ್ಮಿಸಲೇ ಇಲ್ಲ. ಅಧಿಕಾರ ಗಳಿಕೆಗೆ ಯಾವ ದೋಣಿಯಾದರೇನು, ಎಂತಹ ಆಮಿಷಗಳಾದರೇನು ಎಂಬ ಪ್ರವೃತ್ತಿ ಅದೇ ಮಾನದಂಡವಾಗಿ ಬಿಟ್ಟಿರುವ ಇಂತಹ ಪಕ್ಷಗಳಿಂದ ಹೆಚ್ಚಿನದನ್ನು ನಿರೀಕ್ಷಿಸುವುದೂ ಕಷ್ಟ.

ಆದರೆ ಆಶ್ಚರ್ಯಕರವೆಂಬಂತೆ ಮಾಜಿ ಮುಖ್ಯಮಂತ್ರಿ ವೀರಪ್ಪ ಮೊಯ್ಲಿ ತಾವೂ ಕೂಡಾ 'ಆಪರೇಷನ್ ಕೈ' ಆರಂಭಿಸುವುದಾಗಿಯೂ, ಅದರಿಂದ 'ಆಪರೇಷನ್ ಕಮಲ' ದ ಸದ್ದು ಅಡಗಿಸಿ ಬಿಡುವುದಾಗಿ ಹೇಳಿರುವುದು ಊರು ಕೊಳ್ಳೆ ಹೋದ ಮೇಲೆ ಅಗಸೆ ಬಾಗಿಲು ಹಾಕಿದರು ಎಂಬಂತಿದೆ. ಆಪರೇಷನ್ ಕೈ ಯ ಸ್ವರೂಪವೇನು? ಬೇರೆ ಪಕ್ಷಗಳ ಶಾಸಕರ ಖರೀದಿಯೋ, ಆಮಿಷಗಳ ಸೆಳೆತವೇ... ವೊಯ್ಲಿಗೇ ಸ್ಪಷ್ಟವಿಲ್ಲ. ಜನರನ್ನು ಜಾಗೃತಗೊಳಿಸಿ ಕೈ ಬಲಪಡಿಸುವುದಾಗಿ ಹೇಳಿದ ಹೇಳಿಕೆಯೂ ತೂರಿಬಂದ ಪ್ರಶ್ನೆಗೆ ನೀಡಿದ ಹಾರಿಕೆಯ ಉತ್ತರವಷ್ಟೇ. ಸಂಘಟನಾತ್ಮಕವಾಗಿ ಬಲಗೊಳ್ಳುವ ಅವರ ಹೇಳಿಕೆಯೂ ಈಗಾಗಲೇ ಗುಂಪುಗಾರಿಕೆ, ವ್ಯಕ್ತಿಗತ ಪ್ರತಿಷ್ಠೆ, ಅಧಿಕಾರ ಲಾಲಸೆಗಳಿಂದ ಬಿರಿಯುತ್ತಿರುವ ಕಾಂಗ್ರೆಸ್‌ನಲ್ಲಿ ಹೆಚ್ಚಿನದೇನನ್ನು ನಿರೀಕ್ಷಿಸಲಾದೀತು.

ಇದೀಗ ಎಲ್ಲಾ ನಾಯಕರೂ ದೆಹಲಿಯಲ್ಲೇ ಬೀಡು ಬಿಟ್ಟಿದ್ದಾರೆ. ಕರ್ನಾಟಕ ಪ್ರದೇಶ ಕಾಂಗ್ರೆಸ್‌ನ ಅಧ್ಯಕ್ಷರು ಯಾರಾಗಬೇಕು ಎಂಬುದು ದೆಹಲಿಯಲ್ಲಿ ನಡೆಯುತ್ತಿರುವ 'ಪರೀಕ್ಷೆ'. ಅಧ್ಯಕ್ಷರ ಆಯ್ಕೆಗೆ ಜಾತಿ-ಹಣ, ಬೆಂಬಲಿಗ ಪ್ರಭಾವ, ಮಾತು ಕೇಳುವವರು ಇಂತಹ ಅರ್ಹತೆಗಳ ಮಾನದಂಡದಲ್ಲಿ ಮೌಲ್ಯಮಾಪನ ನಡೆಯುತ್ತಿದೆ. ಬಂಡಾಯದ ಬೆದರಿಕೆಯ ಶಮನವೂ ಒಂದು ಮಹತ್ವದ ಮೌಲ್ಯವೆಂದು ಹೇಳಲಾಗುತ್ತಿದೆ. ಮೂಲ ನಿವಾಸಿಗಳು - ವಲಸಿಗರು ಎಂಬುದು ನೂರಾರು ಇತಿಹಾಸವುಳ್ಳ ಕಾಂಗ್ರೆಸ್‌ನಲ್ಲಿ ಒಂದು ಪ್ರಬಲ ವಾದವಾಗಿದೆ. ಕಾಂಗ್ರೆಸ್‌ಗೆ ಎಂತಹ, ಯಾರು ಅಧ್ಯಕ್ಷರಿರಬೇಕು, ಸಿದ್ಧರಾಮಯ್ಯನವರೇ, ದೇಶಪಾಂಡೆಯವರೇ, ಜಾಫರ್‌ಶರೀಫ್‌ರೇ ಎಂಬುದು ಆ ಪಕ್ಷದ ಪೂರ್ಣ ಆಂತರಿಕ ವಿಚಾರ. ಆದರೆ ಇಂತಹ ಕಸರತ್ತುಗಳು ಒಂದು ಸ್ಪಷ್ಟ ರಾಜಕೀಯ ಗುರಿ. ಪಕ್ಷದೊಳಗೆ ಆಂತರಿಕ ಐಕ್ಯತೆಯನ್ನು ತರಬಲ್ಲವೇ? ಯಾಕೆಂದರೆ ಇವಲ್ಲದೇ ಅವರು ಜನರಿಗೆ ಪರಿಹಾರ ತೋರಿಸುವುದಾದರೂ ಹೇಗೆ? ರಾಜಕೀಯ ಹೋರಾಟವಾದರೂ ಹೇಗೆ ಸಾಧ್ಯ?

ಇತ್ತೀಚೆಗೆ ಕಾಂಗ್ರೆಸ್‌ನ ಹಿರಿಯ ನಾಯಕರೊಬ್ಬರು ಖಾಸಗಿಯಾಗಿ ಹೇಳಿದ ಮಾತುಗಳು ಅರ್ಥಗರ್ಭಿತ " ಇನ್ನೇನು ಆರು ತಿಂಗಳಲ್ಲಿ ಪಾರ್ಲಿಮೆಂಟ್‌ಗೂ, ಹಲವು ರಾಜ್ಯಗಳ ಸದನಗಳಿಗೂ ಚುನಾವಣೆಗಳು ನಡೆಯಲಿವೆ. ಆದರೆ ನಮ್ಮ ನಾಯಕತ್ವಕ್ಕೆ ಇವುಗಳ ಪರಿವೆಯೇ ಇನ್ನೂ ಮೂಡಿಲ್ಲ. ಪ್ರತಿದಿನ ಪ್ರತಿ ಗಂಟೆಗಳನ್ನು ಚುನಾವಣೆ ಎದುರಿಸಲು ಮಾಡಬೇಕಾದ ಸಿದ್ಧತೆಗೆ ಮೀಸಲಿಡದೇ ಯಾತ್ರೆಗಳಲ್ಲಿಯೇ ಮಗ್ನರಾಗಿದ್ದಾರೆ!. ಯಾರು ಇವರನ್ನು ಕಾಪಾಡುವವರು!" ಹೇಳಿದ ಮಾತುಗಳಲ್ಲಿ

ಪುಟ 6 ಕ್ಕೆ

ಚುಚ್ಚುಮದ್ದು

ಗೋದಾನ, ಭೂದಾನಗಳ ಪರಿ

■ "ಚಿಕ್ಕಮಗಳೂರು ಜಿಲ್ಲೆಯ ಅಜ್ಜಂಪುರದ ಅಮೃತಮಹಲ್ ಗೋತಳಿ ಕೇಂದ್ರವನ್ನು ರಾಮಚಂದ್ರಾಪುರ ಮಠಕ್ಕೆ ವಹಿಸುವ ಬಗ್ಗೆ ಕಾನೂನು ಹಾಗೂ ಕಂದಾಯ ಇಲಾಖೆಯ ಅಭಿಪ್ರಾಯ ಪಡೆದು ಮುಖ್ಯಮಂತ್ರಿಗಳ ಜೊತೆ ಚರ್ಚೆ ನಡೆಸಿ ಅಂತಿಮ ತೀರ್ಮಾನ ತೆಗೆದುಕೊಳ್ಳಲಾಗುವುದು.

600 ಎಕರೆ ಸರ್ಕಾರಿ ಭೂಮಿಯನ್ನು ಹೊಂದಿರುವ ಕೇಂದ್ರವು ಪಶುಸಂಗೋಪನಾ ಇಲಾಖೆಯ ವಶದಲ್ಲಿದೆ. ಇದರಲ್ಲಿ ಸಾಮಾಜಿಕ ಅರಣ್ಯ ಮತ್ತು ಗೋಮಾಳ ಜಮೀನು ಸಹ ಸೇರಿದೆ.

– ಪಶುಸಂಗೋಪನಾ ಸಚಿವ ರೇವುನಾಯಕ್

→ ಜನರ ಆಸ್ತಿ ತಾನೆ ಕೊಡಿ ಕೊಡಿ

★

ಖಜಾನೆ ಖಾಲಿ

■ "ನನ್ನ ಖಜಾನೆ ಖಾಲಿ ಆಗಿದೆ. ಸ್ವಲ್ಪ ಸಹಕರಿಸಿ. ನನಗೆ ಸ್ವಲ್ಪ ಅವಕಾಶ ಕೊಡಿ. ನಂತರ ಸಮಸ್ಯೆಯನ್ನು ಬಗೆಹರಿಸುವ. ಶಿಕ್ಷಕರಿಗೆ ಪ್ರತ್ಯೇಕ ವಿಶ್ವವಿದ್ಯಾಲಯ ಸ್ಥಾಪಿಸುವ ಕುರಿತು ಉದ್ಯಮಿ ಅಜೀಜ್ ಪ್ರೇಮಜಿ ಅವರು ಚಿಂತನೆ ನಡೆಸಿದ್ದಾರೆ. ಅದಕ್ಕೆ ಬೇಕಾದ ಸಹಕಾರವನ್ನು ಸರ್ಕಾರ ನೀಡಲು ಸಿದ್ಧವಿದೆ."

– ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ

ರಾಜ್ಯಮಟ್ಟದ ಶಿಕ್ಷಕರ ದಿನಾಚರಣೆ ಮತ್ತು ರಾಜ್ಯ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ .

→ ಅಂದ್ರೇನು? ಶಿಕ್ಷಕರ ಸಂಬಳ ಇನ್ನಷ್ಟು ವಿಳಂಬ ಆಗುತ್ತೆ ಅಂತಾನಾ?

★

'ಸ್ನೇಹಕೂಟ'

■ ಮುಂಬರುವ ಲೋಕಸಭಾ ಚುನಾವಣೆಯಲ್ಲಿ ಸಮಾಜವಾದಿ ಪಕ್ಷವು (ಎಸ್‌ಪಿ) ಉತ್ತರ ಪ್ರದೇಶದಲ್ಲಿ ಕಾಂಗ್ರೆಸ್‌ಗೆ ಕೇವಲ 15 ಸ್ಥಾನಗಳನ್ನಷ್ಟೇ ಬಿಟ್ಟುಕೊಡಲಿದೆ. 'ಸ್ನೇಹ ಸ್ಪರ್ಧೆ'ಗೆ ಅವಕಾಶವೇ ಇಲ್ಲ.

– ಅಮರ್ ಸಿಂಗ್, ಪ್ರಧಾನ ಕಾರ್ಯದರ್ಶಿ, ಸಮಾಜವಾದಿಪಕ್ಷ

→ ಓಹೋ ಅಣು ಒಪ್ಪಂದದ ಸಂದರ್ಭದಲ್ಲಿ ಚಿಗುರಿದ ಸ್ನೇಹ, ಹೀಗೆ ಮುಂದುವರಿದಿದೆ.

★

ಕ್ರಮ ಖಚಿತ

■ ಕಾನೂನುಬಾಹಿರವಾಗಿ ಶಾಲೆಗಳಿಗೆ ರಜೆ ಘೋಷಿಸಿದ ಕ್ರೈಸ್ತ ಶಾಲೆಗಳ ವಿರುದ್ಧ ಕ್ರಮ ತೆಗೆದುಕೊಳ್ಳುವುದು ಖಚಿತ. ಈ ಬಗ್ಗೆ ಕ್ರಮ ತೆಗೆದುಕೊಳ್ಳುವಂತೆ ಡಿಡಿಪಿಐ ಹಾಗೂ ಬಿಇಓಗೆ ಸೂಚಿಸಲಾಗಿದೆ.

– ವಿಶ್ವೇಶ್ವರ ಹೆಗಡೆ ಕಾಗೇರಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು

→ ಬಸ್‌ಗಳನ್ನು,ಜನಗಳನ್ನು ಬಿಟ್ಟವರನ್ನೆಲ್ಲಾ ಹಾಗೆ ಬಿಟ್ಟಿರಲ್ಲ!

★

ರಮ್ ಕುಡಿಯಿರಿ...(?!)

■ "ಸಾರಾಯಿ ನಂತರ ರಾಜ್ಯ ಸರ್ಕಾರ ಬಿಯರ್ ನಿಷೇಧ ಮಾಡಲು ಚಿಂತಿಸುತ್ತಿದೆ. ಸಾರಾಯಿ ನಿಷೇಧಿಸಿದಾಗ ಸರ್ಕಾರಕ್ಕೆ ಆದಾಯ ಖೋತಾ ಆಗಲಿದೆ ಎಂದು ಕೆಲವರು ಆತಂಕ ವ್ಯಕ್ತಪಡಿಸಿದ್ದರು. ಆದರೆ ಹಾಗೇನೂ ಆಗಲಿಲ್ಲ. ಇನ್ನೂ ಹೆಚ್ಚು ಆದಾಯ ಬರುತ್ತಿದೆ."

– ರಾಮಚಂದ್ರೇಗೌಡ, ವೈದ್ಯಕೀಯ ಶಿಕ್ಷಣ ಸಚಿವ

→ ಅಂದ್ರೆ ಸರಾಯಿ ಇಲ್ಲ. ಕಡಿಮೆ ಆಲ್ಕೋಹಾಲ್ ಇರುವ ಬಿಯರ್ ಇಲ್ಲ. ಎಲ್ಲರೂ ರಮ್, ವಿಸ್ಕಿ, ವೈನ್ , ಕುಡಿಯಿರಿ ಅಂತಲಾ?

★

■ "ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಈವರೆಗೆ ಆರು ಲಕ್ಷಕ್ಕೂ ಹೆಚ್ಚು ಅನರ್ಹ ಬಿಪಿಎಲ್ ಪಡಿತರ ಚೀಟಿದಾರರನ್ನು ಪತ್ತೆ ಹಚ್ಚಲಾಗಿದೆ. ಈ ಸಂಖ್ಯೆ ಹತ್ತು ಲಕ್ಷದ ಗಡಿ ದಾಟುವ ನಿರೀಕ್ಷೆಯಿದೆ. ಮೂರು ತಿಂಗಳ ಒಳಗಾಗಿ ಎಲ್ಲಾ ಅನರ್ಹ ಬಿಪಿಎಲ್ ಕಾರ್ಡ್‌ಗಳನ್ನು ರದ್ದುಗೊಳಿಸಲಾಗುವುದು."

– ಎಚ್.ವಿಶ್ವನಾಥ್, ಆಹಾರ ಮತ್ತು ನಾಗರಿಕ ಪೂರೈಕೆ ಸಚಿವ

→ ಸೈಕಲ್, ಹಳೇ ಟಿವಿ ಇದ್ದವರೆಲ್ಲಾ ಶ್ರೀಮಂತರು ಅಂತಾದರೆ ಇನ್ನೇನಾಗುತ್ತೇ?

★

■ "ಒರಿಸ್ಸಾದಲ್ಲಿ ಕ್ರೈಸ್ತರ ಮೇಲೆ ದೌರ್ಜನ್ಯ ಖಂಡಿಸಿ ಶಾಲಾ ಕಾಲೇಜುಗಳನ್ನು ಮುಚ್ಚಿದ ಕ್ರೈಸ್ತ ಶಿಕ್ಷಣ ಸಂಸ್ಥೆಗಳಿಗೆ ನೋಟಿಸ್ ಜಾರಿ ಮಾಡುವುದಾಗಿ ಹೇಳಿರುವುದು ಪ್ರಜಾಪ್ರಭುತ್ವ ವಿರೋಧಿ ಹಾಗೂ ಒಂದು ಧರ್ಮದ ವಿರುದ್ಧದ ಸೇಡಿನ ಕ್ರಮವಾಗಿದೆ."

– ಎಚ್.ಟಿ. ಸಾಂಗ್ಲಿಯಾನ, ಸಂಸದ

→ ಸಂಘ ಪರಿವಾರ ಅಂದ್ರೇನು ಈಗ ತಿಳಿತಾ ಇದೆ ಅಲ್ವಾ?

ಧರ್ಮರಾಯರೂ - ಮನಮೋಹನ ಸಿಂಗರೂ

ನಮ್ಮ ಪ್ರಧಾನ ಮಂತ್ರಿ ಸನ್ಮಾನ್ಯ ಸರ್ದಾರ್‌ಜಿಯವರಾದ ಮನಮೋಹನ ಸಿಂಗ್‌ರವರನ್ನು ಸ್ವಲ್ಪ ಮಟ್ಟಿಗೆ ಮಹಾಭಾರತದ ಧರ್ಮರಾಯನಿಗೆ ಹೋಲಿಸಬಹುದು. ಧರ್ಮರಾಯ 'ಅಶ್ವತ್ಥಾಮೋ ಹತಃ, ಕುಂಜರಃ' ಎಂದು ಹೇಳಿದ್ದರಿಂದ ನರಕದ ಹಾದಿಯಲ್ಲಿ ಹಾದು ಸ್ವರ್ಗಕ್ಕೆ ಹೋಗಬೇಕಾಯಿತು. ಆದರೆ ನಮ್ಮ ಮನಮೋಹನ ರಾಯರು ಅಮೆರಿಕವನ್ನು ನಂಬಿ ನಮ್ಮ ಸಂಸತ್ತಿಗೇ ಎಂದರೆ ಇಡೀ ದೇಶಕ್ಕೇ ಸುಳ್ಳು ಹೇಳಿದರು. ಇದರಿಂದ ಅವರು ಸ್ವರ್ಗಕ್ಕೆ ಹೋಗುವಾಗ ನರಕದ ಹಾದಿಯಲ್ಲಿ ಹೋಗಬೇಕಾಗ ಬಹುದೋ ಇಲ್ಲವೋ ತಿಳಿದಿಲ್ಲ. ಆದರೆ ಈ ಮನಮೋಹನರಾಯರಿಂದ ಇಡೀ ದೇಶವೇ ನರಕವಾಗಿರುವುದಂತೂ ಖರೆ. ಇವರು ಅಣು ಬಾಂಬ್ ಪ್ರಯೋಗಿಸುತ್ತಾರೋ ಇಲ್ಲವೋ ತಿಳಿದಿಲ್ಲ. ಆದರೆ ಸುಳ್ಳಿನ ಬಾಂಬನ್ನಂತೂ ಭರ್ಜರಿಯಾಗೇ ಸಿಡಿಸಿದ್ದಾರೆ. ಆ ಬಾಂಬಿನ ಗಬ್ಬು ವಾಸನೆ ತಾಳಲಾರದೆ ಎಡಪಕ್ಷಗಳು ದೂರ ಸರಿಯಬೇಕಾಯಿತು.

ಈಗ ಇಷ್ಟು ದಿನ ಬಹಳ ಕಷ್ಟದಿಂದ ತಡೆ ಹಿಡಿದಿದ್ದ ಮನೆ (ದೇಶ) ಹಾಳು ಆರ್ಥಿಕ ನೀತಿಗಳನ್ನು ಜಾರಿಗೆ ತರಲು ಈಗ ತರಾತುರಿಯಿಂದ ತಯಾರಿ ನಡೆಸಿದ್ದಾರೆ. ಇದನ್ನು ನೋಡಿದರೆ ಮತ್ತೆ ಧರ್ಮರಾಯನದ್ದೇ ನೆನಪಾಗುತ್ತದೆ. ಧರ್ಮರಾಯ ಜೂಜಾಡಿ ಜೂಜಾಡಿ ತನ್ನ ರಾಜ್ಯ ಕೋಶ, ಕಡೆಗೆ ತನ್ನ ತಮ್ಮಂದಿರು, ಹೆಂಡತಿ ಎಲ್ಲವನ್ನೂ ಪಣಕ್ಕಿಟ್ಟು ಕಳೆದುಕೊಂಡು ಕಡೆಗೆ ವನವಾಸಕ್ಕೆ ಹೋದ. ಹೀಗೇ ನಮ್ಮ ಮನಮೋಹನರಾಯರು ಆರ್ಥಿಕ ಸುಧಾರಣೆ ಹೆಸರಿನಲ್ಲಿ ದೇಶವನ್ನೇ ಪಣಕ್ಕಿಟ್ಟು ಸೋತಿದ್ದರೂ 'ದೇಶದ ಒಳಿತಿಗೇ ಹೀಗೆ ಮಾಡುತ್ತಿದ್ದೇವೆ' ಅಂತ ಇನ್ನೂ ಸುಳ್ಳನ್ನೇ ಹೇಳುತ್ತಿದ್ದಾರೆ. ಧರ್ಮರಾಯರಿಗೂ ಮನಮೋಹನ ರಾಯರಿಗೂ ವ್ಯತ್ಯಾಸವೆಂದರೆ, ಮೋಹನ ರಾಯರು ದೇಶವನ್ನೇ ಪಣಕ್ಕಿಟ್ಟು ಸೋತಿದ್ದರೂ ವನವಾಸಕ್ಕೆ ಹೋಗಬೇಕಾಗಿಲ್ಲ. ವಿಶ್ವ ಸಂಸ್ಥೆ/ಬ್ಯಾಂಕ್ ನ ಉನ್ನತ ಹುದ್ದೆಯೋ ವಿಶ್ವದ ಉನ್ನತ ಪ್ರಶಸ್ತಿಯೋ ದೊರೆಯಬಹುದು. ಹೀಗೆ ಮನಮೋಹನ ರಾಯರನ್ನು ಧರ್ಮರಾಯನಿಗೆ ಹೋಲಿಸಿದರೆ , ಬೀ ಜೇ ಪಿ ಯವರಿಗೆ ಕೋಪ ಬರಬಹುದು. ನಾವೇನು ಕೌರವರೇನ್ರೀ? ಅಂತ ತಕರಾರೆತ್ತಿ ಪ್ರತಿಭಟನೆ ಮಾಡಬಹುದು. ಇಲ್ಲ ಸ್ವಾಮಿ ಖಂಡಿತಾ ಇಲ್ಲ , ದಯವಿಟ್ಟು ಅಪಾರ್ಥ ಮಾಡಿಕೊಳ್ಳಬೇಡಿ. ಮನಮೋಹನರಾಯರು ಯಾವ ಅರ್ಥದಲ್ಲಿ ಧರ್ಮರಾಯರೋ ನೀವೂ ಅದೇ ಅರ್ಥದಲ್ಲಿ ಧರ್ಮರಾಯರೇ.! ಯಾವುದರಲ್ಲಿಯೂ ಕಡಿಮೆಯಿಲ್ಲ ಅವರಿಗಿಂತಲೂ ಒಂದು ಕೈ ಮೇಲೆ !

- ★ -

ಕ್ರೈಸ್ತ ಶಾಲೆಗಳು ಶಾಂತಿಯುತವಾಗಿ ಒಂದು ದಿನ ರಜೆ ಘೋಷಿಸಿದ್ದಕ್ಕೆ ಸರ್ಕಾರ ಅವಂಗೆ ನೋಟೀಸ್ ನೀಡಿದೆ. ಯಾವುದೋ ರಾಜ್ಯದಲ್ಲಿ ಏನೋ ಆಗಿದ್ದಕ್ಕೆ ಇಲ್ಲಿ ಪ್ರತಿಭಟನೆ ಮಾಡುವುದು ತಪ್ಪು ಎಂದೂ, ಪ್ರತಿಭಟನೆ ಮಾಡುವುದಕ್ಕೆ ಅನುಮತಿ ಪಡೆದಿಲ್ಲ ಎಂದು ನಮ್ಮ ಘನ ಸರ್ಕಾರ ರಾಜಾಜ್ಞೆ ಹೊರಡಿಸಿದೆ. ಅವರ ಶಾಂತಿಯುತ ಪ್ರತಿಭಟನೆಗೆ ವಿರುದ್ಧವಾಗಿ ಭಜರಂಗಿಗಳು ಉಗ್ರ ಪ್ರತಿಭಟನೆ ಮಾಡಿದ್ದಾರೆ. ಇತ್ತೀಚೆಗೆ ಇವರೇ ಅದಾವುದೋ ರಾಜ್ಯದ ತುಂಡು ಭೂಮಿಗಾಗಿ ಇಡೀ ದೇಶದಲ್ಲೇ ಬಂದ್ ಆಚರಿಸಿದ್ದನ್ನೂ ಇನ್ನು ನಡೆಯುತ್ತಿರುವ ಹಿಂಸಾಚಾರವನ್ನೂ ತಮ್ಮ ಹಕ್ಕು ಮಾತ್ರ ಅಂತ ಭಾವಿಸಿದ್ದಾರೆ. ಬೀದಿ ಬೀದಿಯಲ್ಲಿ ಗಣೇಶನ ಹೆಸರಿನಲ್ಲಿ ಸುಲಿಗೆ, ಶಬ್ದ ಮಾಲಿನ್ಯ, ಸಂಚಾರಕ್ಕೆ ತೊಂದರೆ, ಇವುಗಳಿಗೆ ಅನುಮತಿ ಬೇಕಿಲ್ಲ ಅಂತ ಅಪ್ಪಣೆ ಕೊಡಿಸಿದ್ದಾರೆ.(ಆದರೆ ಶಾಂತಿಯುತ ಪ್ರತಿಭಟನೆಗೆ ಅನುಮತಿ ಬೇಕು!) ಇದನ್ನೆಲ್ಲ ನೋಡಿ, ತನ್ನ ಸಂತತಿ ಹೀಗೆ ಸಹಸ್ರ ಸಹಸ್ರವಾಗಿ ನನಗಿಂತಾ ಸಮರ್ಥ ರೀತಿಯಲ್ಲಿ ಸರ್ವಾಧಿಕಾರ ನಡೆಸುತ್ತಿರುವ ತನ್ನ ವಾರಸುದಾರರ ಬಗ್ಗೆ ದಿವಂಗತ ಸನ್ಮಾನ್ಯ ಶ್ರೀ ಹಿಟ್ಲರ್ ಮಹಾಶಯರು ಬಹಳ ಸಂತಸ ಹೊಂದಿರಬಹುದು.

- ★ -

ಬೆಂಗಳೂರಿನಲ್ಲಿ ನಿರ್ದಿಷ್ಟ ಸ್ಥಳದಲ್ಲಿ ಕೇವಲ ಹತ್ತು ನಿಮಿಷ ಮಾತ್ರ ಪ್ರತಿಭಟನೆ ನಡೆಸಬಹುದು ಎಂದು ಪೋಲೀಸ್ ಮಾವನವರು ಹೇಳಿದ್ದಾರೆ.

ಅದೂ ಜಾಸ್ತಿಯಾಯಿತು ಬಿಡ್ರೀ, ಶೋಕದ ಎರಡು ನಿಮಿಷ ಮೌನದ ಹಾಗೆ ಒಂದೆರಡು ನಿಮಿಷ ಸಾಕು. ಇನ್ನು ಮುಂದೆ ಶಾಂತಿ ಪ್ರಿಯರಾರೂ ರಸ್ತೆಗೆ ಬರಬಾರದು. ತಮ್ಮ ತಮ್ಮ ಮನೆಗಳಲ್ಲಿ (ಮನೆ ಇದ್ದರೆ) ಎರಡು ನಿಮಿಷ ಪ್ರತಿಭಟನೆ ಮಾಡಲು ಅನುಮತಿ ನೀಡಲಾಗಿದೆ. ಪ್ರಸ್ತುತ ಆಳುವ ಪಕ್ಷದವರೂ ಹಾಗೂ ನಿರ್ದಿಷ್ಟ ಪರಿವಾರದವರು ಮಾತ್ರ ಯಾವರೀತಿಯ ಪ್ರತಿಭಟನೆ ಬೇಕಾದರೂ ಮಾಡಬಹುದು, ಸಾರ್ವಜನಿಕ ಆಸ್ತಿ ಪಾಸ್ತಿಗಳಿಗೆ ಕಲ್ಲು ತೂರುವುದು, ಬೆಂಕಿಹಚ್ಚುವುದು ಏನು ಬೇಕಾದರೂ ಮಾಡಬಹುದು ಎಂದು ಆದೇಶವನ್ನು ಹೊರಡಿಸಿಬಿಡಿ.

ಶ್ರೀ

ಆಗಸ್ಟ್ 20 ರ ಮುಷ್ಕರಕ್ಕೆ ಮುನ್ನ ನಾಗನಾಥಪುರ ಬಾಷ್ ಕಂಪನಿಯ ಗುತ್ತಿಗೆ ಕಾರ್ಮಿಕರ ಗೇಟ್ ಮೀಟಿಂಗ್ ಮುಗಿಸಿ, ನೂರಾರು ಕಾರ್ಮಿಕರು ಬ್ಯಾನರ್ ಬಾವುಟಗಳೊಂದಿಗೆ ಕರಪತ್ರ ಹಂಚುತ್ತಾ, ಘೋಷಣೆಗಳೊಂದಿಗೆ ಮೆರವಣಿಗೆಗೆ ಹೊರಟವರನ್ನು ಮಧ್ಯೆದಲ್ಲೆ ಸಮವಸ್ತ್ರ ರಹಿತ ಪೋಲೀಸ್ ಒಬ್ಬ ತಡೆದ. ಮೆರವಣಿಗೆ ಅನುಮತಿ ಇಲ್ಲ, ಘೋಷಣೆ ಕೂಗುವಂತಿಲ್ಲ ಎಂದು ಗದರಿದ. ನಾವು ಮಾಡೇ ತೀರುತ್ತೇವೆ... ಎಂದಾಗ, "ಮಾಡಿ, ಮಾಡಿ. ಗೊತ್ತಿದೆ ಎಲ್ಲಿ, ಹೇಗೆ ಫಿಟ್ ಮಾಡಬೇಕೆಂದು" ಎಂದ. ಫಿಟ್ ಮಾಡಿಕೋ ಎಂದು ಮುನ್ನಡೆದಾಗ ಅವನ ಮೇಲಧಿಕಾರಿಗೆ ಫೋನ್ ಮಾಡಿ ನನಗೆ ನೀಡಿದ. "ನಾನು...." ಎಂದು ಹೇಳುವ ಮೊದಲೇ ಅವ ಗತ್ತಿಂದ ಗದರಿದ "ನೀವು 'ಯಾರಾದರೇನು? ಮೆರವಣಿಗೆ ಮಾಡಕೂಡದು. ಮೇಲಿಂದ ಆದೇಶ ಇದೆ" ಎಂದ. ಕಾರ್ಮಿಕರಿಗೂ ಸಿಟ್ಟುಬಂತು. ಮಾಡೇ ತೀರುತ್ತೇವೆ ಎಂದು ಮೆರವಣಿಗೆ ಮಾಡೇಬಿಟ್ಟರು. ಮತ್ತೊಬ್ಬ ಪೊಲೀಸ್ ಮೊಬೈಲ್ ಕ್ಯಾಮರದಲ್ಲಿ ಇಡೀ ಮೆರವಣಿಗೆ ಸೆರೆ ಹಿಡಿದ. ಕೇಸ್-ಗೀಸ್ ಜಡಿದಿರಬಹುದು... ಏನು ಕೇಸ್, ಯಾವ್ ಕಾಯ್ದೆ ಗೊತ್ತಿಲ್ಲಾ...!

ಆಚಾರ್ಯರ 'ಮರೆವು'


ಇಂತಹ ಪೊಲೀಸರಿಗೆ, ದ್ವೇಷವನ್ನೇ ತನ್ನ ಉಸಿರಾಗಿಸಿಕೊಂಡವರಿಗೆ ದೇಶಪ್ರೇಮಿ ಹಣೆಪಟ್ಟಿಯ ಆರ್‌ಎಸ್‌ಎಸ್ ಪೋಷಿತ ಬಿಜೆಪಿ ಸರ್ಕಾರ ಮತ್ತದರ ಕೈಗೆ ಕೋಕಾ (ಕರ್ನಾಟಕ ಸಂಘಟಿತ ಅಪರಾಧಗಳ ತಡೆ ಕಾಯ್ದೆ) ಕಾಯ್ದೆ ಅಸ್ತ್ರವಾಗಿ ಸಿಕ್ಕರೇ ಎಂತಹ ಕಾಂಬಿನೇಷನ್. 'ಚೋರು ಗುರು ....." ಎಂಬ ಮಾತು ಇವರಿಗಾಗಿ ಹೇಳಿ ಮಾಡಿಸಿದ್ದೇನೋ ಎಂಬಂತಿದೆ ಅಲ್ವೆ.

ಕೋಕಾ ಎಂಬ ಕರಾಳ ಕಾಯ್ದೆಯನ್ನು ತರುವುದಾಗಿ ರಾಜ್ಯ ಬಿಜೆಪಿ ಸರ್ಕಾರ ಹೇಳುತ್ತಿದೆ. ಆಳುವ ಸರ್ಕಾರದ ಹಿಡಿತದಲ್ಲಿರುವ ಪೊಲೀಸರಿಗೆ ಅಪರಿಮಿತ ಅಧಿಕಾರ ನೀಡುವ ಕಾಯ್ದೆಯಲ್ಲಿ ಮುಗ್ಧರು, ಜನಪರ ಹೋರಾಟಗಾರರ ಕತೆ ಏನು? ಕೋಮುವಾದಿ ಸರ್ಕಾರದ ಕೈಯಲ್ಲಿ ಅಲ್ಪಸಂಖ್ಯಾತರ ಪಾಡೇನು?

ಕೋಕಾ ಎಂಬ ಮಹಾ ದೋಖಾ

ಕೆ.ಎನ್.ಉಮೇಶ್

ಅದಕ್ಕೆ ಜುಲೈ 27 ರಂದು ಬೆಂಗಳೂರು ಮಹಾನಗರದ ಕೆಲವೆಡೆ ನಡೆದ ಸರಣಿ ಬಾಂಬ್ ಸ್ಫೋಟವನ್ನೇ ನೆಪವಾಗಿಸಿ ಅದಕ್ಕೂ ವಿರೋಧ ಪಕ್ಷಗಳೇ ಕಾರಣ ಎಂದು ಬಹಿರಂಗವಾಗಿ ದೂಷಿಸುತ್ತಾ, ಪೋಟಾ ಕಾಯ್ದೆ ರದ್ಧತಿ ಇದಕ್ಕೆ ಕಾರಣ. ನಾವು 'ಕೋಕಾ' ಕಾಯ್ದೆ ಜಾರಿಗೆ ತರುತ್ತೇವೆ ಎಂದೆಲ್ಲಾ ಮುಖ್ಯಮಂತ್ರಿಗಳು ಅಬ್ಬರಿಸಿದ್ದಾರೆ. ವಿಧಾನಸಭೆಯಲ್ಲಿ ಈ ಕುರಿತು ಚರ್ಚೆ ನಡೆದಾಗ ಪಾಪ ಗೃಹ ಸಚಿವ ವಿ.ಎಸ್. ಆಚಾರ್ಯರವರಿಗೆ ಈಗಾಗಲೇ ಅವರು ಸದಸ್ಯರಾಗಿದ್ದ ಶಾಸಕಾಂಗ ಸಭೆ ಅಂತಹದೊಂದು ಕಾಯ್ದೆ ರೂಪಿಸಿ ಅಂಗೀಕರಿಸಿದೆ ಎಂಬುದು ನೆನಪೇ ಇರಲಿಲ್ಲವಂತೆ. ಛೇ.. ಎಂತಹ ವಿಪರ್ಯಾಸ.



ಭಯೋತ್ಪಾದನೆ ವಿರುದ್ಧ ಟೊಂಕ ಕಟ್ಟಿ ನಿಂತ ಸಂಘ ಪರಿವಾರದ ಕಟ್ಟಾಳಿಗೆ ಇಂತಹ ಕಾಯ್ದೆಯ ನೆನಪಿಲ್ಲ ಎಂದರೆ ಹೇಗೆ?

ಆದರೇನಂತೆ ಪೋಟಾ(POTA) ಕಾಯ್ದೆ (ಭಯೋತ್ಪಾದಕ ಚಟುವಟಿಕೆಗಳ ತಡೆ ಕಾಯ್ದೆ) ತೆಗೆದು ಹಾಕಿದ್ದು ನಾವು, TADA, MISA ಕಾಯ್ದೆಯ ಅನುಭವ ನಮಗೆ ಚೆನ್ನಾಗಿದೆ, ಆದರಿಂದಾಗಿ ಅಧಿಕಾರಕ್ಕೆ ಬಂದೊಡನೆ POTA ರದ್ದು ಪಡಿಸಿರುವೆವು ಎನ್ನುವ ಕಾಂಗ್ರೆಸ್ ಪಕ್ಷದ ಶಾಸಕರು ಗೃಹ ಸಚಿವರಿಗೆ ಶಾಸನ ಸಭೆಯಲ್ಲಿ ನೆನಪಿಸಿದ್ದಾರೆ. ಕೋಕಾ ಕಾಯ್ದೆ ನೀವೇನು ತರಬೇಕಿಲ್ಲ. ನಮ್ಮ ಸರ್ಕಾರ

ಕೃಷ್ಣ ನೇತೃತ್ವದ ಕಾಂಗ್ರೆಸ್ ಸರ್ಕಾರ 2000 ರಲ್ಲೇ ಈ ಮಸೂದೆ ಮಂಡಿಸಿತ್ತು. ಅಂದಿನ ರಾಷ್ಟ್ರಪತಿ ಕಲಾಂ 2002 ರಲ್ಲಿ ಆ ವರ್ಷದ ಕೊಡುಗೆಯಾಗಿ ರಾಜ್ಯದ ಜನತೆಗೆ ಕೊಟ್ಟ ಉಡುಗೊರೆಯೇ 'ಕೋಕಾ - 2002'. ಆ ವರ್ಷದ ಜನವರಿ 2 ರಿಂದಲೇ ಅದು ರಾಜ್ಯದಲ್ಲಿ ಜಾರಿಗೆ ಬಂದಿದೆ ಎಂಬುದನ್ನು ಶಾಸನ ಸಭೆಯಲ್ಲಿ ನೆನಪಿಸಿದ್ದಾರೆ. ಆಗ ಎಚ್ಚೆತ್ತ ಆಚಾರ್ಯರು ಅದರಲ್ಲಿನ ಕೆಲವು ಸಡಿಲವಾದ ಕಲಂಗಳನ್ನು ಬಿಗಿಮಾಡಿ, ಜಾರಿ ಮಾಡುತ್ತೇವೆ ಎಂದಿದ್ದಾರೆ. ಈಗಾಗಲೇ ಜಾರಿಯಲ್ಲಿರುವ ಶಾಸನವನ್ನು ಪ್ರಯೋಗಿಸುತ್ತೇವೆ ಎಂದಿದ್ದಾರೆ. ಅದರ ಬೆನ್ನಲ್ಲೆ ಬಿಜೆಪಿಯ ಅಖಿಲ ಭಾರತ ಮುಖಂಡರು ಕಮ್ಯೂನಿಸ್ಟರ ಬೆಂಬಲಕ್ಕಾಗಿ ಕೇಂದ್ರದ ಯುಪಿಎ POTA ರದ್ದುಗೊಳಿಸಿದೆ, ಆ ಮೂಲಕ ಅಲ್ಪಸಂಖ್ಯಾತ ಮುಸ್ಲಿಮರ ತುಷ್ಟೀಕರಣಕ್ಕೆ ಕಾಂಗ್ರೆಸ್ ಮುಂದಾಗಿದೆ. ಭಯೋತ್ಪಾದನಾ ಚಟುವಟಿಕೆಗಳ ನಿಯಂತ್ರಣಕ್ಕೆ ತಮ್ಮ ಬತ್ತಳಿಕೆಯಲ್ಲಿದ್ದ ಬ್ರಹ್ಮಾಸ್ತ್ರ POTA ವನ್ನು ಮರು ಜಾರಿಗೊಳಿಸಬೇಕು ಎಂದಿದ್ದಾರೆ. ಅದನ್ನೇ ಪದೆ ಪದೆ ಎಚ್ಚರಿಸುತ್ತಿದ್ದಾರೆ. ಆದರೆ ವಾಸ್ತವದಲ್ಲಿ ರಾಷ್ಟ್ರಪತಿ ಕಲಾಂ ಅಂಕಿತ ಪಡೆದ ಈಕಾಯ್ದೆ ಸಹಾ ಮೊದಲು ಪ್ರಯೋಗಿಸಲ್ಪಟ್ಟಿದ್ದು ಈ ಕಾಯ್ದೆ ಪರ ಸಂಸತ್ತಿನಲ್ಲಿ ಕೈ ಎತ್ತಿದ್ದ ಎನ್‌ಡಿಎ ಮಿತ್ರ ಪಕ್ಷವಾಗಿದ್ದ ಎಂಡಿಎಂಕೆಯ ನಾಯಕ ವೈಕೊ ಮೇಲೆ. ಭಾಷಣ ಮಾಡುತ್ತಾ ಎಲ್‌ಟಿಟಿಇ ಪರ ಮಾತನಾಡಿದರು ಎಂಬುದನ್ನೇ

ಪುಟ 12ಕ್ಕೆ

ಏನೀ ಕೋಕಾ... ಅಂತದೇನಿದೆ ಇದರಲ್ಲಿ?

ಭಯೋತ್ಪಾದನೆ ತಡೆಗಾಗಿ ರೂಪಿತವಾದ ಈ ಕಾಯ್ದೆಯಲ್ಲಿ ಎಲ್ಲೂ ಭಯೋತ್ಪಾದನೆಯ ಪರಿಕಲ್ಪನೆಯಾಗಲಿ - ಪರಿಭಾಷೆಯಾಗಲಿ, ಯಾರು ಭಯೋತ್ಪಾದಕರು ಎಂಬುದಾಗಲಿ ಇಲ್ಲವೇ ಇಲ್ಲ!

ಹಾಗಾದರೇ ಅದರಲ್ಲಿ ಇರುವುದಾದರೂ ಏನು ಅಂದರೆ, ಸಂಘಟಿತ ಅಪರಾಧ, ವ್ಯವಸ್ಥಿತ ಅಪರಾಧಿಗಳ ಕೂಟ, ಮುಂದುವರಿಯುತ್ತಿರುವ ಕಾನೂನು ಬಾಹಿರ ಚಟುವಟಿಕೆ, ದುಷ್ಪ್ರೇರಣೆ ಹಾಗೂ ದುಷ್ಪ್ರೇರಿಸುವುದು ಎಂಬಿತ್ಯಾದಿ ಅಂಶಗಳು. ಕಾನೂನುಬದ್ಧ, ಸಂವಿಧಾನಾತ್ಮಕ ಹಕ್ಕುಗಳಿಗಾಗಿನ ಪ್ರಜಾಸತ್ತಾತ್ಮಕ ಹೋರಾಟ, ಚಟುವಟಿಕೆಗಳು ಸಂಘಟಿತ ಹೋರಾಟಗಳನ್ನು, ಚಳುವಳಿಗಳನ್ನು ಈ ಕಾಯ್ದೆ ವ್ಯಾಪ್ತಿಯಿಂದ ಹೊರಗಿಡುವ ಯಾವುದೇ ಪ್ರಯತ್ನ ಇಲ್ಲ (ಪ್ರಜ್ಞಾಪೂರ್ವಕವಾಗಿ ಮಾಡಿಲ್ಲ... ಏಕೆಂದರೆ ಅವರ ಗುರಿಯೇ ಈ ಹೋರಾಟಗಳು ನೋಡಿ ಹಾಗಾಗಿ)

ಮೇಲೆ ಹೇಳಿದ ಅಪರಾಧದಡಿ ಫಿಟ್ ಆದವರನ್ನು ವಿಶೇಷ ನ್ಯಾಯಾಲಯದಲ್ಲಿ ವಿಚಾರಣೆ. ಆರೋಪಿಗಳಿಗೆ Cr. P.C. ಹಾಗೂ ಭಾರತ ಸಾಕ್ಷ್ಯಗಳ ಕಾನೂನು, ಅಪರಾಧಗಳ ಕಾನೂನು (IPC)ಗಳಡಿ ಸಿಗಬಹುದಾದ ಯಾವುದೇ ನಾಗರೀಕವಾದ ಮಾನವ ಹಕ್ಕು ಆಧಾರಿತ ರಿಯಾಯಿತಿಗಳಿಲ್ಲ. ಸಂಕ್ಷಿಪ್ತ ವಿಚಾರಣೆ ಮೂಲಕವೇ ಶಿಕ್ಷೆ ವಿಧಿಸಬಹುದು. ಒಮ್ಮೆ ಜಾಮೀನು ನಿರಾಕರಿಸಲ್ಪಟ್ಟರೆ ಮತ್ತೆ 60 ದಿನಗಳ ನಂತರವೇ ಇನ್ನೊಂದು ಅರ್ಜಿ ಹಾಕಬಹುದು. ಮತ್ತೆ ನಿರಾಕರಿಸಲ್ಪಟ್ಟಲ್ಲಿ 90 ದಿನದ ನಂತರ ಪಬ್ಲಿಕ್ ಪ್ರಾಸಿಕ್ಯೂಟರ್ ಕೋರಿದ್ದಲ್ಲಿ 6 ತಿಂಗಳವರೆಗೆ ಜಾಮೀನ್ ಇಲ್ಲ. ಅಷ್ಟು ದಿನಗಳು ಪೊಲೀಸ್ ಕಸ್ಟಡಿಯಲ್ಲೇ ಇಡಬಹುದು. ಬಂಧಿಸಿದ 24 ಗಂಟೆಯೊಳಗೆ ನ್ಯಾಯಾಲಯಕ್ಕೆ ಹಾಜರುಪಡಿಸಬೇಕುಎಂಬುದು ಕೋಕಾ ಆರೋಪಿಗೆ ಅನ್ವಯಿಸದು. 15 ದಿನಗಳ ವರೆಗೆ ಪೊಲೀಸ್ ಕೃಪೆಯಲ್ಲಿ ಆರೋಪಿ ಬದುಕುಳಿಯಬೇಕು. ಅದನ್ನು ನ್ಯಾಯಾಲಯ 6 ತಿಂಗಳವರೆಗೆ ವಿಸ್ತರಿಸಬಹುದು. ಇನ್ನೂ ನಿರೀಕ್ಷಣಾ ಜಾಮೀನು ಈ ಕಾಯ್ದೆಗೆ ಗೊತ್ತೇ ಇಲ್ಲ ಬಿಡಿ..

ಕೋಕಾ ಅಡಿಯ ಆರೋಪಿಯೊಂದಿಗೆ ಒಡನಾಟ, ಸಂಪರ್ಕ ಇದ್ದರೂ ಸಾಕು ಕೋಕಾ ಅಡಿ ಫಿಟ್ ಮಾಡಲು. ಒಮ್ಮೆ ಒಂದು ಬಾರಿ ನಡೆಸುವ ಚಟುವಟಿಕೆ, ಹೋರಾಟ- ಅದಕ್ಕೆ ಕರೆ ಕೊಟ್ಟ ಸಂಘಟನೆಗಳು ಅದರ ಮುಖಂಡರು ಸಂಘಟಿತ ಅಪರಾಧದಡಿ ಬರುತ್ತಾರೆ. ಇಡೀ ಪ್ರಕರಣದ ವಿಚಾರಣೆಯನ್ನು ಪತ್ರಿಕೆ - ಮಾಧ್ಯಮಗಳು ಪ್ರಕಟಿಸುವಂತಿಲ್ಲ. ಪ್ರಕಟಿತ ಮಾಹಿತಿಗಳನ್ನೇ ಸಾಕ್ಷಿಯಾಗಿ ನ್ಯಾಯಾಲಯ ಬಳಸಬಹುದು. ಸಾಕ್ಷಿ ಒದಗಿಸದಿದ್ದಲ್ಲಿ ಅಂತವರನ್ನು ಕೋಕಾ ಅಡಿ ಫಿಟ್ ಮಾಡಬಹುದು.

ತಾತ್ಕಾಲಿಕವಾಗಿ ನಿಷೇಧಿಸಲ್ಪಟ್ಟ ಕೃತ್ಯ ಎಸಗಿದರೆ, ಅಥವಾ ಮೂರು ವರ್ಷ ಅಥವಾ ಮೇಲ್ಪಟ್ಟ ಸಜೆಯ ಅಪರಾಧ ಎಸಗಿದ್ದರೆ, ಅಥವಾ ಯಾವುದೇ ವ್ಯಕ್ತಿಯ ಮೇಲೆ ಜಂಟಿಯಾಗಿ ಅಥವಾ ಪ್ರತ್ಯೇಕವಾಗಿ ಕಳೆದ 10 ವರ್ಷಗಳಲ್ಲಿ ಯಾವುದಾದರೂ ದೋಷಾರೋಪ ಪಟ್ಟಿ (Charge Sheet) ಸಲ್ಲಿಸಲಾಗಿದ್ದಲ್ಲಿ, ಅಂತಹವರನ್ನು ನಿಯೋಜಿತ ನ್ಯಾಯಾಲಯ ಪರಿಗಣಿಸಿದಲ್ಲಿ ಅದು ಕೋಕಾ ಪ್ರಕಾರ ಮುಂದುವರಿಯುತ್ತಿರುವ ಕಾನೂನುಬಾಹಿರ ಚಟುವಟಿಕೆ. ಅಂತಹ ಚಟುವಟಿಕೆಯ ಕೋಕಾದಡಿ ಅಪರಾಧ. ಕೋಕಾದಡಿಯ ಚಟುವಟಿಕೆಗಾಗಿ ಕರಪತ್ರ ಹಂಚುವುದು, ಪ್ರಕಟಣೆ ಹೊರತರುವುದು, ಭಾಷಣ ಮಾಡುವುದು ಎಂದರೆ ದುಷ್ಪ್ರೇರೇಪಿಸುವುದು, ಅದು ಅಪರಾಧ. ಬಾಂಬ್ ಇಡುವರ್ಯಾದರೂ ಕರಪತ್ರ ಹಂಚಿ, ಭಾಷಣ - ಬಹಿರಂಗ ಸಭೆ ಮಾಡಿ ಇಡುತಾರ?

ಯಾರ ಬಗ್ಗೆ ಆದರೂ ಅನುಮಾನ ಬಂದರೆ ಅಂತಹವರ ಫೋನ್‌ಗಳನ್ನು 60 ದಿನಗಳ ವರೆಗೆ ಸರ್ಕಾರ ನೇಮಿಸುವ ಕೋಕಾ ಅಭಿಯೋಜಕರ ಅನುಮತಿ ಮೇರೆಗೆ ಕದ್ದಾಲಿಸಬಹುದು. ಅದರ ವಿರುದ್ಧ ದೂರಿದ್ದರೆ ಪರಿಶೀಲಿಸಲು ಪ್ರಧಾನ ಕಾರ್ಯದರ್ಶಿ, ಗೃಹ ಕಾರ್ಯದರ್ಶಿ, ಕಾನೂನು ಕಾರ್ಯದರ್ಶಿಗಳ ಪರಿಶೀಲನಾ ಸಮಿತಿಗೆ ದೂರು ನೀಡಬಹುದು. ಒಮ್ಮೆ ಫಿಟ್ ಆದರೆ ನಿರ್ದೋಷಿ ಎಂದು ಸಾಬೀತುಪಡಿಸಿಕೊಳ್ಳುವ ಹೊಣೆಗಾರಿಕೆ ಆರೋಪಿಯದೆ, ಇಲ್ಲದಿದ್ದಲ್ಲಿ ಅವನನ್ನು ಅಪರಾಧಿ ಎಂದು ಕೋಕಾ ಅನುಸಾರ ಪರಿಗಣಿಸಿ ಶಿಕ್ಷೆ ಗ್ಯಾರಂಟಿ. ಸಂಕ್ಷಿಪ್ತ ವಿಚಾರಣೆ ಮೂಲಕವೇ ಜೀವಾವಧಿ ಅಥವಾ ಗಲ್ಲು ಶಿಕ್ಷೆಯನ್ನು ನಿಯೋಜಿತ ನ್ಯಾಯಾಲಯ ನೀಡಬಹುದು. ಆದರೆ ಸದ್ಯದ ಭಾರತದ ಅಪರಾಧ ಪ್ರಕ್ರಿಯಾ ಕಾನೂನಿನ (Cr. P.C) ಪ್ರಕಾರ 2 ವರ್ಷಕ್ಕಿಂತ ಮೇಲ್ಪಟ್ಟು ಜೈಲು ಶಿಕ್ಷೆ ವಿಧಿಸುವ ಅಥವಾ ಜೀವಾವಧಿ ಅಥವಾ ಗಲ್ಲು ಶಿಕ್ಷೆ ವಿಧಿಸಬಹುದಾದ ಅಪರಾಧದಡಿಯ ಯಾವುದೇ ಪ್ರಕರಣದ ವಿಚಾರಣೆಯನ್ನು ಸಂಕ್ಷಿಪ್ತವಾಗಿ ಮಾಡುವಂತಿಲ್ಲ. (ಹೆಚ್ಚಿನ ಮಾಹಿತಿಗೆ 2002 ಜನವರಿ 27ರ 'ಐಕ್ಯರಂಗ' ಸಂಚಿಕೆಯ ಲೇಖನ ಓದಿ)

ಸಂಘ ಪರಿವಾರದ ದೇಶಪ್ರೇಮದ ಪರಿಯನ್ನು ಬಲ್ಲವರೇ ಬಲ್ಲರು. ಬೆಳ್ತಂಗಡಿಯಿಂದ ಬಂದಿರುವ ವರದಿಯೂ ಅದರ ಒಂದು ಉದಾಹರಣೆಯಾಗಿದೆ.

ಅಲ್ಪನಿಗೆ ಅಧಿಕಾರ ಬಂದ್ರೆ ಅರ್ಧರಾತ್ರಿಯಲ್ಲಿ ಧ್ವಜ ಹಾರಿಸಿದ

ಬೆಳ್ತಂಗಡಿಯಲ್ಲಿ ರಾಷ್ಟ್ರ ಧ್ವಜಕ್ಕೆ ಸಂಘಪರಿವಾರದಿಂದ ಅಗೌರವ

ಹೌದು ಸಂಘ ಪರಿವಾರಗಳ ದೇಶಪ್ರೇಮ ಉಕ್ಕಿ ಹರಿಯುತ್ತಿದೆ. ದೇಶಪ್ರೇಮ ತೀವ್ರಗೊಂಡು ಅವರು ಎಲ್ಲರಿಗಿಂತ ಮೊದಲು ರಾಷ್ಟ್ರಧ್ವಜ ಹಾರಿಸುತ್ತಾರೆ. ಸ್ವಾತಂತ್ರ್ಯ ಹೋರಾಟದ ಸಂದರ್ಭ ನರಸತ್ತವರಂತೆ ಅಡಗಿ ಕುಳಿತು ಬ್ರಿಟಿಷರ ಏಜೆಂಟರಾಗಿ, ಬ್ರಿಟಿಷರಿಗೆ ತಪ್ಪೊಪ್ಪಿಗೆ ಪತ್ರ ನೀಡಿದ ದೇಶಪ್ರೇಮಿಗಳು !! ಇದೀಗ ಪಿಂಚಣಿಗಾಗಿ ಜೊಲ್ಲು ಸುರಿಯುತ್ತಿರುವುದು ಗುಟ್ಟಾಗಿ ಉಳಿದಿಲ್ಲ. ಇಂತಹ ದೇಶಪ್ರೇಮಿಗಳು ಇದೀಗ ಬೆಳ್ತಂಗಡಿಯ ಉಜಿರೆಯ ರಾಷ್ಟ್ರ ಧ್ವಜಕ್ಕೆ ಬಹಿರಂಗವಾಗಿ ಅವಮಾನವೆಸಗಿದ್ದಾರೆ. ಅದೂ ಪೋಲೀಸರ ಸಾರಥ್ಯ.... ಕ್ರಿಮಿನಲ್‌ಗಳ ಉಪಸ್ಥಿತಿಯಲ್ಲಿ... ಜನಪ್ರತಿನಿಧಿಗಳ ನೇತೃತ್ವದಲ್ಲಿ...

ಸ್ವಾತಂತ್ರ್ಯ ದಿನಾಚರಣೆಯ ಮುನ್ನಾದಿನ ರಾತ್ರಿ ಸಂಘಪರಿವಾರಕ್ಕೆ ಸೇರಿದ ಹಿಂದೂ ಜಾಗರಣ ವೇದಿಕೆ, ಅಖಿಲ ಭಾರತ ವಿದ್ಯಾರ್ಥಿ ಪರಿಷತ್ ಎಂಬ ದೇಶಪ್ರೇಮಿ(ಅವರೇ ಹೇಳಿಕೊಳ್ಳುವಂತೆ) ಸಂಘಟನೆಗಳು ಅಖಂಡ ಭಾರತ ಸಂಕಲ್ಪ ದಿನಾಚರಣೆಯ ನೆಪದಲ್ಲಿ ಪಂಜಿನ ಮೆರವಣಿಗೆ ಬಹಿರಂಗ ಸಭೆಯನ್ನು ಉಜಿರೆಯ ಹೃದಯ ಭಾಗದಲ್ಲಿ ಆಗಸ್ಟ್ 14 ರ ರಾತ್ರಿ 12 ಗಂಟೆಗೆ ಏರ್ಪಡಿಸಿದ್ದರು. ಈ ಸಭೆಗೆ ಆರ್.ಎಸ್.ಎಸ್.ನ ದಕ್ಷಿಣ ಪ್ರಾಂತ ಸಂಘ ಚಾಲಕ (ಬಿಜೆಪಿಯ ಹೈಕಮಾಂಡ್) ಹರುಕು ಬಾಯಿಯ ಕಲ್ಲಡ್ಕ ಪ್ರಭಾಕರ ಭಟ್ಟ, ಉಜಿರೆಯ ಜನಾರ್ದನ ದೇವಸ್ಥಾನದ 14.05 ಎಕರೆ ಜಮೀನನ್ನು ಸ್ವಾಹ ಮಾಡಲು ಮುಂದಾಗಿ ಸಿಕ್ಕಿಬಿದ್ದ ಕ್ರಿಮಿನಲ್,ದೇವಸ್ಥಾನದ ಆಡಳಿತ ಮೊಕ್ತೇಸರ ವಿಜಯ ರಾಘವ ಪಡ್ವೆಟ್ನಾಯ ಸುಬ್ರಾಯ ಶೆಣೈ ಮುಂತಾದವರು ಉಪಸ್ಥಿತರಿದ್ದರು. ಪ್ರತಿವರ್ಷವೂ ಪ್ರತಿಜ್ಞೆಯ ನೆಪದಲ್ಲಿ ಅನ್ಯಧರ್ಮವನ್ನು ತೆಗಳುವ ಕಾರ್ಯಕ್ರಮವನ್ನು ಇಲ್ಲಿ ಆಯೋಜಿಸಲಾಗುತ್ತಿತ್ತು. 1947ರಿಂದ ಒಂದೇ ವಿಚಾರಕ್ಕೆ 'ಸಂಕಲ್ಪ' 'ಪ್ರತಿಜ್ಞೆ' ನಡೆಸುವುದು ಆರ್‌ಎಸ್‌ಎಸ್ ನ ಮತ್ತೊಂದು ವಿಶೇಷ.

ಇಲ್ಲಿ ಪ್ರತಿ ವರ್ಷದ ಆ.14ರ ಮಧ್ಯರಾತ್ರಿ ಈ ಕಾರ್ಯಕ್ರಮ ನಡೆಯುತ್ತಿತ್ತು. ಈ ತನಕ ಈ ಕಾರ್ಯಕ್ರಮದಲ್ಲಿ ಕೇಸರಿ ಧ್ವಜವನ್ನು ಹಾರಿಸಲಾಗುತ್ತಿತ್ತೇ ಹೊರತು ರಾಷ್ಟ್ರಧ್ವಜವನ್ನು ಅಲ್ಲ. ಆದರೆ ರಾಜ್ಯದಲ್ಲಿ ಪ್ರಥಮಬಾರಿಗೆ ಅಧಿಕಾರದ ರುಚಿ ಉಂಡಿರುವ ಬಿ.ಜೆ.ಪಿ.ಗೆ ಅಧಿಕಾರ ಮದ ನೆತ್ತಿಗೇರಿದೆ. ಮದವೇರಿದ ಪುಂಡಾನೆಯಂತೆ ತಾವು ಮಾಡಿದ್ದೆ ಸರಿ ಎಂದು ತೀರ್ಮಾನಿಸಿರುವ ಸಂಘ ಪರಿವಾರ ಈ ಬಾರಿ ಮಾತ್ರ ಈ ಹಿಂದಿನಂತೆ 'ಸಂಕಲ್ಪ' ವನ್ನು ಮಾಡದೇ ತಮ್ಮ ಗುಪ್ತ ಅಜೆಂಡಾದದಂತೆ, 'ಮಧ್ಯರಾತ್ರಿ ದೇಶಪ್ರೇಮ'ವನ್ನು ಸಾಬೀತು ಮಾಡಿದ್ದಾರೆ. ಸಂಘಪರಿವಾರಗಳ 'ರಾತ್ರಿ' ಯ ದೇಶಪ್ರೇಮ ಕರಾವಳಿ ಜಿಲ್ಲೆಗೇನು ಹೊಸತಲ್ಲ. 'ಅಕ್ರಮ ಗೋ ಸಾಗಾಟಕ್ಕೆ ರಾತ್ರಿಯೇ ತಡೆ, ಅಮಾಯಕರ ಮೇಲೆ ಹಲ್ಲೆಯು ರಾತ್ರಿಯೇ, ಅನ್ಯಧರ್ಮದ ಜೋಡಿಯನ್ನು ಸೆರೆಹಿಡಿಯುವುದು ರಾತ್ರಿಯೇ, ಇವರು ಬೆತ್ತಲೆ ಸೇವೆ ಮಾಡುವುದು ರಾತ್ರಿಯೇ, ಅಕ್ರಮ ಗೋಸಾಗಾಟದ ಬಗ್ಗೆ ಬೊಬ್ಬಿಡುವ ಗೋ ಪ್ರೇಮಿ ಅಲಿಯಾಸ್ ದೇಶಪ್ರೇಮಿಗಳು ಗೋ ಮಾಂಸ ಭಕ್ಷಿಸುವುದು ರಾತ್ರಿಯೇ

ಮೂಕ ಪ್ರೇಕ್ಷಕರಾದ ಪೋಲೀಸರು

ಆ. 14 ರ ಮಧ್ಯರಾತ್ರಿ ದೇಶಪ್ರೇಮಿಗಳ ಸಂಕಲ್ಪ (ಯಾವುದೆಂದು ಕೇಳಬೇಡಿ) ದಿನಾಚರಣೆಯ ಕಾರ್ಯಕ್ರಮಕ್ಕೆ ಯಾವುದೇ ತೊಂದರೆಯುಂಟಾಗದಂತೆ ಬಿಗಿ ಪೋಲಿಸ್ ಬಂದೋಬಸ್ತು ಹಾಕಲಾಗಿತ್ತು. ಈ ಪೋಲೀಸರು ನೋಡುತ್ತಿದ್ದಂತೆಯೇ ಕಾರ್ಯಕ್ರಮದ ಒಂದು ಭಾಗವಾಗಿದ್ದ ಧ್ವಜಾರೋಹಣ ನಡೆಯಿತು. ಕೇಸರಿ ಬಾವುಟವನ್ನು ಬಾನೆತ್ತರಕ್ಕೆ ಹಾರಿಸಲಾಗಿ ರಾಷ್ಟ್ರಧ್ವಜವನ್ನು ಅದರ ಪಕ್ಕವೇ ಸಂವಿಧಾನ ಬಾಹಿರವಾಗಿ ಅತ್ಯಂತ ಕೆಳಮಟ್ಟದಲ್ಲಿ ಹಾರಿಸಲಾಯಿತು. ಧ್ವಜಾರೋಹಣ ಗೈದವರು ಕ್ರಿಮಿನಲ್ ಮೊಕ್ತೇಸರ ಅಲಿಯಾಸ್ ಮೊಕ್ತೇಸರ ವಿಜಯರಾಘವ ಪಡ್ವೆಟ್ನಾಯ. ಆದರೂ ತನ್ನ ಕಣ್ಣೆದುರಿಗೆ ನಡೆಯುತ್ತಿರುವ ಸಂವಿಧಾನ ಬಾಹಿರ ಕೆಲಸವನ್ನು ನೋಡಿ ಕೈಕಟ್ಟಿ ಕುಳಿತರು ಪೋಲೀಸರು. ರಾಜ್ಯದಲ್ಲಿ ಬಿಜೆಪಿ ಸರ್ಕಾರವಿದ್ದು, ಸರ್ಕಾರದ ಅಡಿಯಲ್ಲಿ ಕೆಲಸ ನಿರ್ವಹಿಸುತ್ತಿರುವ ಪೋಲೀಸರು ಸರ್ಕಾರದ ಪರವಾಗಿರುವ ಸಂಘ ಪರಿವಾರದ ಅನೈತಿಕ, ಅಕ್ರಮ ಸಂವಿಧಾನ ಬಾಹಿರ, ಕಾನೂನು ಬಾಹಿರ ಕೆಲಸವನ್ನು ನೋಡಿಯೂ ಈ ರೀತಿ ವರ್ತಿಸಿರುವುದು ಸಂವಿಧಾನ ಬಾಹಿರವೇ ಸರಿ. ಒಟ್ಟಿನಲ್ಲಿ ಅಲ್ಪನಿಗೆ ಅಧಿಕಾರ ಬಂದ್ರೆ, ಅರ್ಧ ರಾತ್ರೀಲಿ ಧ್ವಜ ಹಾರಿಸಿದ ಎಂಬುವುದಂತು ಉಜಿರೆಯಲ್ಲಿ ಸಾಬೀತಾಗಿದೆ. ಉಜಿರೆಯ ಉದ್ಯಮಿ ಸುಬ್ರಾಯ ಶೆಣೈ ಎಂಬ ಪಶುವಿನಂತಹ ವ್ಯಕ್ತಿ ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಈ ಸಂದರ್ಭ ಹಿಂ.ಜಾ.ವೇದಿಕೆಯ ಸಂಚಾಲಕ ಶ್ಯಾಮಸುಂದರ, ಅಧ್ಯಕ್ಷ ಪದ್ಮನಾಭ ಶೆಟ್ಟಿಗಾರ, ಕಾರ್ಯದರ್ಶಿ ಬಾಲಕೃಷ್ಣ ಮಿತ್ತಬಾಗಿಲು ಸೇರಿದಂತೆ ಕ್ರಿಮಿನಲ್‌ಗಳ ಗಡಾಣವೇ ಅಲ್ಲಿ ನೆರೆದಿತ್ತು. ಈ ಕ್ರಿಮಿನಲ್‌ಗಳಿಗೆ ತಮ್ಮ ಪಕ್ಷವೇ ಅಧಿಕಾರದಲ್ಲಿದ್ದುದು ವರವೆಂದು ಪರಿಗಣಿಸಿ ರಾಷ್ಟ್ರದ ಸಂವಿಧಾನಕ್ಕೆ ವಿರುದ್ಧವಾಗಿ ಸಂವಿಧಾನಕ್ಕಿಂತಲೂ ತಮ್ಮ ಹಿಡನ್

ಗಲಾಟೆಗೆ ತಯಾರು ನಡೆಸಿದ್ದರು!!

ಇವರ ಸಂಕಲ್ಪ ಯಾವುದೆಂದು ತಿಳಿಯದವರು ಕಡಿಮೆ. ಈ ಮಂದಿ ಕಾರ್ಯಕ್ರಮದ ಮಧ್ಯೆ ಅಲ್ಲೇ ಸಮೀಪದಲ್ಲಿದ್ದ ಅಲ್ಪಸಂಖ್ಯಾತ ಮುಸ್ಲಿಂ ಸಮುದಾಯಕ್ಕೆ ಸೇರಿದ ಬ್ಯಾನರ್‌ವೊಂದನ್ನು ಹರಿದು ಹಾಕಿದ್ದಾರೆ. ವಿಪರ್ಯಾಸವೆಂದರೆ ತಮ್ಮ ಕಣ್ಣ ಮುಂದೆಯೇ ಬ್ಯಾನರ್ ಹರಿಯುತ್ತಿದ್ದರೂ ಬೆಳ್ತಂಗಡಿಯ ಭಜರಂಗಿ ಪೋಲಿಸರು ಮಾತ್ರ ಏನೂ ಆಗಿಲ್ಲವೆಂಬಂತೆ ವರ್ತಿಸಿದ್ದು, ಖಂಡನೀಯ. ದೇಶದ ಪ್ರಜಾಪ್ರಭುತ್ವದ ವ್ಯವಸ್ಥೆಗೆ ಗಂಭೀರ ಸವಾಲೊಡ್ಡಿರುವ ಈ ಪ್ರಕರಣವನ್ನು ತಾಲ್ಲೂಕು ಪ್ರಗತಿಪರ ಸಂಘಟನೆಗಳಾದ ಡಿವೈಎಫ್‌ಐ, ಎಸ್‌ಎಫ್‌ಐ, ಸಿಪಿಐ(ಎಂ), ದಲಿತ ಸಂಘಟನೆಗಳು ಸವಾಲಾಗಿ ಸ್ವೀಕರಿಸಿದ್ದು, ಇದರೊಂದಿಗೆ ದೇಶಪ್ರೇಮಿಗಳು, ಪ್ರಜಾಪ್ರಭುತ್ವ ವಾದಿಗಳು, ದೇಶದ ಸಂವಿಧಾನವನ್ನು ಗೌರವಿಸುವವರು ಕೈ ಜೋಡಿಸಿದ್ದು, ತಾಲ್ಲೂಕಿನಲ್ಲಿ ಕೋಮುವಾದಿಗಳ ವಿರುದ್ಧ ಆಶಾದಾಯಕ ಬೆಳವಣಿಗೆ.

ರಾಷ್ಟ್ರ ಧ್ವಜಕ್ಕೆ ಅಗೌರವ ಸೂಚಿಸಿದ ಸಂಘ ಪರಿವಾರಗಳ ವಿರುದ್ಧ The Embluvs of Names (Prevension of improper use) at 1950 ಹಾಗೂ The pervention of in sults of national honour act 1971ರ ಪ್ರಕಾರ ಪ್ರಕರಣ ದಾಖಲಿಸಿ ಆರೋಪಿ ಕ್ರಿಮಿನಲ್ ದೇಶಪ್ರೇಮಿಗಳನ್ನು ಬಂಧಿಸಿ ಜೈಲಿಗಟ್ಟಬೇಕು ಇಲ್ಲವಾದಲ್ಲಿ ರಾಷ್ಟ್ರಧ್ವಜವನ್ನು ಅಗೌರವಿಸುವ ಶಕ್ತಿಗಳು ರಾಜ್ಯದೆಲ್ಲೆಡೆ ವಿಜೃಂಭಿಸಬಹುದು. ಸಂಘ ಪರಿವಾರದ ರಾಷ್ಟ್ರಭಕ್ತಿಯ ದೇಶಪ್ರೇಮದ ಹಿಂದಿರುವ ಹಿಡನ್ ಅಜೆಂಡಾದ ಬಗ್ಗೆ ಭಾರತೀಯರು ಜಾಗೃತರಾಗದಿದ್ದರೆ ರಾಷ್ಟ್ರದ ಪ್ರಜಾಪ್ರಭುತ್ವ ವ್ಯವಸ್ಥೆಯ ಮೇಲೆ ಗಂಭೀರ ದಾಳಿಗಳಾಗಬಹುದು ಎಂಬುವುದು ಉಜಿರೆಯ ಘಟನೆ ಸಾಬೀತುಪಡಿಸುತ್ತಿದೆ.

- ಕಾವ್ಯ ಬೆಳ್ತಂಗಡಿ

ಕಾಂಗ್ರೆಸ್‌ಗೆ ಆಪರೇಷನ್....

ಪುಟ 3 ರಿಂದ

ಹತಾಶೆ ಇತ್ತು. ಆದರೆ ಅದು ವಾಸ್ತವವಾಗಿತ್ತು. ಕಾಂಗ್ರೆಸ್‌ನ ನೀತಿಗಳು, ಅದರ ಕ್ರಮಗಳು ಕೋಮುವಾದಿ ಬಿಜೆಪಿಗೆ ವರದಾನವಾಗುತ್ತಿದೆ. ಹೀಗೆ ಜನರ ಬದುಕಿಗೆ ಕೊಳ್ಳಿ ಇಡಲು ಅವರಿಗೆ ಮುಕ್ತ ಅವಕಾಶ ಕಲ್ಪಿಸಿದೆ.

ಅಂತಿಮವಾಗಿ ಕೋಮುವಾದಿ ಶಕ್ತಿಗಳನ್ನು ಹಿಮ್ಮೆಟ್ಟಿಸುವಲ್ಲಿ ಕಾಂಗ್ರೆಸ್ ಈಗಲಾದರೂ ಸಕ್ರಿಯವಾದೀತೆ? ದೆಹಲಿಯಲ್ಲಿ ವಾರಗಟ್ಟಲೆ ಬೀಡುಬಿಟ್ಟಿರುವ ನಾಯಕರು ಜನರ ನಡುವೆ ಕಾಣಿಸಿಕೊಳ್ಳುವರೆ? ಇದರ ಅರಿವು, ಸುಳಿವು ಸರ್ವೋಚ್ಛ ನಾಯಕಿಗೂ ಇದ್ದಂತಿಲ್ಲ..

ಭ್ರಷ್ಟತೆ : ರಾಜ್ಯಕ್ಕೆ ಅಗ್ರಸ್ಥಾನ

ಭ್ರಷ್ಟಾಚಾರದಲ್ಲಿ ಕರ್ನಾಟಕವು ಅಗ್ರಗಣ್ಯ ಸ್ಥಾನ ಪಡೆದಿರುವುದಕ್ಕೆ 'ಅಭಿವೃದ್ಧಿ ರಾಜಕಾರಣ'ದ ಅಗ್ರಗಣ್ಯ ನಾಯಕರಿಗೆ ಸಂತೋಷವಾಗಿರಬೇಕು. ಇದನ್ನು ಇನ್ನೂ ಅಭಿವೃದ್ಧಿಪಡಿಸುವುದಾಗಿ ನಿತ್ಯವೂ ನೀಡುತ್ತಿರುವ ಹೇಳಿಕೆಗಳಲ್ಲಿ ಇಂತಹ ಉತ್ಸಾಹವೇ ತುಂಬಿ ತುಳುಕುತ್ತಿದೆ.

2005 ರಲ್ಲಿ 17ನೇ ಸ್ಥಾನದಲ್ಲಿದ್ದ ಕರ್ನಾಟಕ 3 ವರುಷಗಳೊಳಗೆ ದಾಪುಗಾಲಿನ ಸಾಧನೆ ತನ್ನದಾಗಿಸಿಕೊಂಡಿರುವಲ್ಲಿ 'ಅಭಿವೃದ್ಧಿ' ರಾಜಕಾರಣದ ಪಾತ್ರ ಗೌಣವೇನಲ್ಲ. ಇಂತಹ ಅಗ್ರಗಣ್ಯ ಸ್ಥಾನಕ್ಕೆ ರಾಜಸ್ಥಾನ, ಮಧ್ಯಪ್ರದೇಶಗಳ ರಾಜ್ಯಗಳನ್ನು ಮೇಲ್ದರ್ಜೆಗೆ ಏರಿಸಿರುವ ರಾಜಕೀಯ ಪಕ್ಷವೇ ಕರ್ನಾಟಕದಲ್ಲಿಯೂ ಅಧಿಕಾರದಲ್ಲಿರುವುದರಿಂದ ಉತ್ತುಂಗ ತಲುಪುವಲ್ಲಿ ಅನುಮಾನವೇ ಇಲ್ಲ!

ದೇಶದಲ್ಲಿನ ಭ್ರಷ್ಟಾಚಾರದ ಪ್ರಮಾಣ ಅಧ್ಯಯನ ಮಾಡಿದ ಸಂಸ್ಥೆಯೊಂದು ಇಂತಹ ಸಂಗತಿಗಳನ್ನು ಹೊರಗೆಳೆದಿದೆ. ಕರ್ನಾಟಕದಲ್ಲಿ ಪೊಲಿಸ್ ಇಲಾಖೆಯಲ್ಲಿ ಭ್ರಷ್ಟಾಚಾರ ಮೊದಲನೆಯ ಸ್ಥಾನದಲ್ಲಿದೆ (ಶೇ. 73), ನಂತರ ಆರಣ್ಯ ಇಲಾಖೆ ಶೇ. 53(ಗಣಿ ಇತ್ಯಾದಿ), ಕಂದಾಯ ಶೇ. 57(ಭೂಮಿ ಇತ್ಯಾದಿ), ವಸತಿ ಶೇ. 51(ಭೂ ದಂಧೆ)... ಈಗ ಅರ್ಥವಾಯಿತಲ್ಲ, ಇಂತಹ ಖಾತೆಗಳಿಗಾಗಿ ಹೇಗೆಲ್ಲಾ ಹೋರಾಡಲಾಗುತ್ತಿದೆ ಎಂಬುದು!


ಇಷ್ಟೊಂದು ಪ್ರಮಾಣದಲ್ಲಿ ಭ್ರಷ್ಟಾಚಾರ, ಸಾರ್ವಜನಿಕ ಆಸ್ತಿ ಲೂಟಿ ನಡೆಯುತ್ತಿರುವುದಕ್ಕು ಉದಾರೀಕರಣ - ಜಾಗತೀಕರಣ, ಖಾಸಗೀಕರಣಕ್ಕೂ ಗಳಸ್ಯ - ಕಂಠಸ್ಯದ ನಂಟು ಇರುವುದು ಗುಟ್ಟೇನಲ್ಲ. ಭ್ರಷ್ಟಾಚಾರ ಹುಲುಸಾಗಿ ಬೆಳೆಯಲು ನಮ್ಮ ಸಮಾಜದ ಆರ್ಥಿಕ - ಸಾಮಾಜಿಕ ಸಂರಚನೆಯೇ ಮೂಲವಾಗಿದೆ. ಯಾವ ವ್ಯವಸ್ಥೆಯಲ್ಲಿ ಶ್ರಮ ಶೋಷಣೆ, ತಾರತಮ್ಯ, ದಬ್ಬಾಳಿಕೆಗಳು ಕೆಲವರ (ಆಸ್ತಿವಂತರ) ಮೂಲಭೂತಹಕ್ಕಾಗಿದೆಯೇ ಅದೇ ಅಕ್ರಮ-ಭ್ರಷ್ಟ ವ್ಯವಸ್ಥೆ. ಇಲ್ಲಿ ಅದೇ ಅಧಿಕಾರಶಾಹಿ ಮಟ್ಟದಲ್ಲಿ ಒಂದಿಷ್ಟು ಮೇಯಲು ಅವಕಾಶ ಒದಗಿಸುತ್ತದೆ. ಪೋಷಿಸುತ್ತದೆ. ಭ್ರಷ್ಟ ಮಾರ್ಗಗಳಿಂದಲೇ ಬಂಡವಾಳಶಾಹಿಯೂ ಬೆಳೆಯುತ್ತದೆ.

ಈಗ ಹೊರ ಬಂದಿರುವ ಭ್ರಷ್ಟಾಚಾರಕ್ಕೆ ಸಂಬಂಧಿಸಿದ ಸಂಗತಿಗಳು ಸಾರ್ವಜನಿಕ ಜಾಗೃತಿಯನ್ನು ಮೂಡಿಸಿ ಮೂಲಭೂತ ಪ್ರಶ್ನೆಗಳಿಗಾಗಿ ನಡೆಯುವ ಹೋರಾಟಕ್ಕೆ ಇಂಬು ಕೊಡುವಂತಾಗಬೇಕು.

ಜನಶಕ್ತಿ ಕನ್ನಡ ವಾರಪತ್ರಿಕೆ

ಅಣು ಒಪ್ಪಂದ : ಬಯಲಾದ ಸಿಂಗ್ ಬುಷ್ ಮಹಾವಂಚನೆ

<u>ಅಣು ಒಪ್ಪಂದದ ವಿಚಾರದಲ್ಲಿ ಸ್ವತಃ ಅಮೆರಿಕವೇ ಬಹಿರಂಗಪಡಿಸಿದ ಸ್ಫೋಟಕ ಸತ್ಯ ಬುಷ್ ಆಡಳಿತ, ಮನಮೋಹನ್ ಸಿಂಗ್ ಸರ್ಕಾರ ಭಾರತದ ಜನತೆಗೆ ಬಗೆದ ಮಹಾ ದ್ರೋಹ, ವಂಚನೆಯನ್ನು ಬಯಲಿಗೆ ತಂದಿದೆ.</u>


ಕೃಪೆ: ಪ್ರಜಾವಾಣಿ

ಭಾರತ - ಅಮೆರಿಕಾ ಪರಮಾಣು ಒಪ್ಪಂದವು ಭಾರತದ ಹಾಗೂ ಇಲ್ಲಿನ ಜನತೆಯ ಹಿತಕ್ಕೆ ಪೂರಕವಾಗಿಲ್ಲ ಎಂದು ಎಡಪಕ್ಷಗಳು ಹೇಳುತ್ತಾ ಬಂದಿದ್ದ ವಾದ ಇನ್ನೊಮ್ಮೆ ದೃಢ ಪಟ್ಟಿದೆ. ಅಮೆರಿಕಾದ ವಿದೇಶ ವ್ಯವಹಾರಗಳ ಸಮಿತಿಯ ಅಧ್ಯಕ್ಷ ಹೋವಾರ್ಡ್ ಎಲ್. ಜೆರ್ಮನ್ ರವರು ಅಮೆರಿಕಾದ ಕಾಂಗ್ರೆಸ್ಸಿನ(ಅಲ್ಲಿನ ಪಾರ್ಲಿಮೆಂಟ್) ಸದಸ್ಯರು ಹಾಗೂ ಬುಶ್ ಆಡಳಿತದ ನಡುವೆ ನಡೆದ ಪತ್ರಗಳನ್ನು ಸಾರ್ವಜನಿಕರಿಗೆ ಬಿಡುಗಡೆ ಮಾಡುವುದರ ಮೂಲಕ ಅಮೆರಿಕಾದ ಅಧ್ಯಕ್ಷ ಜಾರ್ಜ್ ಬುಶ್ ಮತ್ತು ಭಾರತದ ಪ್ರಧಾನಿ ಮನಮೋಹನ್ ಸಿಂಗ್ ರೊಂದಿಗೆ ನಡೆದ ಅನೇಕ ರಹಸ್ಯ ಮಾತುಕತೆಗಳ ಕೆಲ ಭಾಗಗಳು ಬಹಿರಂಗಗೊಂಡಿದೆ.

ಸೆಪ್ಟೆಂಬರ್ 3ನೇ ತಾರೀಖು ಅಮೆರಿಕಾದ ಪತ್ರಿಕೆಯಾದ ವಾಷಿಂಗ್ಟನ್ ಪೋಸ್ಟ್‌ನಲ್ಲಿ ಬಹಿರಂಗ ಗೊಂಡ ಈ ಪತ್ರಗಳ ಪ್ರಕಾರ ಅಮೆರಿಕಾದ ಸಂಸತ್ ಸದಸ್ಯರು ಕೇಳಿದ 45 ಪ್ರಶ್ನೆಗಳಿಗೆ ಬುಶ್ ಆಡಳಿತ ಜನವರಿ 16, 2008 ರಂದು 26 ಪುಟಗಳ ಉತ್ತರ ನೀಡಿದ್ದು ಅದರಪ್ರಕಾರ ಪ್ರಮುಖವಾಗಿ ಈ ಕೆಳಗಿನ ಅಂಶಗಳು ಬಹಿರಂಗಗೊಂಡಿವೆ.

1. ಭಾರತಕ್ಕೆ ಸತತವಾಗಿ ಪರಮಾಣು ಇಂಧನ ನೀಡುವುದಕ್ಕೆ ಅಮೆರಿಕಾ ಒಪ್ಪಿಲ್ಲ
2. ಸುರಕ್ಷತಾ ಒಪ್ಪಂದದಲ್ಲಿ ಒಳಗೊಂಡಿರುವ ರಿಯಾಕ್ಟರುಗಳಿಗೆ, ಪೂರ್ಣ ಅವಧಿಗೆ ಸಾಕಾಗುವಷ್ಟು ಇಂಧನವನ್ನು 'ಸ್ಟಾಕ್' ಮಾಡಲು ಭಾರತಕ್ಕೆ ಒಪ್ಪಿಗೆ ನೀಡಿಲ್ಲ.
3. ಭಾರತವು ಪರಮಾಣು ಪರೀಕ್ಷೆ ನಡೆಸಿದಲ್ಲಿ ಒಪ್ಪಂದ ಮುರಿಯುತ್ತದೆ.
4. ತಾತ್ಕಾಲಿಕವಾಗಿ ಅಥವಾ ಶಾಶ್ವತವಾಗಿ ಇಂಧನ ಪೂರೈಕೆಯನ್ನು ಸ್ಥಗಿತಗೊಳಿಸುವ ಹಕ್ಕನ್ನು ಅಮೆರಿಕಾ ಇಟ್ಟುಕೊಂಡಿದೆ.
5. ಭಾರತಕ್ಕೆ ಆಮದಾಗುವ ಪರಮಾಣು ಇಂಧನ ಪೂರೈಕೆಯಲ್ಲಿ ವ್ಯತ್ಯಯ (ಹೆಚ್ಚು ಕಡಿಮೆ) ಆದಲ್ಲಿ ಭಾರತ ತನ್ನದೇ ದಾರಿ ಕಂಡುಕೊಳ್ಳುವ ಯಾವುದೇ ಹಕ್ಕನ್ನು ಒಪ್ಪಂದದಲ್ಲಿ ನೀಡಿಲ್ಲ.
6. ಅಣು ಒಪ್ಪಂದ (123 ಒಪ್ಪಂದ) ವು ಅಮೆರಿಕಾದ ಹೈಡ್ ಕಾಯಿದೆಯ ನಿಯಮಗಳಿಗೆ ಒಳಪಡುತ್ತದೆ.
7. ಅಣು ತಂತ್ರಜ್ಞಾನವನ್ನು ವಿನ್ಯಾಸಗೊಳಿಸಲು ಅಥವಾ ಅಭಿವೃದ್ಧಿಗೊಳಿಸಲು ಭಾರತಕ್ಕೆ ಯಾವುದೇ ಸಹಾಯವನ್ನು ನೀಡುವುದಿಲ್ಲ.

ಅಮೆರಿಕಾದ ಪತ್ರಿಕೆಗಳಲ್ಲಿ ಬಹಿರಂಗಗೊಂಡ ಜನವರಿ 2008 ರ ಪತ್ರದಿಂದಾಗಿ ಒಂದು ವಿಷಯವಂತೂ ಸ್ಪಷ್ಟವಾಗಿದೆ. ಭಾರತದ ಪ್ರಧಾನಿ ನಮ್ಮ ದೇಶದ ಸಂಸತ್ತಿಗೆ ನೀಡಿದ ಭರವಸೆಗಳು ಸುಳ್ಳುನೂರಾಗಿವೆ.

ವ್ಯಾಪಾರದ ಹೆಸರಿನಲ್ಲಿ ಇನ್ನೊಂದು ದೇಶವನ್ನು ಶೋಷಣೆ ಮಾಡುವ ಸಾಮ್ರಾಜ್ಯಶಾಹಿಯ ಅಗ್ರಗಣ್ಯ ನಾಯಕನಾದ ಅಮೆರಿಕಾ 'ಭಾರತಕ್ಕೆ ಅನ್ಯಾಯ ಮಾಡುತ್ತದೆ, ಆದರ ಬಲೆಗೆ ಭಾರತ ಬೀಳಬಾರದು' ಎಂದು ಎಡಪಕ್ಷಗಳು 2005 ರಿಂದಲೇ ಎಚ್ಚರಿಸುತ್ತಾ ಬಂದಿದ್ದವು. ಆದರೆ ಅಮೆರಿಕಾದ ಕಿರಿಯ ಪಾಲುದಾರನಾಗಿ ಭಾರತದ ಕೈಗಾರಿಕೋದ್ಯಮಿಗಳಿಗೆ, ದೊಡ್ಡ ವ್ಯಾಪಾರಿಗಳಿಗೆ ಸಹಾಯ ಮಾಡಬೇಕೆಂಬ ಬಿಜೆಪಿ ವಿರೋಧ ಮಾಡಿದ್ದರೂ ಅದರ ವಿರೋಧ ಯಾವುದೇ ಸೈದ್ಧಾಂತಿಕ ನೆಲೆಗಟ್ಟಿನಲ್ಲಿ ಅಲ್ಲ. ಅದು ಕೇವಲ ಚುನಾವಣಾ ಆಶಯಗಳಿಗಾಗಿ ಮಾತ್ರ.

ಈ ಸಂದರ್ಭದಲ್ಲಿ ಪ್ರಧಾನಿ ಮನಮೋಹನ ಸಿಂಗ್ ಅವರು ಭಾರತದ ಸಂಸತ್ತಿಗೆ ನೀಡಿದ ಭರವಸೆಗಳು ಏನು ಎಂಬುದನ್ನು ನೆನಪಿಸಿಕೊಳ್ಳುವುದು ಅಗತ್ಯ.

1. ಸತತ ಇಂದನ ಪೂರೈಕೆಯ ಜತೆಯಲ್ಲಿ ನಾಗರಿಕ ಪರಮಾಣು ತಂತ್ರಜ್ಞಾನಕ್ಕೆ ಅಮೆರಿಕಾದ ಪೂರ್ಣ ಸಹಕಾರ.
2. ಅಮೆರಿಕಾ ಸತತವಾಗಿ ಇಂಧನ ಪೂರೈಕೆ ಮಾಡುತ್ತದೆ. ಹಿಂದೆ ಪರಮಾಣು ಪರೀಕ್ಷೆ ನಡೆಸಿದ ಹಿನ್ನೆಲೆಯಲ್ಲಿ ತಾರಾಪುರಕ್ಕೆ ಇಂಧನ ಪೂರೈಕೆ ನಿಲ್ಲಿಸಿದಂತೆ, ಪುನಃ ನಿಲ್ಲಿಸಿದರೆ, ಇತರೆ ದೇಶಗಳ ಮೂಲಕ ಇಂಧನ ಪೂರೈಸುತ್ತದೆ.
4. ಭಾರತದ ಸಾಮರಿಕ ಹಿತಾಸಕ್ತಿಗೆ ಯಾವುದೇ ಧಕ್ಕೆ ಇಲ್ಲ.
5. ಒಪ್ಪಂದವನ್ನು ಕೊನೆಗಾಣಿಸುವುದಾದಲ್ಲಿ (Termination) ಒಂದು ವರ್ಷದ ಮಾತುಕತೆಯ ನಂತರವಷ್ಟೇ ಸಾಧ್ಯ.


ಕೃಪೆ: ದಿ ಹಿಂದೂ

ಬುಶ್ ಆಡಳಿತವು ನೀಡಿದ 26 ಪುಟಗಳ ಉತ್ತರದಿಂದ ಮೇಲಿನ ಎಲ್ಲಾ ಭರವಸೆಗಳು ಹುಸಿಯಾಗಿವೆ. ಮನಮೋಹನ್ ಸಿಂಗ್‌ರಿಗೆ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ಜನತೆಗೆ ನೀಡಿದ ಭರವಸೆಗಿಂತ ಅಮೆರಿಕಾದ ಅಧ್ಯಕ್ಷರಿಗೆ ನೀಡಿದ ಭರವಸೆಯೇ ಮಿಗಿಲು ಎಂಬುದು ಸತ್ಯವಾಗಿದೆ.

ಮೋಸಗಾರ ಮನಮೋಹನ ಸಿಂಗ್?

90 ರ ದಶಕದಲ್ಲಿ ಗ್ಯಾಟ್ ಒಪ್ಪಂದದ ವಿರುದ್ಧ ನಡೆದ ಹೋರಾಟದ ಸಂದರ್ಭದಲ್ಲಿ ಮನಮೋಹನ್ ಸಿಂಗ್‌ರು ಕಾಂಗ್ರೆಸ್ ಸರ್ಕಾರದಲ್ಲಿ ಹಣಕಾಸು ಸಚಿವರಾಗಿದ್ದರು. ಗ್ಯಾಟ್ ಒಪ್ಪಂದದ ಪರಿಣಾಮ ಬಡ ಜನರ ಮೇಲೆ, ರೈತರ ಮೇಲೆ ಹೇಗಾಗಿದೆ ಎಂಬುದು ಎಲ್ಲರಿಗೂ ತಿಳಿದಿದೆ. 2 ಲಕ್ಷಕ್ಕೂ ಹೆಚ್ಚು ರೈತರು ಆತ್ಮಹತ್ಯೆಗೆ ಒಳಗಾಗಿದ್ದಾರೆ. ಹೀಗಾಗುತ್ತದೆ ಎಂಬುದನ್ನು ಮೊದಲೇ ಮನಗಂಡಿದ್ದ ಎಡಪಕ್ಷಗಳು ಪ್ರಗತಿಪರ ಸಂಘಟನೆಗಳು ಗ್ಯಾಟ್ ಒಪ್ಪಂದದ ವಿರುದ್ಧ ನಿರಂತರ ಹೋರಾಟ ನಡೆಸಿದ್ದವು. ಆ ಸಂದರ್ಭದಲ್ಲಿ ಒಂದು ಹಾಡು ಹೇಳುತ್ತಿದ್ದರು "ಮಹಾಮೋಸಗಾರ, ಈ ಮನಮೋಹನ ಸಿಂಗ್..." ಎಂದು.

ಭಾರತ - ಅಮೆರಿಕಾ ಪರಮಾಣು ಒಪ್ಪಂದದ ಕುರಿತು ಮನಮೋಹನ ಸಿಂಗರು ನೀಡಿದ ಭರವಸೆಗಳಿಗೆ ವಿರುದ್ಧವಾಗಿ ಬುಶ್ ಆಡಳಿತ ಅಲ್ಲಿನ ಸಂಸತ್ತಿಗೆ ಪತ್ರ ಬರೆದಿದೆ. ಅದೂ ಜನವರಿ 08 ರಲ್ಲಿ. ಅಂದರೆ 7 ತಿಂಗಳ ಹಿಂದೆ. ಅಮೆರಿಕಾದ ಅಧ್ಯಕ್ಷ ಬುಶ್‌ರನ್ನು ಭಾರತದ ಪ್ರಧಾನ ಮಂತ್ರಿಗಳು ಆತ್ಮೀಯ ಮಿತ್ರ ಎಂದು ಹೇಳಿಕೊಳ್ಳುವ ಸಿಂಗ್‌ರಿಗೆ ಜನವರಿಯಲ್ಲಿ ಬರೆದ ಪತ್ರದ ಬಗ್ಗೆ ಗೊತ್ತಿಲ್ಲವೇ? ಖಂಡಿತಾ ಗೊತ್ತಿತ್ತು. ಬೇಕೆಂತಲೇ ಭಾರತದ ಜನತೆಯಿಂದ ಸಂಸತ್ತಿನಿಂದ ಅದನ್ನು ಮುಚ್ಚಿಟ್ಟಿದ್ದಾರೆ.

ಅಣು ಇಂಧನ ಆಯೋಗದ ಅಧ್ಯಕ್ಷರಾದ ಅನಿಲ್ ಕಕ್ಕೊಡ್ಕರ್ ಹೇಳುವ ಪ್ರಕಾರ (ಟೈಂಸ್ ಆಫ್ ಇಂಡಿಯಾ, ಸೆ.5) 3 ತಿಂಗಳ ಹಿಂದೆಯೇ ಆ ಪತ್ರದ ಬಗ್ಗೆ ತಿಳಿದಿತ್ತು. ಹಾಗಾದರೆ ಜನರಿಂದ ಮುಚ್ಚಿಟ್ಟಿದ್ದೇಕೆ?

ಸೋಜಿಗದ ಸಂಗತಿಯೆಂದರೆ ಐಎಇಎ ಮುಂದೆ ಇಡಬೇಕಾಗಿದ್ದ ಕರಡು ಒಪ್ಪಂದವನ್ನು ಕೂಡಾ 'ಕಾನ್‌ಫಿಡೆನ್ಷಿಯಲ್'(ರಹಸ್ಯ) ಎಂಬ ಕಾರಣ ನೀಡಿ ಭಾರತದಲ್ಲಿ ಪ್ರಕಟಣೆ ಮಾಡಿರಲಿಲ್ಲ. ಆದರೆ ಐಎಇಎ ಅದನ್ನು ವೆಬ್ ಸೈಟ್‌ನಲ್ಲಿ ಪ್ರಕಟ ಮಾಡಿತ್ತು.

ಹಾಗೆಯೇ ಪರಮಾಣು ಒಪ್ಪಂದದ ಕುರಿತಾಗಿ ಭಾರತ ವಿರೋಧಿ ನಿಲುವಿನಿಂದ ಕೂಡಿದ ಪತ್ರವನ್ನು ಏಳು ತಿಂಗಳ ಹಿಂದೆಯೇ ಬುಶ್ ಬರೆದಿದ್ದರೂ ಪ್ರಧಾನ ಮಂತ್ರಿ ಅದನ್ನು ಜನತೆಗಾಗಲಿ, ಸಂಸತ್ತಿಗಾಗಲೀ ತಿಳಿಸಿರಲಿಲ್ಲ. ಆದರೆ ಅಮೆರಿಕಾದ ದಿನಪತ್ರಿಕೆ ಅದನ್ನು ಪ್ರಕಟಿಸಿತು.

ಹಾಗಾದರೆ, ಅಂದು ಗ್ಯಾಟ್ ಒಪ್ಪಂದದ ವಿರುದ್ಧ ನಡೆದ ಚಳುವಳಿಯ ಸಂದರ್ಭದಲ್ಲಿ ಹೇಳಿದ ಹಾಡಿನ ಸಾಲು ಸತ್ಯ ಅಲ್ಲವೇ?

ಈ ಸಂದರ್ಭದಲ್ಲಿ 05.09.2008 ರ ಪ್ರಜಾವಾಣಿ ಪತ್ರಿಕೆಯ ಸಂಪಾದಕೀಯದ ಕೆಲವು ಸಾಲುಗಳನ್ನು ಗಮನಿಸುವುದು ಅಗತ್ಯ ".....ಒಪ್ಪಂದ ಭಾರತದ ಪರಮಾಣು ಕಾರ್ಯಕ್ರಮದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ ಎಂದು ಸಿಂಗ್ ಅವರು ಸಂಸತ್ತಿನಲ್ಲಿ ಹೇಳಿದ್ದರು. ಆದರೆ ಈಗ ಬಹಿರಂಗವಾಗಿರುವ ಪತ್ರದ ಪ್ರಕಾರ ಭಾರತ ಮತ್ತೊಮ್ಮೆ ಪರಮಾಣು ಅಸ್ತ್ರವನ್ನು ಪ್ರಯೋಗಾರ್ಥ ಪರೀಕ್ಷೆ ನಡೆಸಿದರೆ ಅಂದಿನಿಂದಲೇ ಪರಮಾಣು ಒಪ್ಪಂದ ರದ್ದಾಗಲಿದೆ. ಪರಮಾಣು ಇಂಧನ ಪೂರೈಕೆ ನಿಲ್ಲಲಿದೆ. ಹೈಡ್ ಕಾಯ್ದೆಯೂ ಇದನ್ನೇ ಹೇಳುತ್ತದೆ. ಈ ವಿಚಾರ ಭಾರತಕ್ಕೆ ತಿಳಿದಿದ್ದು ಎಂದು ಅಮೆರಿಕ ಹೇಳಿರುವುದನ್ನು ನೋಡಿದರೆ ಕೇಂದ್ರ ಸರ್ಕಾರ ಈ ಅಂಶವನ್ನು ಮುಚ್ಚಿಟ್ಟಿದೆ ಎಂದಾಯಿತು. ಭಾರತಕ್ಕೆ ಈ ವಿಚಾರ ತಿಳಿದಿರಲಿಲ್ಲ ಎನ್ನುವುದಾದರೆ ಬುಷ್ ಮೋಸ ಮಾಡಿದ್ದಾರೆ ಎಂದೇ ಅರ್ಥ....".

ಬಾಲಕೃಷ್ಣ ಶೆಟ್ಟಿ

ಅಡುಗೆ ಕೆಟ್ಟರೆ ತಲೆ ಮೇಲೆ ಮಣ್ಣು ಹೊಯ್ದುಕೊಳ್ಳುವುದಾ?

ಅನಿಲ್ ಕಾಕೋಡ್ಕರ್ ಅಂತ ಅವರ ಹೆಸರು. ಭಾರತದ ಅಣುಶಕ್ತಿ ಆಯೋಗದ ಅಧ್ಯಕ್ಷರು. ಎಂಥಾ ಜವಾಬ್ದಾರಿ ಸ್ಥಾನ ಅದು. ಅಮೆರಿಕದ ಅಧ್ಯಕ್ಷ ಜಾರ್ಜ್ ಬುಶ್ ತನ್ನ ದೇಶದ ಸಂಸದರಿಗೆ ಬರೆದ ಪತ್ರದ ಬಗೆಗೆ ಹಾಗೂ ಅದರಲ್ಲಿ ಭಾರತವು ಒಂದೊಮ್ಮೆ ಅಣ್ವಸ್ತ್ರ ಪರೀಕ್ಷೆ ನಡೆಸಿದರೆ ಅಮೆರಿಕವು ಅಣು ಇಂಧನ ಪೂರೈಕೆಯನ್ನು ಸ್ಥಗಿತಗೊಳಿಸುತ್ತದೆ ಎನ್ನುವ ಸ್ಪಷ್ಟನೆಯ ಬಗೆಗೆ ಕೇಳಿದರೆ ಅವರು ಉತ್ತರಿಸಿದ್ದೇನು ಗೊತ್ತೇ?

"ನಮಗಾಗಿ ಏನನ್ನಾದರೂ ಉಣಬಡಿಸಿದ್ದಾರೆ ಎಂಬ ಕಾರಣಕ್ಕೆ ನಾವು ಅದನ್ನು ಏಕೆ ಊಟ ಮಾಡಬೇಕು. ಅದು ನಮ್ಮ ಆರೋಗ್ಯಕ್ಕೆ ಮಾರಕ ಎಂದು ಕಂಡುಬಂದರೆ ನಾವದನ್ನು ತಿನ್ನಬೇಕಿಲ್ಲ" ಎನ್ನುತ್ತಾರೆ ಅವರು. ಅಂದರೆ ಅನಿವಾರ್ಯವಾದರೆ ಅಮೆರಿಕಾ - ಭಾರತಗಳ ನಡುವಿನ ಅಣು ಒಪ್ಪಂದವನ್ನು ಮುರಿದು ಭಾರತ ಹೊರಬರಬಹುದು ಅಂತ ಅವರ ಮಾತಿನ ಅರ್ಥ.

ಈ ರೀತಿ ಒಪ್ಪಂದದಿಂದ ಹೊರಬಂದ ಮೇಲೆ ಬೇರೆ ದಾರಿ ಏನು ಅಂತ ಕೇಳಿದರೆ ಅವರು ಅದೇ ಅಡುಗೆ, ಊಟದ ಭಾಷೆಯಲ್ಲಿ "ಮೊದಲು ಅಡುಗೆ ಆಗಲಿ. ಆಮೇಲೆ ರುಚಿ ನೋಡೋಣ. ಆ ನಂತರ ಅದು ಕೆಟ್ಟದ್ದೋ, ಒಳ್ಳೆಯದೋ ತೀರ್ಮಾನ ಮಾಡೋಣ" ಎನ್ನುತ್ತಾರೆ.

ಅದೆಲ್ಲಾ ಸರಿ ಅಡುಗೆ ಕೆಟ್ಟು ಹೋದರೆ ಬಿಸಾಡಬಹುದು. ಆದರೆ ಅಡುಗೆ ಮಾಡಲು ಆದ ಖರ್ಚು ತುಂಬಿಕೊಡುವವರು ಯಾರು? ಹೋಗಲಿ ಅದೇನು ಹತ್ತು, ಇಪ್ಪತ್ತು, ನೂರು, ಸಾವಿರ ಕೋಟಿಗಳ ವ್ಯವಹಾರವಾ? ಜನರ ತೆರಿಗೆಯ ಹಣದಿಂದ ಲಕ್ಷಾಂತರ ಕೋಟಿ ರೂಪಾಯಿಗಳನ್ನು ಅಮೆರಿಕಾ ಕೊಡುವ ಅಣು ರಿಯಾಕ್ಟರ್‌ಗಳ ಮೇಲೆ ಸುರಿದು ಆಮೇಲೆ ಒಂದೊಮ್ಮೆ 'ಅಡುಗೆ ಕೆಟ್ಟು ಹೋಯ್ತು' ಅಂದರೆ ಏನು ತಲೆ ಮೇಲೆ ಮಣ್ಣು ಹೋಯ್ದು ಕೊಳ್ಳುವುದಾ?! ಬೇಜವಾಬ್ದಾರಿ ಹೇಳಿಕೆಗೂ ಒಂದು ಮಿತಿ ಬೇಡವಾ?



ಬಿಜೆಪಿಯ ನೂರು ದಿನಗಳು

ಕುರ್ಚಿ ಪೂಜೆಯೊಂದಿಗೆ ಶುರುವಾದ ಬಿಜೆಪಿ ಸರ್ಕಾರವು ನೂರು ದಿನಗಳಲ್ಲಿ ಸಾಧಿಸಿದ್ದೇನು? ಎಂದು ಪರಿಶೀಲಿಸುವ ಮೂರು ಪ್ರತ್ಯೇಕ ಲೇಖಗಳು ಜನಶಕ್ತಿ ಓದುಗರಿಗಾಗಿ

ಹಲವು ವೈಫಲ್ಯಗಳು ಹಲವು ದ್ರೋಹಗಳು

ನಿತ್ಯಾನಂದ ಸ್ವಾಮಿ


ರಾಜ್ಯದಲ್ಲಿ ವಿರೋಧಿ ಪಕ್ಷಗಳ ಶಾಸಕರಿಗೆ ಅಧಿಕಾರ ಮತ್ತು ಹಣದ ಆಮಿಷವೊಡ್ಡಿ, ತಮ್ಮ ಚುನಾಯಿತ ಸ್ಥಾನಗಳಿಗೆ ರಾಜೀನಾಮೆ ಕೊಡಿಸಿ, ಆಡಳಿತ ಪಕ್ಷಕ್ಕೆ ಪಕ್ಷಾಂತರ ಮಾಡಿಸುವ ನೀತಿಗೆಟ್ಟ ರಾಜಕೀಯದ ಹೊಸ ಅಧ್ಯಾಯವನ್ನೇ ಆರಂಭಿಸಿದ ಬಿಜೆಪಿ ತನ್ನ ವೈಫಲ್ಯಗಳನ್ನು ಮರೆಮಾಚಲು 100 ದಿನಗಳ ಸಾಧನೆಯ ನಾಟಕವನ್ನು ಪ್ರದರ್ಶಿಸುತ್ತಿದೆ. ಅದರ ಚುನಾವಣಾ ಭರವಸೆಗಳಲ್ಲಿ ಅನೇಕ ಭರವಸೆಗಳು ಸುಳ್ಳಾಗಿವೆ. ಜನರ ತುರ್ತು ಸಮಸ್ಯೆಗಳಿಗೆ, ಪರಿಹಾರ ಒದಗಿಸುವಲ್ಲಿ ಅದು ಸಂಪೂರ್ಣ ವಿಫಲವಾಗಿದೆ. ?ಅಭಿವೃದ್ಧಿ? ಕೇವಲ ಅದು ಜಪಿಸುತ್ತಿರುವ ಮಂತ್ರವಾಗಿ ಉಳಿದಿದೆ. ?ಬಿಜೆಪಿಯೇ ಪರಿಹಾರ? ಎಂಬ ಅದರ ಘೋಷಣೆ ಒಂದು ಪೊಳ್ಳು ಘೋಷಣೆಯಾಗಿ ಬಿಟ್ಟಿದೆ.

ರೈತರನ್ನು ಬಲಿತೆಗೆದುಕೊಂಡ ಸರ್ಕಾರ

ರೈತರ ಹೆಸರಿನಲ್ಲಿ ಪ್ರಮಾಣ ವಚನ ಮಾಡಿ ಅಧಿಕಾರವನ್ನು ವಹಿಸಿಕೊಂಡ ಯಡಿಯೂರಪ್ಪನವರ ಸರ್ಕಾರ ರೈತರಿಗೆ ಕೊಟ್ಟ ಮೊದಲ ಕಾಣಿಕೆಯೇ? ಹಾವೇರಿಯ ಗೋಲಿಬಾರ್. ರಸಗೊಬ್ಬರಕ್ಕಾಗಿ ಬೀದಿಗಿಳಿದಿದ್ದ ರೈತರ ಮೇಲೆ ಅಂದು ಹಾವೇರಿಯಲ್ಲಿ ಅನಗತ್ಯವಾಗಿ ಪೋಲೀಸರು ಗುಂಡು ಹಾರಿಸಿ ಇಬ್ಬರು ರೈತರನ್ನು ಆಹುತಿ ತೆಗೆದುಕೊಂಡಿದ್ದರು. ಮುಖ್ಯಮಂತ್ರಿ ಯಡಿಯೂರಪ್ಪನವರು ಪೋಲಿಸರ ಕೃತ್ಯವನ್ನು ಸಮರ್ಥಿಸಿದ್ದರು.

ಜನ ಚಳುವಳಿಗಳನ್ನು ಸಹಿಸದ ಸರ್ಕಾರ

ರಾಜ್ಯದಲ್ಲಿ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಾಗಿನಿಂದ ಜನ ಚಳುವಳಿಗಳನ್ನು ಪೋಲೀಸರ ಮೂಲಕ ದಮನ ಮಾಡುವ ಪ್ರಯತ್ನ ಹೆಚ್ಚಾಗಿದೆ. ಬೀಜ, ರಸಗೊಬ್ಬರ ಪೂರೈಕೆಗಾಗಿ ಒತ್ತಾಯಿಸಿ ಪ್ರತಿಭಟಿಸುತ್ತಿದ್ದ ರೈತರ ಮೇಲೆ ದಾವಣಗೆರೆ, ಧಾರವಾಡ, ಹುಬ್ಬಳ್ಳಿ, ಗುಲ್ಬರ್ಗಾ, ತುಮಕೂರು, ಹಾಸನ, ಕೋಲಾರ, ವಿಜಾಪುರ, ಬಾಗಲಕೋಟೆ, ನಂಜನಗೂಡು, ಹೊನ್ನಾಳಿ, ಹೊಳಲ್ಕೆರೆ, ಹಿರಿಯೂರು, ಹರಪನಹಳ್ಳಿ ಮೊದಲಾದ ಕಡೆ ಲಾಠಿ ಪ್ರಹಾರ ಮಾಡಲಾಗಿದೆ. ನೂರಾರು ರೈತರ ಮೇಲೆ ಸುಳ್ಳು ಪ್ರಕರಣಗಳನ್ನು ದಾಖಲು ಮಾಡಿ, ಹಲವು ದಿನಗಳವರೆಗೆ ಬಂಧಿಸಿಟ್ಟು ಈಗ ಕೋರ್ಟಿಗೆ ಅಲೆದಾಡುವಂತೆ ಮಾಡಲಾಗಿದೆ.


ಹಾವೇರಿ ಗೋಲಿಬಾರ್

ನೀರಿನ ದರ ಏರಿಕೆ ಮತ್ತು ಬಿಲ್ ವಸೂಲಿಯನ್ನು ಖಾಸಗಿಯವರಿಗೆ ವಹಿಸಿಕೊಟ್ಟ ಮಂಗಳೂರು ಮಹಾನಗರ ಪಾಲಿಕೆಯ ಕ್ರಮವನ್ನು ಪ್ರತಿಭಟಿಸಿ ಧರಣಿ ನಡೆಸುತ್ತಿದ್ದ ಸಿಪಿಐ(ಎಂ) ಮತ್ತು ಡಿವೈಎಫ್ಐ ಕಾರ್ಯಕರ್ತರ ಮೇಲೆ ಪೋಲೀಸರು ಅಮಾನುಷವಾಗಿ ಲಾಠಿ ಪ್ರಹಾರ ಮಾಡಿದ್ದಾರೆ. ಮಹಿಳೆಯರನ್ನು ಬಿಡದೆ ಬೆನ್ನಟ್ಟಿ ಹೊಡೆದಿದ್ದಾರೆ. ಪ್ರಕರಣದಲ್ಲಿ ಹಲವಾರು ಗಾಯಗೊಂಡಿದ್ದಾರೆ. ಭಾಗವಹಿಸಿದ್ದವರ ವಿರುದ್ಧ ಪೋಲೀಸರು ಸುಳ್ಳು ಮೊಕದ್ದಮೆಯನ್ನು ಹೂಡಿದ್ದಾರೆ.

ಆಗಸ್ಟ್ 20 ರಂದು ನಡೆದ ಸಾರ್ವತ್ರಿಕ ಮುಷ್ಕರ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ವಿವಿಧ ಸಂಘಟನೆಗಳ ಕಾರ್ಯಕರ್ತರನ್ನು ಮಂಗಳೂರು, ಕೋಲಾರ, ಭಟ್ಕಳ, ಮಳವಳ್ಳಿ, ಮಂಡ್ಯ, ಮೊದಲಾದ ಕಡೆ ಪೋಲೀಸರು ಬಂಧಿಸಿದ್ದಾರೆ. ಕೋಲಾರದಲ್ಲಿ ವಿದ್ಯಾರ್ಥಿಗಳ ಮೆರವಣಿಗೆಯನ್ನು ಸಂಘಟಿಸಿದ ಎಸ್ಎಫ್ಐ ಮುಖಂಡ ಅಂಬರೀಶ್ ಎಂಬುವರ ಮೇಲೆ ಪೋಲೀಸರು ಹಲ್ಲೆ ಮಾಡಿ, ಕೈಗಳಿಗೆ ಬೇಡಿ ಹಾಕಿ ಹಿಂಸಿಸಿದ್ದಾರೆ.

ಹೀಗೆ ಬಿಜೆಪಿ ಅಧಿಕಾರದ ಈ 100 ದಿನಗಳಲ್ಲಿ ನೂರಾರು ಕಡೆ ಪೋಲೀಸರನ್ನು ಬಳಸಿ ಪ್ರಜಾಸತ್ತಾತ್ಮಕ ಚಳುವಳಿಗಳನ್ನು ದಮನ ಮಾಡಲು ಯತ್ನಿಸುವ ಮೂಲಕ ಈ ಸರ್ಕಾರ ಜನಪರ ಚಳುವಳಿಗಳನ್ನು ಸಹಿಸುವುದಿಲ್ಲ ಎಂದು ಸಾಬೀತು ಆಗಿದೆ.. ಲಾಠಿಚಾರ್ಜ್, ಗೋಲಿಬಾರ್ ಅಂತಹ ಕ್ರಮಗಳಿಗೆ ಪೋಲೀಸ್ ಅಧಿಕಾರಿಗಳು ನಿರ್ದೇಶನ ನೀಡುವ ಬದಲು ಬಿಜೆಪಿಯ ಶಾಸಕರು, ಮಂತ್ರಿಗಳು ನಿರ್ದೇಶನ ನೀಡುವುದು ಈ ಅವಧಿಯ ಅಪಾಯಕಾರಿ ಬೆಳವಣಿಗೆಯಾಗಿದೆ.

ಲಜ್ಜೆಗೇಡಿ ಪಕ್ಷಾಂತರವೇ ಪ್ರಮುಖ ಸಾಧನೆ

ಬೇರೆ ಪಕ್ಷಗಳ ಶಾಸಕರಿಗೆ ಹಣ ಮತ್ತು ಮಂತ್ರಿ ಸ್ಥಾನದ ಆಮಿಷವೊಡ್ಡಿ ಅವರನ್ನು ಪಕ್ಷಕ್ಕೆ ಸೇರಿಸಿಕೊಳ್ಳುವ ಮತ್ತು ಆ ಮೂಲಕ ತನ್ನ ಬುಡಭದ್ರಮಾಡಿಕೊಳ್ಳುವ ಬಿಜೆಪಿಯ ಅನೈತಿಕ ಕಾರ್ಯಚರಣೆಯೇ ಅದರ 100 ದಿನಗಳ ಪ್ರಮುಖ ಸಾಧನೆ. ಚುನಾವಣೆಯಲ್ಲಿ ಬಿಜೆಪಿಗೆ ಕನಿಷ್ಠ ಬಹುಮತ ದೊರೆತಿರಲಿಲ್ಲ. ಮೊದಲು 6 ಜನ ಪಕ್ಷೇತರ ಶಾಸಕರಿಗೆ ಹಣ ಮತ್ತು ಅಧಿಕಾರದ ಆಸೆ ತೋರಿಸಿ ಅವರ ಬೆಂಬಲ ಪಡೆದುಕೊಳ್ಳಲಾಯಿತು. ಆದರೆ ಈ ಪಕ್ಷೇತರರು ಎಲ್ಲಿ ಕೈ ಕೊಡುವರೋ ಎಂಬ ಭೀತಿಯಿಂದ ಬಿಜೆಪಿ ಹೊಸ ತಂತ್ರವೊಂದನ್ನು ರೂಪಿಸಿತು. ವಿರೋಧ ಪಕ್ಷದ ಶಾಸಕರಿಗೆ ಮಂತ್ರಿ ಪದವಿಯ ಆಸೆ ತೋರಿಸಿ, ಅವರು ತಮ್ಮ ಸ್ಥಾನಗಳಿಗೆ ರಾಜೀನಾಮೆ ಕೊಟ್ಟು ಬಿಜೆಪಿಗೆ ಸೇರುವಂತೆ ಮಾಡುವುದೇ ‘ಆಪರೇಷನ್ ಕಮಲ’ ಎಂಬ ಹೊಸ ತಂತ್ರ. ಶಾಸಕರನ್ನು ಮಾತ್ರವಲ್ಲದೆ ಪುರಸಭೆ, ನಗರ ಸಭೆಗಳ ಸದಸ್ಯರನ್ನು ಸಹ ಸೇಳೆಯುವ ಕಾರ್ಯಚರಣೆ ರಾಜ್ಯಾದ್ಯಂತ ನಡೆಯುತ್ತಿದೆ. ಇದರಿಂದ ಬಿಜೆಪಿ ಅಧಿಕಾರಕ್ಕಾಗಿ ಏನು ಬೇಕಾದರೂ ಮಾಡಲು ಸಿದ್ಧ ಎಂಬುದು ಮತ್ತೊಮ್ಮೆ ಸಾಬೀತಾಗಿದೆ.


ಮೊಸಳೆ ಕಣ್ಣೀರು

ಗಣಿ ಧಣಿಗಳ ಸರ್ಕಾರ

ರಾಜ್ಯ ಸರ್ಕಾರವನ್ನು ಗಣಿ ರೆಡ್ಡಿಗಳಿಗೆ ಒತ್ತೆ ಇಟ್ಟಿರುವುದು ಬಿಜೆಪಿಯ ಇನ್ನೊಂದು ಸಾಧನೆಯಾಗಿದೆ. ಬಳ್ಳಾರಿಯ ಗಣಿ ಧಣಿಗಳಂತೂ 3 ಪ್ರಮುಖ ಮಂತ್ರಿ ಸ್ಥಾನಗಳನ್ನು ಪಡೆದುಕೊಂಡು ನಿರಾತಂಕವಾಗಿ ತಮ್ಮ ಗಣಿ ಲೂಟಿಯನ್ನು ನಡೆಸುತ್ತಿದ್ದಾರೆ. ಅಕ್ರಮ ಗಣಿಗಾರಿಕೆಯನ್ನು ತಡೆಯಲು ರಾಜ್ಯ ಹೈಕೋರ್ಟ್ ನೀಡಿದ ಆದೇಶವನ್ನು ಜಾರಿಗೊಳಿಸಲು ಸರ್ಕಾರಕ್ಕೆ ಸಾಮರ್ಥ್ಯ ಇಲ್ಲದಂತಾಗಿದೆ. ನಿಯಮಗಳನ್ನು ಉಲ್ಲಂಘಿಸಿ ಅಕ್ರಮ ಗಣಿಗಾರಿಕೆ ಮಾಡುತ್ತಿರುವ, ಪರವಾನಿಗೆ ನೀಡಿದ ಸ್ಥಳಕ್ಕಿಂತಲೂ ಹೆಚ್ಚಿನ ಸ್ಥಳದಲ್ಲಿ ಗಣಿಗಾರಿಕೆ ನಡೆಸುತ್ತಿರುವ ದೊಡ್ಡ ದೊಡ್ಡ ಗಣಿ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳುವ ಬದಲು ಕೃಷಿಗೆ ಯೋಗ್ಯವಲ್ಲದ ತಮ್ಮ ಪಟ್ಟಾಭೂಮಿಯನ್ನು ಅಗೆದು ಅದಿರು ಹೊರತೆಗೆಯುತ್ತಿದ್ದ ರೈತರ ಮೇಲೆ ದಾಳಿ ಮಾಡಲಾಯಿತು. ರೈತರ ಹೊಲಗಳಲ್ಲಿ ಸಂಗ್ರಹಿಸಲಾಗಿದ್ದ 50 ಕೋಟಿ ರೂ.ಗಳಿಗೂ ಅಧಿಕ ಮೌಲ್ಯದ ಅದಿರನ್ನು ವಶಪಡಿಸಿಕೊಂಡು ತೀರಾ ಕಡಿಮೆ ಬೆಲೆ ಹರಾಜು ಹಾಕಲಾಯಿತು. ಈ ಅಕ್ರಮ ಹರಾಜಿನ ಲಾಭ ದೊಡ್ಡ ಗಣಿಗಾರರಿಗೆ ಸಿಗುವಂತಾಯಿತು.

ಭೂ ಗಳ್ಳರ ಹಿಡಿತ

ಬೆಂಗಳೂರು ನಗರ ಸುತ್ತಮುತ್ತ ಭೂ ಗಳ್ಳರು ಕಬಳಿಸಿದ್ದ 46,000 ಎಕರೆ ಸರ್ಕಾರಿ ಭೂಮಿಯನ್ನು ಸರ್ಕಾರ ಸ್ವಾಧೀನಪಡಿಸಿಕೊಂಡಿದ್ದರೂ ಅದನ್ನು ಸಾರ್ವಜನಿಕ ಉದ್ದೇಶಕ್ಕೆ, ನಿವೇಶನರಹಿತ ಬಡವರಿಗಾಗಿ ನಿವೇಶನಗಳನ್ನು ವಿತರಿಸಲಿಕ್ಕೆ ಮುಂದಾಗುವ ಬದಲು ಆ ಭೂಮಿಯನ್ನು ಹರಾಜು ಮಾಡಿ ಮತ್ತೆ ಭೂ ಮಾಫಿಯಾ ಮತ್ತು ರಿಯಲ್ ಎಸ್ಟೇಟ್ ದಂಧೆಗಾರರಿಗೆ ಒಪ್ಪಿಸಲು ಹೊರಟಿದೆ ಈ ಸರ್ಕಾರ. ರಾಜ್ಯದ ಇತರ ಕಡೆಗಳಲ್ಲಿ ಶ್ರೀಮಂತರು, ಭೂಗಳ್ಳರು ಕಬಳಿಸಿಕೊಂಡಿರುವ ಸರ್ಕಾರಿ ಭೂಮಿಯನ್ನು ಸ್ವಾಧೀನಪಡಿಸಿಕೊಂಡು ಬಡವರಿಗೆ, ದಲಿತರಿಗೆ ವಿತರಣೆ ಮಾಡಲು ಸರ್ಕಾರ ಹಿಂದೇಟು ಹಾಕುತ್ತಿದೆ.

ವರ್ಗಾವಣೆ ದಂಧೆಯಲ್ಲಿ ದಾಖಲೆ

ಯಡಿಯೂರಪ್ಪ ಸರ್ಕಾರ ವರ್ಗಾವಣೆ ದಂಧೆಯಲ್ಲಿ ದಾಖಲೆ ನಿರ್ಮಿಸಿದೆ. ತನ್ನ ನೀತಿಗೆಟ್ಟ ರಾಜಕೀಯಕ್ಕೆ ಬೇಕಾಗುವ ಹಣವನ್ನು ಗಣಿ ಧಣಿಗಳಿಂದ ಮತ್ತು ಭೂ ಮಾಫಿಯಾಗಳಿಂದ ಮಾತ್ರವಲ್ಲದೆ ಸರ್ಕಾರಿ ಸಿಬ್ಬಂದಿಯ ವರ್ಗಾವಣೆಯ ಮೂಲಕವೂ ವಸೂಲಿ ಮಾಡಲಾಗುತ್ತಿದೆ. ರಾತ್ರೋರಾತ್ರಿ ನೂರಾರು ಪೋಲೀಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಲಾಗಿದೆ. ಜವಾನನಿಂದ ಹಿಡಿದು ಮುಖ್ಯ ಕಾರ್ಯದರ್ಶಿಯವರೆಗೆ ಎಲ್ಲ ಸರ್ಕಾರಿ ನೌಕರರ ವರ್ಗಾವಣೆಯನ್ನು ಮುಖ್ಯ ಮಂತ್ರಿ ಯಡಿಯೂರಪ್ಪನವರೇ ಮಾಡುತ್ತಿದ್ದಾರೆ. ಸಚಿವರು ಯಾರೂ ಮುಖ್ಯಮಂತ್ರಿ ಅನುಮತಿ ಇಲ್ಲದೆ ವರ್ಗಾವನೆ ಮಾಡುವಂತಿಲ್ಲ. ಗೃಹ, ಅರಣ್ಯ, ಹಣಕಾಸು, ಲೋಕೋಪಯೋಗಿ, ನೀರಾವರಿ ಮೊದಲಾದ ಪ್ರಮುಖ ಇಲಾಖೆಗಳ ಅಧಿಕಾರಿಗಳ ವರ್ಗಾವನೆಗೆ ಕೋಟಿಗಟ್ಟಲೆ ಲಂಚ ಪಡೆಯಲಾಗುತ್ತಿದೆ ಎನ್ನಲಾಗುತ್ತಿದ್ದು, ಇಂತಹ ಭ್ರಷ್ಟ ಸರ್ಕಾರವನ್ನು ಹಿಂದೆಂದೂ ಕಂಡಿರಲಿಲ್ಲ ಎಂಬ ಮಾತು ಅಧಿಕಾರಿ ವರ್ಗದಲ್ಲಿ ಕೇಳಿ ಬರುತ್ತಿದೆ.

ಕ್ರಿಮಿನಲ್‌ಗಳ ಕೂಟ

ಯಡಿಯೂರಪ್ಪನವರ ಈ ಸರ್ಕಾರ ಕ್ರಿಮಿನಲ್‌ಗಳ ಕೂಟವಾಗಿದೆ. ರಾಜ್ಯ ಮಂತ್ರಿ ಮಂಡಲದಲ್ಲಿ 10 ಜನ ಮಂತ್ರಿಗಳು ಕ್ರಿಮಿನಲ್ ಮೊಕದ್ದಮೆಗಳನ್ನು ಎದುರಿಸುತ್ತಿದ್ದಾರೆ. 8 ಜನ ಮಂತ್ರಿಗಳ ವಿರುದ್ಧ ಈಗಾಗಲೇ ಆರೋಪಪಟ್ಟಿ ಸಲ್ಲಿಸಲಾಗಿದೆ. ಇವರೆಲ್ಲ ಮಂತ್ರಿಗಳಾಗಿ ವಿಜೃಂಭಿಸುತ್ತಿರುವುದೂ ಈ ಸರ್ಕಾರದ ಸಾಧನೆ. ಬೇರೆ ಪಕ್ಷಗಳಿಂದ ಪಕ್ಷಾಂತರ ಮಾಡಿಸಿ ಇತ್ತೀಚಿಗೆ ಪಕ್ಷಕ್ಕೆ ಸೇರಿಸಿಕೊಂಡ ಶಾಸಕರೂ ಕ್ರಿಮಿನಲ್ ಹಿನ್ನೆಲೆಯುಳ್ಳವರಾಗಿದ್ದಾರೆ.

ಕೋಮುವಾದಿ ಶಕ್ತಿಗಳಿಗೆ ಕುಮ್ಮಕ್ಕು

ಸರ್ಕಾರದ ಮೇಲೆ ಆರ್‌ಎಸ್‌ಎಸ್ ಹಿಡಿತ ಹೆಚ್ಚಾಗಿದೆ. ಪರಿಣಾಮವಾಗಿ ಕೋಮುವಾದಿ ಶಕ್ತಿಗಳಿಗೆ ಎಲ್ಲಿಲ್ಲದ ಕುಮ್ಮಕ್ಕೂ ಸಿಕ್ಕಂತಾಗಿದೆ.

ಸುಳ್ಳಾದ ಭರವಸೆಗಳು : ಬಿಜೆಪಿ ರಾಜ್ಯದ ಜನತೆಗೆ ಚುನಾವಣೆಯಲ್ಲಿ ನೂರಾರು ಭರವಸೆಗಳನ್ನು ನೀಡಿತ್ತು. ಆದರೆ ಅದರ ಬಹಳಷ್ಟು ಭರವಸೆಗಳು ಸುಳ್ಳಾಗಿವೆ.

ಕೆ.ಜಿ.ಗೆ 2 ರೂ.ದರದಲ್ಲಿ ಅಕ್ಕಿ ಕೊಡುವುದಾಗಿ ಕೊಟ್ಟ ಭರವಸೆಯನ್ನು ಅದು ಮರೆತು ಬಿಟ್ಟಿದೆ. ಬಿಪಿಎಲ್ ಕಾರ್ಡ್‌ಗಳನ್ನು ಪಡೆಯಲು ಕುಟುಂಬದ ವಾರ್ಷಿಕ ಆದಾಯ ಮಿತಿಯನ್ನು 30,000 ರೂ.ಗಳಿಗೆ ಹೆಚ್ಚಿಸುವ ಭರವಸೆಯನ್ನೂ ಅದು ಕೈಬಿಟ್ಟಿದೆ.



ರೈತರಿಗೆ ಉಚಿತ ವಿದ್ಯುತ್ ಪೂರೈಸುವ ಭರವಸೆಯನ್ನು ಹಿಂದಿನ ಸರ್ಕಾರಗಳು ಮನ್ನಾ ಮಾಡಿದ ವಿದ್ಯುತ್ ಬಾಕಿಗಳ ವಸೂಲಿಗೆ ಮತ್ತು ಪಂಪ್ ಸೆಟ್‌ಗಳ ಸಾರ್ವತ್ರಿಕ ಮಿಟರೀಕರಣಕ್ಕೆ ಬಳಸಲಾಗುತ್ತಿದೆ.

ಅಧಿಕಾರಕ್ಕೆ ಬಂದರೆ ರಾಜ್ಯ ಕಬ್ಬು ಬೆಳೆಗಾರರಿಗೆ ಟನ್‌ವೊಂದಕ್ಕೆ ರೂ.160ರ ದರದಲ್ಲಿ ಸಹಾಯಧನ ಬಾಕಿ ಸಂದಾಯ ಮಾಡುವುದಾಗಿ ಭರವಸೆ ಕೊಟ್ಟಿದ್ದ ಬಿಜೆಪಿ ಈಗ ರಾಗ ಬದಲಾಯಿಸಿ ಹೊರೆಯನ್ನು ಕಾರ್ಖಾನೆಗಳ ಮೇಲೆ ಹೇರಲು ಯತ್ನಿಸುತ್ತಿದೆ.

ಕೃಷಿ ಮಾರುಕಟ್ಟೆಗೆ ವಿದೇಶಿ ಬಂಡವಾಳ ಪ್ರವೇಶಕ್ಕೆ ಅವಕಾಶ ಕಲ್ಪಿಸುವ, ರೈತ ವಿರೋಧಿ, ವರ್ತಕ ವಿರೋಧಿ ಎಪಿಎಂಸಿ ತಿದ್ದುಪಡಿ ಕಾಯ್ದೆಯನ್ನು ಪುನರ್ ಪರಿಶೀಲಿಸುವುದಾಗಿ ಭರವಸೆ ಕೊಟ್ಟಿದ್ದ ಬಿಜೆಪಿ ಈಗ ಆ ಕುರಿತು ಮೌನವಾಗಿದೆ.

ಅಭಿವೃದ್ಧಿ ಮಂತ್ರ : ಬಿಜೆಪಿ ಸರ್ಕಾರದ ಈ ಸಲದ ಚೊಚ್ಚಲ ಬಜೆಟ್ ಅಭಿವೃದ್ಧಿ ಪರ ಬಜೆಟ್ ಎಂದು ಬಿಂಬಿಸಲಾಗಿತ್ತು. ಆದರೆ ವಿದ್ಯುತ್ ಉತ್ಪಾದನೆ ಆದ್ಯತೆಯ ಕ್ಷೇತ್ರಗಳಿಗೆ ಒದಗಿಸಲಾಗಿರಲಿಲ್ಲ. ಬಜೆಟ್‌ನಲ್ಲಿ ಪ್ರಕಟಿಸಿರುವ ಬಹುತೇಕ

ಪುಟ 14ಕ್ಕೆ

ಪ್ರಜಾಪ್ರಭುತ್ವ ವಿನಾಶಕ ಬಿಜೆಪಿ ಸರ್ಕಾರ

ಜಿ.ಎನ್.ನಾಗರಾಜ್

ರಾಜ್ಯದಲ್ಲಿ ಎಲ್ಲೆಲ್ಲಿಯೂ ವಿಘ್ನ ವಿನಾಶಕನ ಸ್ಮರಣೆ. ಆದರೆ ಅದೇ ಸಮಯದಲ್ಲಿ ರಾಜ್ಯಾದ್ಯಂತ ಸಾವಿರಾರು ಎಡೆಗಳಲ್ಲಿ ಕೋಮುದ್ವೇಷವನ್ನು ಬಿತ್ತಲು ಯೋಜಿತ ಕಾರ್ಯಕ್ರಮ. ಇದಕ್ಕೆ ಸ್ವಲ್ಪ ಪ್ರತಿಭಟನೆ ಬಂದರೂ ಉದ್ವಿಗ್ನ ಪರಿಸ್ಥಿತಿ ಜನರಿಗೆ ಮನೆಯಿಂದ ಹೊರಕ್ಕೆ ಬರುವುದಕ್ಕೂ ಆತಂಕ. ಅಲ್ಪಸಂಖ್ಯಾತರಂತೂ ಕೈಯಲ್ಲಿ ಜೀವ ಹಿಡಿದು ಬದುಕುವಂತಹ ಪರಿಸ್ಥಿತಿ. ಇದು ಬಿಜೆಪಿ ಸರ್ಕಾರದ ಪ್ರಜಾಪ್ರಭುತ್ವದ ಪ್ರಮುಖ ಲಕ್ಷಣ. ಸರ್ಕಾರದ ಕೋಮುವಾದಿ ಅಜೆಂಡಾ ಬಗ್ಗೆ ಇಲ್ಲಿಯವರೆಗೆ ಪ್ರತ್ಯೇಕ ಲೇಖನವನ್ನು ಗಮನಿಸಿ.

ವಿಘ್ನವಿನಾಶಕ ಕರ್ನಾಟಕದ ಎಲ್ಲರ ದೇವರಾಗಿ ಪೂಜೆಗೊಳ್ಳುತ್ತಿದ್ದ. ಅಲ್ಪಸಂಖ್ಯಾತರೂ ಗಣೇಶ ಮಂಟಪಗಳ ಕಾರ್ಯಕ್ರಮಗಳಲ್ಲಿ ಪಾಲ್ಗೊಂಡು ನಲಿಯುತ್ತಿದ್ದರು. ಆದರೆ ಇಂದು ಬಿಜೆಪಿ ಸರ್ಕಾರಕ್ಕೆ ಬಂದ ಮೇಲೆ ಸಾವಿರಾರು ಕಡೆಗಳಲ್ಲಿ ಗಣೇಶ ಎಲ್ಲರ ಗಣೇಶ ಅಲ್ಲ. ಬಿಜೆಪಿ ಗಣೇಶ, ಓಂಗಣೇಶ, ಭಗವಾಗಣೇಶ ಇತ್ಯಾದಿ. ಗಣೇಶ ಮಂಟಪಗಳಿಂದ ವಿನಾಯಕನ ಬಗ್ಗೆ ನಲ್ಮೆಯ ಹಾಡುಗಳಿಗೆ ಬದಲಾಗಿ ಹಿಂದುತ್ವದ ಹೂಂಕಾರ.

ಹೀಗೆ ಎಲ್ಲರ ಗಣೇಶ ಆರೆಸ್ಸೆಸ್ ಗಣೇಶನಾಗಿ ಪರಿವರ್ತನೆ ಮಾಡುವುದರ ಬಗ್ಗೆ ಈಗಾಗಲೇ ಸಂಘ ಪರಿವಾರ ನಡೆಸುತ್ತಿದ್ದ ಪ್ರಯತ್ನಗಳಿಗೆ ಬಿಜೆಪಿ ಸರ್ಕಾರ ಬಂದ ಮೇಲೆ ರೆಕ್ಕೆಪುಕ್ಕ ಬಂದದ್ದೇ ಬಿಜೆಪಿ ಸರ್ಕಾರದ ನೂರು ದಿನಗಳ ದೊಡ್ಡ ಸಾಧನೆಗಳಲ್ಲೊಂದು. ಬಿಜೆಪಿಯ ಪ್ರಜಾಪ್ರಭುತ್ವ ವಿನಾಶಕ ಕೃತ್ಯದ ಎರಡನೇ ಪ್ರಮುಖ ಲಕ್ಷಣ ಇದು. ಎಲ್ಲರ ದೇವರುಗಳನ್ನು ಹಿಂದುತ್ವವಾದಿ ಫ್ಯಾಸಿಸ್ಟ್ ಮೂರ್ತಿಗಳನ್ನಾಗಿಸುವುದು. ಬಾಬಾಬುಡನ್‌ಗಿರಿಯಲ್ಲಿ ನಡೆಯುತ್ತಿರುವುದು ಗೋಕರ್ಣದಲ್ಲಿ ನಡೆಯುತ್ತಿರುವುದು ಅದೇ.

ಶಾಸಕರ ಕಳ್ಳತನ ಮತ್ತು ಪಕ್ಷ ವ್ಯವಸ್ಥೆಯ ನಾಶ

ಆಪರೇಷನ್ ಕಮಲ ಎಂಬ ಹೆಸರಿನಲ್ಲಿ ಬಿಜೆಪಿ ನಡೆಸುತ್ತಿರುವ ಶಾಸಕರ ಕಳ್ಳತನ ಮುನಿಸಿಪಾಲಿಟಿಗಳ ದರೋಡೆ ಬಿಜೆಪಿ ಮಾದರಿಯ ಪ್ರಜಾಪ್ರಭುತ್ವಕ್ಕೆ ಒಂದು ದೊಡ್ಡ ಕೊಡುಗೆ. ಪ್ರಜಾಪ್ರಭುತ್ವದಲ್ಲಿ ಜನರ ಆದೇಶವೇ ಪ್ರಧಾನ. ಅದೇ ಪ್ರಜಾಸತ್ತೆಯ ಆಸ್ತಿವಾರ. ಜನಾದೇಶ ಪಡೆಯುವ ಸಾಧನವಾಗಿ ಬಹುಪಕ್ಷೀಯ ವ್ಯವಸ್ಥೆ ಪ್ರಜಾಪ್ರಭುತ್ವದ ಜೊತೆಜೊತೆಗೇ ಅಸ್ತಿತ್ವಕ್ಕೆ ಬಂದಿದೆ. ಆದರೆ ಬಿಜೆಪಿ ಜನಾದೇಶ ಪಡೆಯುವ ಸಾಧನವಾದ ಪಕ್ಷ ವ್ಯವಸ್ಥೆಯನ್ನೇ ನಾಶಗೊಳಿಸುವ ಪ್ರಯತ್ನ ಮಾಡುತ್ತಿದೆ. ಶಾಸಕರನ್ನು ರಾಜೀನಾಮೆ ಕೊಡಿಸುವ ಕೃತ್ಯಕ್ಕೆ ಪಕ್ಷಾಂತರ ಎಂದು ಕರೆಯಬಾರದು ಎಂದು ಬಿಜೆಪಿ ನಾಯಕರು ಅವಲತ್ತುಕೊಳ್ಳುತ್ತಿದ್ದಾರೆ. ಛೆ! ಛೆ!! ಅದನ್ನು ಪಕ್ಷಾಂತರ ಎಂದು ಕರೆಯಬಹುದೇ!!! ಅದು ಶಾಸಕರ ಕಳ್ಳತನ, ಇಡೀ ಪುರಸಭೆಗಳನ್ನೇ ದರೋಡೆ ಮಾಡುವ ಕೃತ್ಯ. ಈ ಮೂಲಕವಾಗಿ ಪಕ್ಷ ವ್ಯವಸ್ಥೆ ಎಂಬುದಕ್ಕೆ, ಮತದಾರರ ಪಕ್ಷಗಳ ಆಧಾರದ ಮೇಲೆ ಮತ ನೀಡುವುದಕ್ಕೆ ಅರ್ಥವೇ ಇಲ್ಲದಂತೆ ಮಾಡುತ್ತಿದ್ದಾರೆ. ಆ ಮೂಲಕ ಪ್ರಜಾಪ್ರಭುತ್ವಕ್ಕೆ ಅರ್ಥವಿಲ್ಲದಂತೆ ಮಾಡುತ್ತಿದ್ದಾರೆ. ಸಂವಿಧಾನಿಕ ಮಾರ್ಗಗಳಲ್ಲಿಯೇ ಸಂವಿಧಾನದ ನಾಶ ಮಾಡುತ್ತಿದ್ದಾರೆ.

ಜನಾದೇಶ ಪಡೆದ ಯಾವುದೇ ಪಕ್ಷ ಅಧಿಕಾರಕ್ಕೆ ಬಂದ ಮೇಲೆ ಎಲ್ಲಾ ಜನರ ಸರ್ಕಾರವಾಗಿ ಇಡೀ ರಾಜ್ಯದ ಅಭಿವೃದ್ಧಿಗಾಗಿ ಕೆಲಸ ಮಾಡಬೇಕು ಎಂಬುದು ಪ್ರಜಾಪ್ರಭುತ್ವದ ಇನ್ನೊಂದು ಆಧಾರಭೂತ ಪರಿಕಲ್ಪನೆ. ಆಳುವ ಪಕ್ಷದಲ್ಲಿದ್ದರೆ ಮಾತ್ರಕ್ಷೇತ್ರದ ಅಭಿವೃದ್ಧಿ ಎಂಬುದು ಬಿಜೆಪಿ 'ಪ್ರಜಾಪ್ರಭುತ್ವ'ದ ನೀತಿಪಾಠ.

ಒಂದು ಕಡೆ ಆಡಳಿತ ಪಕ್ಷದ ಶಾಸಕರಿಗೆ ಮಾತ್ರ ಸೀಮಿತವಾದ ಸರ್ಕಾರ, ಆ ಕ್ಷೇತ್ರಗಳಲ್ಲಿಯೂ ಆಳುವ ಪಕ್ಷದವರಿಗೆ ಮತ ಹಾಕಿದವರಿಗೆ ಮಾತ್ರ ನಮ್ಮ ಸರ್ಕಾರ ಎಂಬ ವಾದವನ್ನು ಅನೇಕ ಶಾಸಕರು, ಮಂತ್ರಿಗಳು ಸಾರುತ್ತಿದ್ದಾರೆ, ಜಾರಿಗೆ ತರುತ್ತಿದ್ದಾರೆ. ಮತ ಹಾಕಿದವರಿಗೆ ಬೆದರಿಸುತ್ತಿದ್ದಾರೆ. ಇದು ಪ್ರಜಾಪ್ರಭುತ್ವವನ್ನು ವಿರೂಪಗೊಳಿಸುತ್ತದೆ. ಈ ವಿರೂಪವು ಫ್ಯಾಸಿಸ್ಟ್ ರೂಪದ್ದಾಗಿದೆ. ಇದೇ ವಾದವನ್ನು ಬೆಳೆಸಿದರೆ ಕೇಂದ್ರ ಸರ್ಕಾರದಲ್ಲಿ ಯಾವ ಪಕ್ಷ ಅಧಿಕಾರಕ್ಕೆ ಬಂದಿದೆಯೋ ಆ ಪಕ್ಷ ಬೇರೆ ಪಕ್ಷದ ಲೋಕಸಭಾ ಸದಸ್ಯರನ್ನು ಕದಿಯುವುದಕ್ಕೆ ಅವಕಾಶ ನೀಡುತ್ತದೆ. (ಕಾಂಗ್ರೆಸ್ ಪಕ್ಷ ಬೇರೆ ಪಕ್ಷಗಳ ಸಂಸತ್ ಸದಸ್ಯರನ್ನು ಒಂದು ನಿರ್ಣಯಕ್ಕೆ ಮಾತ್ರ ಪಕ್ಷದ ವಿಪ್‌ಗೆ ವಿರುದ್ಧವಾಗಿ ಮತ ಹಾಕುವಂತೆ ಸೂಚಿಸುವ ಮೂಲಕ ಇಂತಹದ್ದೇ ಕೆಲಸವನ್ನು ಮಾಡಿದೆ ಯಾದರೂ ಅದಕ್ಕು ಬಿಜೆಪಿಯ ಕಮಲಚೌರ್ಯಕ್ಕೂ, ಇವರು ಮಂಡಿಸುತ್ತಿರುವ ವಾದಗಳಿಗೂ ಬಹಳ ಅಂತರವಿದೆ).

ಅದೇ ರೀತಿಯಲ್ಲಿ ಯಾವುದೇ ರಾಜ್ಯ ಅಭಿವೃದ್ಧಿಗೊಳ್ಳಬೇಕಾದರೆ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷ ಮತ್ತು ಅದರ ಕೂಟದವರು ಮಾತ್ರವೇ ರಾಜ್ಯದಲ್ಲಿಯೂ ಅಧಿಕಾರದಲ್ಲಿರಬೇಕು. ಜಿಲ್ಲೆ, ನಗರ, ಕ್ಷೇತ್ರಗಳ ಅಭಿವೃದ್ಧಿಗೊಳ್ಳಬೇಕಾದರೆ ರಾಜ್ಯದಲ್ಲಿರುವ ಪಕ್ಷವೇ ಇಲ್ಲೆಲ್ಲಾ ಕಡೆಯೂ ಅಧಿಕಾರದಲ್ಲಿರಬೇಕು.

ಒಟ್ಟಿನಲ್ಲಿ ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷವೇ ಪಂಚಾಯತಿ, ಪುರಸಭೆಗಳ ಮಟ್ಟದವರೆಗೂ ಅಧಿಕಾರದಲ್ಲಿರಬೇಕು, ಆ ಪಕ್ಷದವರೇ ಎಲ್ಲಾ ಕ್ಷೇತ್ರಗಳಲ್ಲಿಯೂ ಗೆಲ್ಲಬೇಕು ಎಂಬ ಏಕಪಕ್ಷ ಸರ್ವಾಧಿಕಾರವನ್ನು ಹೇರುವ ವಾದವನ್ನು ಬಿಜೆಪಿ ಬಿಂಬಿಸುತ್ತಿದೆ. ಬಿಜೆಪಿ ಜನತೆಗೆ, ಪ್ರಜಾಪ್ರಭುತ್ವಕ್ಕೆ ಎಂತಹ ಗಂಡಾಂತರಕಾರಿಯಾದ ಪಕ್ಷ ಎಂಬುದು ಇದರಿಂದ ವ್ಯಕ್ತವಾಗುತ್ತದೆ.

ಲಾಠಿ ಚಾರ್ಜ್, ಗೋಲಿಬಾರ್ ಸರ್ಕಾರ

ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಜನರಿಗೆ ಸಮಸ್ಯೆಗಳುಂಟಾದಾಗ ಜನತೆ ಸ್ವಯಂಪ್ರೇರಿತವಾಗಿ ಅಥವಾ ಯಾವುದೇ ಸಂಘಟನೆ, ರಾಜಕೀಯ ಪಕ್ಷಗಳ ನೇತೃತ್ವದಲ್ಲಿ ಪ್ರತಿಭಟಿಸುವುದು ಜನತೆಯ ಹಾಗೂ ಸಂಘಟನೆಯ ಮೂಲಭೂತ ಹಕ್ಕು. ಜನತೆ ಪ್ರತಿಭಟಿಸಿದಾಗ ಅವರ ಸಮಸ್ಯೆಗಳ ಬಗ್ಗೆ ಕಿವಿಗೊಟ್ಟು ಆಲಿಸುವುದು ಹಾಗೂ ಅದರ ಪರಿಹಾರಕ್ಕೆ ಗಮನ ನೀಡುವುದು, ಜನತೆಗೆ ವಿವರಿಸುವ ಆಡಳಿತಕ್ಕೆ ಬಂದವರ ಕರ್ತವ್ಯ. ಆದರೆ ಬಿಜೆಪಿ ಆರಂಭದ ದಿನಗಳಿಂದಲೇ ಸಣ್ಣಪುಟ್ಟ ಜನಸಂದಣಿಯಿದ್ದಾಗಲೂ ಅವರ ಸಂಕಟಕ್ಕೆ ಕಿವಿಗೊಡುವ ಗೋಜಿಗೆ ಹೋಗದೆ ಲಾಠಿ ಚಾರ್ಜ್‌ಗಳಿಗೆ ಗೋಲಿಬಾರ್‌ಗೆ ಮುಂದಾಗುವುದು ರಾಜ್ಯದ ಹಲವಾರು ಊರುಗಳಲ್ಲಿ ಮತ್ತೆ ಮತ್ತೆ ಲಾಠಿ ಚಾರ್ಜ್ ಎಸಗಿರುವುದು, ರಸಗೊಬ್ಬರದ ಸಮಸ್ಯೆಯ ಬಗ್ಗೆ ಮಾತ್ರವಲ್ಲ, ಕುಡಿಯುವ ನೀರು ಮೊದಲಾದ ಸಮಸ್ಯೆಗಳ ಬಗೆಗೆ ಕೂಡಾ ಈ ವರ್ತನೆ ತೋರಿರುವುದು ರಾಜ್ಯದಲ್ಲಿ ಮೊತ್ತ ಮೊದಲ ಬಾರಿಗೆ ಅಧಿಕಾರಕ್ಕೆ ಬಂದು ಇನ್ನೂ ನೂರು ದಿನಗಳಾಗುವ ಮೊದಲೇ ಕಂಡ ಈ ವರ್ತನೆ, ಇನ್ನು ಮುಂದಿನ ದಿನಗಳಲ್ಲಿ ಬಿಜೆಪಿ ಇನ್ನಷ್ಟು ಭದ್ರವಾಗಿ ಕುರ್ಚಿಯ ಮೇಲೆ ಕುಂತ ಮೇಲೆ ಏನಾಗಬಹುದು ಎನ್ನುವ ಆತಂಕ ರಾಜ್ಯದ ಜನತೆಯನ್ನು ಕಾಡುತ್ತಿದೆ:

ಚುನಾಯಿತ ಪ್ರತಿನಿಧಿಗಳು ಮತ್ತು ಆಡಳಿತ ಪೊಲೀಸ್ ನೀತಿ ಮತ್ತು ಸಂಘ ಪರಿವಾರ

ಈ ಎಲ್ಲಾ ಲಾಠಿ ಚಾರ್ಜ್ ಮತ್ತು ಗೋಲಿಬಾರ್ ಪ್ರಕರಣಗಳು ಯಡಿಯೂರಪ್ಪ ದರ್ಬಾರಿನಲ್ಲಿ ಪೊಲೀಸರ ಲಾಠಿ ಮತ್ತು ಬಂದೂಕುಗಳಿಗೆ ಹೆಚ್ಚಿನ ಸ್ವಾತಂತ್ರ್ಯ ಸಿಕ್ಕಿದೆ ಎಂಬುದು ಸಾಬೀತಾಗುತ್ತದೆ. ಆಳುವವರು ನಮ್ಮ ಮೇಲೆ ಕ್ರಮ ಜರುಗಿಸಿಯಾರು ಎಂಬ ಅಂಕೆಯಿಲ್ಲದ ಸಲಗ(ಮದದಾನೆ)ಯಂತೆ ಆಡಳಿತ ಯಂತ್ರ ಮುಖ್ಯವಾಗಿ ಪೊಲೀಸ್ ಯಂತ್ರ ಕೆಲಸ ಮಾಡುವ ಸೂಚನೆಗಳು ಈಗಾಗಲೇ ಸಿಕ್ಕಿವೆ.

ಅದೇ ಸಂದರ್ಭದಲ್ಲಿ ಇನ್ನೆರೆಡು ಅಪಾಯಕಾರಿ ಪ್ರವೃತ್ತಿಗಳು ವ್ಯಕ್ತವಾಗಿವೆ. ಬಿಜೆಪಿಯಲ್ಲಿ ಸಚಿವರಾಗದ ಶಾಸಕರು ದಾಂಧಲೆ ನಡೆಸಿದಾಗ ಯಾವುದೇ ಕ್ರಮವಿಲ್ಲ. ಆದರೆ ರೈತರು, ಯುವಕರು, ಮಹಿಳೆಯರ ಮೇಲೆ ಲಾಠಿ ಚಾರ್ಜ್ ಜೊತೆಗೆ ಬಂಧನ, ಕೇಸುಗಳು. ಭಜರಂಗ ದಳ, ವಿಹಿಂಪ, ಹಿಂದೂ ಸೇನೆಗಳು ಎಲ್ಲಿ ಏನು ಮಾಡಿದರೂ ಕೇಳುವವರಿಲ್ಲ. ಪೊಲೀಸ್ ಕೆಲಸವನ್ನು ಅವರಿಗೆ ವಹಿಸಿದೆಯೇ ಎಂಬ ಸಂಶಯ ಬರುವಂತೆ ವರ್ತನೆ. ಇದು ಜನರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ದಮನ ಮಾಡುತ್ತದೆ. ಕಾನೂನು ಪ್ರಕಾರ ಸುವ್ಯವಸ್ಥೆ ಎಂಬ ತತ್ವವನ್ನು ಗಾಳಿಗೆ ತೂರಿ ಕಾನೂನೂ ಇಲ್ಲ ಸುವ್ಯವಸ್ಥೆಯೂ ಇಲ್ಲ ಎನ್ನುವತ್ತ ರಾಜ್ಯವನ್ನು ಕೊಂಡೊಯ್ಯುತ್ತದೆ.

ಹೀಗೆ ಬಿಜೆಪಿಯ ಪ್ರಭುತ್ವವೆಂಬುದು ಪ್ರಜಾಪ್ರಭುತ್ವವಾಗಿರಲು ಸಾಧ್ಯವಿಲ್ಲ ಎಂಬ ಸಾಮಾನ್ಯ ನಂಬಿಕೆಯನ್ನು ಪುಷ್ಟಿಗೊಳಿಸುವಂತಿದೆ ಬಿಜೆಪಿಯ ನೂರು ದಿನಗಳ ಆಡಳಿತ. ಇನ್ನು ಇಂತಹ 17 ನೂರು ದಿನಗಳಲ್ಲಿ ಏನಾಗಬಹುದು?

11 ನೇ ರಾಜ್ಯ ಸಮ್ಮೇಳನ

13-16 ಸೆಪ್ಟೆಂಬರ್ 2008 ಚಿಕ್ಕಬಳ್ಳಾಪುರ

ಭಾರತ ವಿದ್ಯಾರ್ಥಿ ಫೆಡರೇಷನ್ - ಎಸ್ಎಫ್ಐ ನ 11 ನೇ ರಾಜ್ಯ ಸಮ್ಮೇಳನವು ಹತ್ತಿರವಾಗಿದೆ. ಕಳೆದ ಮೂರು ವರ್ಷಗಳಲ್ಲಿ ವಿದ್ಯಾರ್ಥಿ ಸಮುದಾಯ ಎದುರಿಸಿದ ಸಮಸ್ಯೆಗಳು, ನಡೆಸಿದ ಹೋರಾಟಗಳ ಒಂದು ಅವಲೋಕನ ಇಲ್ಲಿದೆ.

ವಿದ್ಯಾರ್ಥಿಗಳ ಮುಂದಿರುವ ಸಮಸ್ಯೆ - ಸವಾಲುಗಳು

ಬಿ.ರಾಜಶೇಖರಮೂರ್ತಿ

ನಾವು ಬದುಕಬೇಕು - ಬಾಳಬೇಕೆಂಬ ಆಸೆಯ ಬುತ್ತಿ ಹೊತ್ತ ಬಡ ಕಂದಮ್ಮಗಳ ಭವಿಷ್ಯ ಬರಡಾಗಿದೆ. ಬಡ - ದಲಿತ ವಿದ್ಯಾರ್ಥಿಗಳಿಗೆ ಬೆಳಕು ಕೂಡ ಅಮವಾಸೆಯ ಕತ್ತಲಾಗಿ ಕಣ್ಣುಗಳಿಗೆ ಏನೂ ಕಾಣದಂತಾಗಿ ಇವರ ಭವಿಷ್ಯವೂ ಕೂಡಾ ಕಾಣದಂತಾಗಿದೆ ಎಂಬುದಕ್ಕೆ ಉದಾಹರಣೆ ರಾಜ್ಯದ ವಿದ್ಯಾರ್ಥಿ ಸಮುದಾಯ ಎದುರಿಸುತ್ತಿರುವ ಶೈಕ್ಷಣಿಕ ಸಮಸ್ಯೆಗಳ ಆಗರ.

ಪುರಾತನ ಕಾಲದಿಂದಲೂ ಶಿಕ್ಷಣವನ್ನು ಜನಸಾಮಾನ್ಯರ ಮಕ್ಕಳಿಂದ ವಂಚಿಸಿಕೊಂಡು ಬಂದಂತೆ ಇಂದೂ ಕೂಡಾ ಬಡ ಮಕ್ಕಳನ್ನು ಶಿಕ್ಷಣದಿಂದ ವಂಚಿಸಲಾಗುತ್ತಿದೆ. ಆಳುವ ಸರ್ಕಾರಗಳು ಅಸಮಾನ ಶಿಕ್ಷಣ ಪದ್ಧತಿಯನ್ನು ಪೋಷಿಸಿಕೊಂಡು ಬರುತ್ತಿರುವ ಪರಿಣಾಮ ಶೇ. 80 ಕ್ಕಿಂತ ಹೆಚ್ಚಿನ ಬಡ - ಮಧ್ಯಮ ವಿದ್ಯಾರ್ಥಿಗಳು ಗುಣಮಟ್ಟವಲ್ಲದ - ವೃತ್ತಿ ಪರವಲ್ಲದ ಶಿಕ್ಷಣವನ್ನು ಅತಂತ್ರ ಸ್ಥಿತಿಯಲ್ಲಿ ಕಲಿಯುವಂತಾಗಿದೆ. ಸ್ವಾತಂತ್ರ್ಯಪೂರ್ವದಲ್ಲಿ ಕೇವಲ ಉಚ್ಛ ಜಾತಿಯ, ರಾಜ ಮಹಾರಾಜರಿಗೆ ಮಾತ್ರ ಶಿಕ್ಷಣ ಮೀಸಲಿದ್ದಂತೆ ಇಂದು ಶ್ರೀಮಂತ ವರ್ಗದ ವಿದ್ಯಾರ್ಥಿಗಳಿಗೆಮಾತ್ರ ಗುಣಮಟ್ಟದ - ವೃತ್ತಿಪರ ಶಿಕ್ಷಣ ಮೀಸಲಾಗುತ್ತಿದೆ. ರಾಜ್ಯದಲ್ಲಿರುವ ಸರ್ಕಾರಿ ಶಾಲಾ - ಕಾಲೇಜುಗಳಲ್ಲಿನ ಆಗಾಧ ಮೂಲಭೂತ ಸೌಕರ್ಯಗಳ ಕೊರತೆಯನ್ನು ಗಮನಿಸಿದರೆ ಸಾಕು, ಶೇ. 80 ಕ್ಕಿಂತ ಹೆಚ್ಚಿನ ಬಡ ವಿದ್ಯಾರ್ಥಿಗಳು ಎಂತಹ ಹೀನಾಯ ಸ್ಥಿತಿಯಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದಾರೆಂದು ಗೊತ್ತಾಗುತ್ತದೆ.

ಅವ್ಯವಸ್ಥೆ - ಕೊರತೆಗಳು

ಸರ್ಕಾರದ ಅಂಕಿಅಂಶಗಳ ಪ್ರಕಾರವೇ ರಾಜ್ಯದಲ್ಲಿರುವ ಒಟ್ಟು 56441ರ ಪ್ರಾಥಮಿಕ ಶಾಲೆಗಳಲ್ಲಿ ಶೇ. 40 ರಷ್ಟು ಶಾಲೆಗಳಲ್ಲಿ ಸಾಮಾನ್ಯ ಶೌಚಾಲಯಗಳಿಲ್ಲ. ಶೇ. 38 ಶಾಲೆಗಳಿಗೆ ಪ್ರತ್ಯೇಕ ಶೌಚಾಲಯಗಳಿಲ್ಲ. ಆಟದ ಮೈದಾನ ಶೇ. 57 ರಷ್ಟು ಅಂದರೆ ಅರ್ಧಕ್ಕಿಂತ ಹೆಚ್ಚು ಶಾಲೆಗಳಿಗೆ ಕ್ರೀಡಾ ಮೈದಾನಗಳಿಲ್ಲ. ಶೇ. 26 ರಷ್ಟು ಶಾಲೆಗಳಲ್ಲಿ ಕುಡಿಯುವ ನೀರಿನ ವ್ಯವಸ್ಥೆ ಇಲ್ಲ. ಇದೇ ರೀತಿಯಲ್ಲಿಯೇ ರಾಜ್ಯದಲ್ಲಿರುವ ಒಟ್ಟು 11835 ಪ್ರೌಢ ಶಾಲೆಗಳಲ್ಲಿ ಶೇ. 36ರಷ್ಟು ಸಾಮಾನ್ಯ ಶೌಚಾಲಯಗಳಿಲ್ಲ. ಹೆಣ್ಣು ಮಕ್ಕಳಿಗೆ ಶೇ. 49 ಶಾಲೆಗಳಲ್ಲಿ ಪ್ರತ್ಯೇಕ ಶೌಚಾಲಯಗಳಿಲ್ಲ. ಶೇ. 48 ರಷ್ಟು ಪ್ರೌಢಶಾಲೆಗಳಿಗೆ ಕ್ರೀಡಾ ಮೈದಾನಗಳಿಲ್ಲ. ಶೇ. 32 ರಷ್ಟು ಕುಡಿಯುವ ನೀರಿನ ವ್ಯವಸ್ಥೆಯೇ ಇಲ್ಲ.



ಶೈಕ್ಷಣಿಕ ಸಮಸ್ಯೆಗಳ ವಿರುದ್ಧ ರಾಜಭವನ್ ಚಲೋ

ಇನ್ನು ಕಟ್ಟಡ, ತರಗತಿಯ ಕೊಠಡಿಗಳು, ಗ್ರಂಥಾಲಯ, ಪ್ರಯೋಗಾಲಯದ ಬಗ್ಗೆ ಪ್ರತ್ಯೇಕವಾಗಿ ಹೇಳಬೇಕಿಲ್ಲ. ಮಳೆ ಬಂದರೆ ಸೋರುವ, ಇಲಿ-ಹೆಗ್ಗಣಗಳು, ಹಂದಿಗಳು ವಾಸಿಸುವ ತಾಣ ಗಳಾಗಿ ಸರ್ಕಾರಿ, ಶಾಲೆಗಳು ಪರಿವರ್ತನೆ ಗೊಳ್ಳುತ್ತಿವೆ. ಆರ್ಥಿಕವಾಗಿ, ಸಾಮಾಜಿಕವಾಗಿ ಅತ್ಯಂತ ಹಿಂದುಳಿದಿರುವ ರಾಜ್ಯದ ಬಹುತೇಕ ಬಡ ಜನತೆ ತಮ್ಮ ಜೀವನದ ನಿರ್ವಹಣೆಗಾಗಿ ದುಡಿಯುವ ಶ್ರಮಕ್ಕೆ ಸರಿಯಾಗಿ ಪ್ರತಿಫಲ ಸಿಗದೆ ಇರುವುದರಿಂದ ತಮ್ಮ ಮಕ್ಕಳನ್ನು ಬಾಲ್ಯದಲ್ಲಿಯೇ ದುಡಿಮೆಗೆ ಹಚ್ಚಿರುತ್ತಾರೆ. ಇತ್ತ ಮನೆಯಲ್ಲೂ ಕಲಿಯುವ ವಾತಾವರಣವಿಲ್ಲ. ಅತ್ತ ಶಾಲೆಯಲ್ಲೂ ಅಗತ್ಯ ಸೌಲಭ್ಯವಿಲ್ಲದ ಸ್ಥಿತಿಯಲ್ಲಿ ಬಡ ವಿದ್ಯಾರ್ಥಿಗಳು ಇಂತಹ ಸರ್ಕಾರಿ ಶಾಲೆಗಳಲ್ಲಿ ಓದುವ ದುಸ್ಥಿತಿ ಬಂದೊದಗಿದೆ.



ಬಸ್ ಪಾಸ್ ದರ ಏರಿಕೆ ವಿರುದ್ಧ ಬೆಂಗಳೂರಿನಲ್ಲಿ ಪ್ರತಿಭಟನೆ

ಖಾಸಗಿ ಶಾಲೆಗಳ ಮಾಲಿಕರು ಗುಣಮಟ್ಟದ ಶಿಕ್ಷಣ ನೀಡುತ್ತೇವೆಂಬ ನೆಪದಲ್ಲಿ ವಿದ್ಯಾರ್ಥಿ-ಪೋಷಕರಿಂದ ಹಣ ಸುಲಿಗೆ ಮಾಡುತ್ತಿದ್ದಾರೆ. ಎಲ್ಲಾ ಖಾಸಗಿ ಶಾಲೆಗಳು ಗುಣಮಟ್ಟದ ಶಿಕ್ಷಣವನ್ನೇನು ನೀಡುತ್ತಿಲ್ಲ. ಬದಲಾಗಿ ಅತ್ಯಂತ ಕಳಪೆ ಮಟ್ಟದಲ್ಲಿ ಶಿಕ್ಷಣ ನೀಡಲಾಗುತ್ತಿದೆ. ವಿದ್ಯಾರ್ಥಿ - ಪೋಷಕರ ಪ್ರಜಾಸತ್ತಾತ್ಮಕ ಹಕ್ಕುಗಳನ್ನು ನಾಶಗೊಳಿಸಲಾಗಿದೆ. ಶಿಕ್ಷಕ - ಶಿಕ್ಷಕರೇತರರಿಗೂ ಉತ್ತಮ ಸಂಬಳ ನೀಡುವುದಿಲ್ಲ. ಬದಲಿಗೆ ಅವರನ್ನು ತೀವ್ರವಾಗಿ ಶೋಷಿಸುವ ಹಂತಕ್ಕೆ ಖಾಸಗಿ ಶಿಕ್ಷಣ ಸಂಸ್ಥೆಗಳು ಬಂದು ನಿಂತಿವೆ. ಕೇಂದ್ರ ಸರ್ಕಾರದ ಪಕ್ಷಪಾತ ನೀತಿಯಿಂದಾಗಿ ಸರ್ಕಾರಿ ಕೇಂದ್ರೀಯ ಶಾಲೆಗಳು ಸೇರಿದಂತೆ ಕೆಲ ಶ್ರೀಮಂತ ಖಾಸಗಿ ಶಿಕ್ಷಣ ಸಂಸ್ಥೆಗಳೂ ಬೆರಳೆಣಿಕೆಯಷ್ಟು ಶ್ರೀಮಂತ ಮಕ್ಕಳಿಗೆ ಮಾತ್ರ ಇಂದಿನ ಜಾಗತಿಕ ಯುಗದಲ್ಲಿನ ವಿಜ್ಞಾನ - ತಂತ್ರಜ್ಞಾನ ಸೇರಿದಂತೆ ಗುಣಮಟ್ಟದ ಶಿಕ್ಷಣ ಪಡೆಯುತ್ತಿದ್ದಾರೆ.



ಜೆ.ಓ.ಸಿ. ವಿದ್ಯಾರ್ಥಿಗಳ ಬೃಹತ್ ಪ್ರತಿಭಟನೆ

ಬಿಸಿಯೂಟ ಯೋಜನೆ, ಮಾಹಿತಿ ಸಿಂಧೂ ಯೋಜನೆ, ಸರ್ವ ಶಿಕ್ಷಣ ಅಭಿಯಾನ, ಮರಳಿ ಬಾ ಶಾಲೆಗೆ ಮುಂತಾದ ಯೋಜನೆಗಳನ್ನು ಸಮರ್ಪಕವಾಗಿ ಆಳುವ ಸರ್ಕಾರಗಳು ಜಾರಿಗೆ ತರುವ ಇಚ್ಛೆಯನ್ನು ಹೊಂದಿಲ್ಲ. ಬದಲಾಗಿ ಈ ಯೋಜನೆಗಳನ್ನು ಖಾಸಗಿಯವರಿಗೆ ಒಪ್ಪಿಸಿ ಕೈ ತೊಳೆದುಕೊಳ್ಳುತ್ತಿವೆ.

ಉನ್ನತ ಶಿಕ್ಷಣ ದುರಂತ ಸ್ಥಿತಿಗೆ

ಇಡೀ ಶಿಕ್ಷಣ ಕ್ಷೇತ್ರವನ್ನೇ ವಾಣಿಜ್ಯೀಕರಿಸಿರುವಾಗ ಸರ್ಕಾರಿ ಅಥವಾ ಖಾಸಗಿ ಆಡಳಿತ ಮಂಡಳಿಗೆ ಶಿಕ್ಷಣ ಕ್ಷೇತ್ರ ಸೇವಾವಲಯವೆಂದು ಪರಿಗಣಿಸುವುದಾದರೂ ಹೇಗೆ? ಶಿಕ್ಷಣ ವ್ಯಾಪಾರೀಕರಣ - ಖಾಸಗೀಕರಣ ಎಷ್ಟು ಎಲ್ಲೆ ಮೀರಿದೆ ಎಂಬುದಕ್ಕೆ ಉದಾಹರಣೆ ಒಟ್ಟು ರಾಜ್ಯದಲ್ಲಿ ಸರ್ಕಾರಿ ಪದವಿಪೂರ್ವ ಕಾಲೇಜು 1379 ರಷ್ಟಿದ್ದರೆ, ಅನುದಾನಿತ ಪದವಿಪೂರ್ವ ಕಾಲೇಜು 529 ರಷ್ಟು.

ಖಾಸಗಿ ಪದವಿ ಪೂರ್ವ ಕಾಲೇಜು 1627 ರಷ್ಟು ತಲೆ ಎತ್ತಿವೆ. ಇನ್ನು ಒಟ್ಟು ರಾಜ್ಯದಲ್ಲಿರುವ ಪದವಿ ಕಾಲೇಜುಗಳಲ್ಲಿ ಸರ್ಕಾರಿ 349 ಆದರೆ, 274 ಅನುದಾನಿತ ಪದವಿ ಕಾಲೇಜುಗಳು, ಖಾಸಗಿ ಪದವಿ ಕಾಲೇಜುಗಳು 532 ಇವೆ. ಅಂದರೆ ಸುಮಾರು ಸರ್ಕಾರಿ ಕಾಲೇಜಿನ ಎರಡುಪಟ್ಟು ಖಾಸಗಿ ಪದವಿ ಕಾಲೇಜುಗಳು ತಲೆ ಎತ್ತಿವೆ. ಸರ್ಕಾರಿ ಪದವಿ ಕಾಲೇಜುಗಳಲ್ಲಿ ಸಮಾಜ ವಿಜ್ಞಾನ (ಕಲಾವಿಭಾಗ) ಮತ್ತು ವಾಣಿಜ್ಯ ವಿಭಾಗದ ಕೋರ್ಸುಗಳಿಗೆ ಅತಿಹೆಚ್ಚು ಅವಕಾಶವಿದ್ದರೆ ಖಾಸಗಿ ಪದವಿ ಕಾಲೇಜುಗಳಲ್ಲಿ ಬಿ.ಸಿ.ಎಂ., ಬಿಬಿಎಂ, ಬಯೋ ಕೆಮಿಸ್ಟ್ರಿ, ಮೈಕ್ರೊ ಬಯಾಲಜಿ, ಹೋಟೆಲ್ ಮ್ಯಾನೇಜ್‌ಮೆಂಟ್, ಪತ್ರಿಕೋದ್ಯಮ, ಸಮಾಜಸೇವೆಯಂತಹ ಕೋರ್ಸುಗಳನ್ನು ವಿದ್ಯಾರ್ಥಿ - ಪೋಷಕರಿಂದ ಹಣ ಸುಲಿಯಲೆಂದೇ ಪ್ರಾರಂಭಿಸಿವೆ.

ತಾನು ಪ್ರಗತಿ ಸಾಧಿಸಬೇಕೆಂಬ ನೈಜ ಬದ್ಧತೆ ಹೊಂದಿರುವ ಯಾವುದೇ ಒಂದು ದೇಶ - ರಾಜ್ಯ ತನ್ನ ಸ್ವಾವಲಂಬನೆಗಾಗಿ ಉನ್ನತ ಶಿಕ್ಷಣವನ್ನು ಬಳಸಿಕೊಳ್ಳುವ ಇಂಗಿತವನ್ನು ಹೊಂದಿರುತ್ತದೆ. ಆದರೆ ಆಳುವ ಸರ್ಕಾರಗಳು ಉನ್ನತ ಶಿಕ್ಷಣದ ರಂಗವನ್ನು ಸಂಪೂರ್ಣವಾಗಿ ಖಾಸಗಿಯವರ ಲಾಭಕ್ಕಾಗಿಯೇ ಬಳಸುವಂತಹ ಸ್ಥಿತಿಗೆ ತಂದೊಡ್ಡಿವೆ. ಒಂದೆಡೆ ಸರ್ಕಾರಿ ಕಾಲೇಜುಗಳಲ್ಲಿ ಕನಿಷ್ಟ ಮೂಲಭೂತ ಸೌಕರ್ಯಗಳ ಕೊರತೆಯಿಂದ ವಿದ್ಯಾರ್ಥಿ ಸಮುದಾಯ ಪರಿತಪಿಸುತ್ತಿದೆ.

ವಿಧಾನಸೌಧದ ಪಕ್ಕದಲ್ಲೇ ಇರುವ ಎಸ್‌ಜೆಪಿ ಪಾಲಿಟೆಕ್ನಿಕ್ ಕಾಲೇಜು, ಸರ್ಕಾರಿ ಕಲಾ ಕಾಲೇಜು, ಆರ್.ಸಿ. ಕಾಲೇಜು, ಮಹಾರಾಣಿ ಕಾಲೇಜುಗಳು ಎಂತಹ ದುಸ್ಥಿತಿಯಲ್ಲಿವೆ ಎಂದರೆ... ಮಳೆ ಬಂದರೆ ತರಗತಿಗಳ ಕೊಠಡಿಗಳಲ್ಲಿ ನೀರು ತುಂಬುತ್ತದೆ. ಬೋಧಕ - ಬೋಧಕೇತರ, ಕೊಠಡಿ, ಗ್ರಂಥಾಲಯ, ಪ್ರಯೋಗಾಲಯ, ಕ್ರೀಡೆ, ಕುಡಿಯುವ ನೀರು, ಶೌಚಾಲಯಗಳು ಮುಂತಾದ ಕನಿಷ್ಟ ಶೈಕ್ಷಣಿಕ ಸೌಲಭ್ಯಗಳಿಲ್ಲದೆ ತೀವ್ರ ಬಿಕ್ಕಟ್ಟಿನಲ್ಲಿದೆ. ರಾಜಧಾನಿ ಬೆಂಗಳೂರು ನಗರದಲ್ಲಿನ ಪ್ರತಿಷ್ಠಿತ ಕಾಲೇಜುಗಳದ್ದೇ ಈ ಸ್ಥಿತಿಯಾದರೆ ಬೇರೆ ಬೇರೆ ಜಿಲ್ಲೆಗಳಲ್ಲಿರುವ ಕಾಲೇಜುಗಳ ಪರಿಯನ್ನು ಹೇಳುವ ಅಗತ್ಯವಿಲ್ಲ.

ವಿದ್ಯಾರ್ಥಿ ಸಮುದಾಯಕ್ಕೆ ಎದುರಾದ ಗಂಭೀರ ಶೈಕ್ಷಣಿಕ ಸಮಸ್ಯೆಗಳನ್ನು ಕೈಗೆತ್ತಿಕೊಂಡದ್ದು ಮಾತ್ರವಲ್ಲ, ಹಲವು ಯಶಸ್ವಿ ಹೋರಾಟಗಳಿಗೆ ನೇತೃತ್ವ ನೀಡಿದ ಹೆಮ್ಮೆ ಎಸ್ಎಫ್ಐನದು

ಶೈಕ್ಷಣಿಕ ಸಮಸ್ಯೆಗಳ ವಿರುದ್ಧ ಸಿಡಿದುಬಂದ ಹೋರಾಟಗಳು

ವಿಜಯಕುಮಾರ್ ದೊಡ್ಮನಿ

ಕಳೆದ 10ನೇ ರಾಜ್ಯ ಸಮ್ಮೇಳನ ನಂತರದಲ್ಲಿ ಜಾಗತೀಕರಣದ ನೀತಿಯಿಂದ ಉಂಟಾದ ಶೈಕ್ಷಣಿಕ ಸಮಸ್ಯೆಗಳು ಹಾಗೂ ಸವಾಲುಗಳ ವಿರುದ್ಧ ದೇಶದ ವಿದ್ಯಾರ್ಥಿ ಧ್ವನಿಯಾಗಿರುವ ಭಾರತ ವಿದ್ಯಾರ್ಥಿ ಫೆಡೇಷನ್ (ಎಸ್ಎಫ್ಐ) ರಾಜ್ಯಾದ್ಯಂತ ನಡೆಸಿದ ನಿರ್ಣಾಯಕ ಮತ್ತು ಸಂಘಟಿತ ಹೋರಾಟಗಳು ಈ ಅವಧಿಯಲ್ಲಿ ಆಡಳಿತ ನಡೆಸಿದ ಜೆಡಿ(ಎಸ್), ಕಾಂಗ್ರೆಸ್ ಮತ್ತು ಬಿಜೆಪಿ-ಜೆಡಿ(ಎಸ್) ಸಮ್ಮಿಶ್ರ ಸರ್ಕಾರಕ್ಕೆ ಚುರುಕು ಮುಟ್ಟಿಸಲಾಗಿದೆ. ವಿದ್ಯಾರ್ಥಿ ಸಮುದಾಯಕ್ಕೆ ಹತ್ತಾರು ಸೌಲಭ್ಯ ಒದಗಿಸಲು ಸಾಧ್ಯವಾಗಿದೆ. ಹಲವು ಹೋರಾಟಗಳಿಗೆ ಆಳುವವರ್ಗ ಮಣಿದು ಎಸ್ಎಫ್ಐನ್ನು ಸರ್ಕಾರವೇ ಮಾತುಕತೆಗೆ ಆಹ್ವಾನಿಸಿ ಹಲವು ಸಮಸ್ಯೆ ಬಗೆಹರಿಸಬೇಕಾದ ಸ್ಥಿತಿ ನಿರ್ಮಿಸಿದ್ದು ವಿದ್ಯಾರ್ಥಿ ಚಳುವಳಿಯ ಹೆಮ್ಮೆಯ ವಿಷಯ. ಎಸ್ಎಫ್ಐ ನಡೆಸಿದ ಖಾಸಗೀಕರಣ ವಿರುದ್ಧದ ಹೋರಾಟದ ಸಂದರ್ಭದಲ್ಲಿ ಎಸ್ಎಫ್ಐ ನಾಯಕತ್ವ ಗೂಂಡಾಗಳ ಬೆದರಿಕೆ, ಸವಾಲುಗಳನ್ನು ಎದುರಿಸಿ ಖಾಸಗಿಯವರಿಗೆ ತಕ್ಕ ಪಾಠ ನೀಡಲು ಸಾಧ್ಯವಾಗಿರುವುದು ಸಮಾನ್ಯ ವಿಷಯವಲ್ಲ.

ಜೆಓಸಿ ಹೋರಾಟ

2005 ರಲ್ಲಿ ರಾಜ್ಯ ಸರ್ಕಾರವೂ ಪದವಿಪೂರ್ವ ವೃತ್ತಿ ಶಿಕ್ಷಣದ ಶುಲ್ಕವನ್ನು ಏಕಾಏಕಿಯಾಗಿ 650 ರಿಂದ 1250 ರೂ.ಗಳಿಗೆ ಏರಿಕೆ ಮಾಡಿದ್ದನ್ನು, ಕೋರ್ಸುಗಳನ್ನೇ ಮುಚ್ಚಲು ಮುಂದಾಗಿರುವುದನ್ನು ಪ್ರತಿಭಟಿಸಿ ನಡೆಸಿದ ಹಲವು ಹಂತದ ಹೋರಾಟ, ಅಂತಿಮವಾಗಿ ಬೆಂಗಳೂರು ಚಲೋ ಸಂಘಟಿಸಲಾಯಿತು. 5000 ಕ್ಕೂ ಹೆಚ್ಚು ವಿದ್ಯಾರ್ಥಿ ಸಮುದಾಯ ಭಾಗವಹಿಸಿದ ಈ ಹೋರಾಟ ಬೆಂಗಳೂರಿನ ಕೆ.ಜಿ. ರಸ್ತೆಯಲ್ಲಿ ಮೂರು ತಾಸು ನಡೆಸಿದ ರಸ್ತೆ ತಡೆಯಿಂದಾಗಿ ಬೆಂಗಳೂರಿನ ಸಂಚಾರ ಅಸ್ತವ್ಯಸ್ತವಾಗಿತ್ತಲ್ಲದೇ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿದ ಸಚಿವರಿಗೆ ಹಾಕಲಾದ ದಿಗ್ಬಂಧನದಿಂದ ಸ್ಥಳದಲ್ಲಿ ಮುಖ್ಯಮಂತ್ರಿಗಳ ಜೊತೆ ಚರ್ಚಿಸಿ ಮುಖ್ಯಮಂತ್ರಿಯೊಂದಿಗೆ ಮಾತುಕತೆಗೆ ದಿನಾಂಕ ನಿಗದಿ ಪಡಿಸುವಂತಾಯಿತು. ಪರಿಣಾಮ ಮುಖ್ಯಮಂತ್ರಿಗಳೇ ಎಸ್ಎಫ್ಐ ನ್ನು ಮಾತುಕತೆಗೆ ಆಹ್ವಾನಿಸಿದರು. ಎಸ್ಎಫ್ಐ ನಿಯೋಗದೊಂದಿಗೆ ಚರ್ಚಿಸಿ ರಾಜ್ಯದಲ್ಲಿ ಹಲವು ಸರ್ಕಾರಿ ಶಾಲಾ -ಕಾಲೇಜು, ಹಾಸ್ಟೆಲ್ ಆರಂಭಿಸುವ, ಬಸ್ ಪಾಸ್ ಕಿಲೋ ಮೀಟರ್‌ನ್ನು 40 ರಿಂದ 50 ಕಿ.ಮಿ. ಏರಿಸಲು ಜೆಓಸಿ ಶುಲ್ಕ ಇಳಿಸಲು, ಜೆಓಸಿ ಉಳಿಸಲು ಸಾಧ್ಯವಾಯಿತು. ಎಲ್ಲಾ ಶೈಕ್ಷಣಿಕ ಇಲಾಖೆಯಿಂದ ಶಾಲಾ-ಕಾಲೇಜುಗಳಿಗೆ ಮೂಲಭೂತ ಸೌಕರ್ಯಕ್ಕೆ ಆದೇಶ ನೀಡಲಾಯಿತು. ಸಭೆಯನ್ನು ಮುಖ್ಯಮಂತ್ರಿ ಧರ್ಮಸಿಂಗ್, ಶಿಕ್ಷಣ - ಸಮಾಜ ಕಲ್ಯಾಣ ಇಲಾಖೆಯ ಸಚಿವರು, ಇಲಾಖೆಯ ಅಧಿಕಾರಿಗಳು ಭಾಗವಹಿಸಿದ್ದರು.

ಶಾಲಾ ಕಾಲೇಜು ಬಂದ್

ವೃತ್ತಿ ಶಿಕ್ಷಣ ಬಿಕ್ಕಟ್ಟಿನ ಪರಿಹಾರಕ್ಕಾಗಿ ನಡೆಸಿದ ಹೋರಾಟದಿಂದ ಶುಲ್ಕ ಏರಿಕೆ ತಡೆಗಟ್ಟಲು ಸಾಧ್ಯವಾಗಿದೆ. ಈ ಅವಧಿಯಲ್ಲಿ ಮೂರು ಬಾರಿ ಶಾಲಾ -ಕಾಲೇಜು ಬಂದ್ ನಡೆಸಲಾಗಿದೆ. 2005 ಅಗಸ್ಟ್ 25 ನಡೆಸಿದ ಶೈಕ್ಷಣಿಕ ಸಮಸ್ಯೆಗಳ ವಿರುದ್ಧ ಶಾಲಾ ಕಾಲೇಜು ಬಂದ್ 19 ಜಿಲ್ಲೆಗಳಲ್ಲಿ 1000 ಹೆಚ್ಚು ಶಾಲಾ - ಕಾಲೇಜು ಬಂದ್ ಆಗಿ 7 ಲಕ್ಷ ವಿದ್ಯಾರ್ಥಿಗಳು ಪ್ರತಿಭಟನೆಯಲ್ಲಿ ಭಾಗವಹಿಸಿದರೆ, ನಂತರ ನಡೆಸಲಾದ ಎರಡು ಬಂದ್‌ಗಳಲ್ಲಿ 15 ಲಕ್ಷಕ್ಕೂ ಹೆಚ್ಚು ವಿದ್ಯಾರ್ಥಿಗಳು ಹೋರಾಟದಲ್ಲಿ ಭಾಗವಹಿಸಿದಂತಾಗಿದೆ. ಲಕ್ಷಾಂತರ ಕರಪತ್ರ ಮುದ್ರಿಸಿ ಹಂಚಲಾಗಿದೆ. ಮುಖ್ಯವಾಗಿ ವಿದ್ಯಾರ್ಥಿ ಹೋರಾಟದಿಂದಾಗಿ ರಾಜ್ಯದಲ್ಲಿ 810 ಹೈಸ್ಕೂಲು, 510 ಸರ್ಕಾರಿ ಪಿಯು ಕಾಲೇಜು, 167 ಸರ್ಕಾರಿ ಪದವಿ ಕಾಲೇಜು, ಐಟಿಐ, 200 ಕ್ಕೂ ಹೆಚ್ಚುಹಾಸ್ಟೆಲ್‌ಗಳನ್ನು ರಾಜ್ಯದಲ್ಲಿ ಆರಂಭಿಸಲು ಸಾಧ್ಯವಾಗಿದೆ.



ಶಿಕ್ಷಣದ ವ್ಯಾಪಾರೀಕರಣ, ಖಾಸಗೀಕರಣ ವಿರೋಧಿಸಿ ದೇಶದ ಬೌದ್ಧಿಕ ಸ್ವಾವಲಂಬನೆಯ ರಕ್ಷಣೆಗಾಗಿ ನಡೆದ ರಾಷ್ಟ್ರವ್ಯಾಪಿ ಜಾಥಾ ಹಾವೇರಿಗೆ ಬಂದಾಗ ವಿದ್ಯಾರ್ಥಿಗಳಿಂದ ಬೃಹತ್ ಸ್ವಾಗತ

ಬಸ್ ಪಾಸ್ ದರ ಏರಿಕೆ ವಿರುದ್ಧ

2007 ರಲ್ಲಿ ಬಸ್‌ಪಾಸ್ ದರಏರಿಕೆ ಮಾಡಿರುವ ಸರ್ಕಾರದ ಕ್ರಮ ಖಂಡಿಸಿ ಒಂದು ತಿಂಗಳ ಕಾಲ ನಡೆಸಿದ ಹೋರಾಟಗಳು, ಹಾಸನ, ಕೋಲಾರದಲ್ಲಿ ನಡೆದ ಲಾಠಿ ಚಾರ್ಜ್, ಮಂಡ್ಯ, ಬಳ್ಳಾರಿ, ಇತರ ಕಡೆ ನಡೆದ ಕಾನೂನು ಉಲ್ಲಂಘನಾ ಚಳುವಳಿ ಸಚಿವರಿಗೆ ಹಲವಾರು ಜಿಲ್ಲೆಗಳಲ್ಲಿ ನಡೆಸಿದ ಘೇರಾವ್ ನಿಂದಾಗಿ ಅಂದು ಸಾರಿಗೆ ಸಚಿವರಾಗಿದ್ದ ಚೆಲುವರಾಯಸ್ವಾಮಿ ಎಸ್ಎಫ್ಐನ್ನು ಮಾತುಕತೆಗೆ ಆಹ್ವಾನಿಸಿ ಮಾತುಕತೆ ನಡೆಸಿ ಶೇ. 47 ರಷ್ಟು ವಿದ್ಯಾರ್ಥಿ ಬಸ್ ಪಾಸ್ ಏರಿಕೆ ಇಳಿಕೆ ಮಾಡಬೇಕಾಯಿತು. ಈ ಹೋರಾಟವು ಈಗಾಗಲೇ ಬಸ್‌ಪಾಸ್ ತೆಗೆದುಕೊಂಡ ವಿದ್ಯಾರ್ಥಿಗಳಿಗೆ ಇಳಿಕೆಯಾದ ಹಣವನ್ನು ವಾಪಸ್ ಕೊಡಿಸುವ ಮೂಲಕ ಎಸ್ಎಫ್ಐ ವಿದ್ಯಾರ್ಥಿಗಳಿಗೆ ಪ್ರೀತಿಗೆ ಪಾತ್ರವಾಯಿತು.



ಮುಖ್ಯಮಂತ್ರಿ ಧರ್ಮಸಿಂಗ್ ಜೊತೆ ಎಸ್ಎಫ್ಐ ರಾಜ್ಯ ನಿಯೋಗದ ಮಾತುಕತೆ - ಶೈಕ್ಷಣಿಕ ಸಮಸ್ಯೆಗಳ ಪರಿಹಾರ ಕುರಿತು

3 ಸಾವಿರ ವಿದ್ಯಾರ್ಥಿಗಳಿಗೆ ಪರ್ಯಾಯ ವ್ಯವಸ್ಥೆ

ನರ್ಸಿಂಗ್ ವಿದ್ಯಾರ್ಥಿಗಳು ಎದುರಿಸುತ್ತಿದ್ದ ಸಮಸ್ಯೆಗಳ ವಿರುದ್ಧ ನಡೆಸಿದ ಚಳುವಳಿಯಾಗಿ ಎಸ್ಎಫ್ಐ ಆರಂಭದಲ್ಲಿ ಸಮಾಜಕಲ್ಯಾಣ ಇಲಾಖೆಯಿಂದ ಪ್ರವೇಶ ಪಡೆದ ದಲಿತ ವಿದ್ಯಾರ್ಥಿಗಳನ್ನು ಹಿಂಸೆ ಮಾಡುತ್ತಿದ್ದ, ಕೂಡಿಹಾಕಿ ಹಕ್ಕುಗಳನ್ನು ನಿರಾಕರಿಸುತ್ತಿದ್ದ ಪ್ರಶ್ನೆಗಳ ಆಧಾರದಲ್ಲಿ ನಡೆಸಿದ ಹೋರಾಟಗಳು ಇಡೀ ಸರ್ಕಾರದ, ಖಾಸಗಿ ಶಿಕ್ಷಣ ಸಂಸ್ಥೆಗಳ ದಲಿತ ವಿರೋಧಿ ನೀತಿಯನ್ನು 'ಕ್ರೈಮ್ ಸ್ಟೋರಿ' ಒಳಗೊಂಡಂತೆ ರಾಜ್ಯದ ಮುಂದೆ ಬಿಚ್ಚಿಡಲಾಗಿ, ಸಮಾಜ ಕಲ್ಯಾಣ ಇಲಾಖೆಯ ಒಳನುಗ್ಗಿ, ಹಗಲು ರಾತ್ರಿ ಘೇರಾವ್ ಹಾಕಿದ್ದರಿಂದ 3000 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಉತ್ತಮ ನರ್ಸಿಂಗ್ ಕಾಲೇಜಿಗೆ ವರ್ಗಾಯಿಸಿ ದೌರ್ಜನ್ಯ ನಡೆಸಿದ ಕಾಲೇಜುಗಳನ್ನು ಮುಚ್ಚಿಸಲಾಯಿತು. ನಂತರ ಹೊರ ರಾಜ್ಯದ ವಿದ್ಯಾರ್ಥಿಗಳ ಹಕ್ಕು ಕಸಿದು ಲಕ್ಷಾಂತರ ರೂಪಾಯಿ ಡೊನೇಷನ್ ವಸೂಲಿ ಮಾಡುತ್ತಿದ್ದ (ಬೆಂಗಳೂರು) ಖಾಸಗಿ ಶಿಕ್ಷಣ ಸಂಸ್ಥೆಗಳ ವಿರುದ್ಧ ಸಂಘಟಿಸಿದ ಹೋರಾಟದಿಂದ ಅಂದಿನ ವೈದ್ಯಕೀಯ ಸಚಿವರು ಎಸ್ಎಫ್ಐ ನಿಯೋಗದೊಂದಿಗೆ ಮಾತುಕತೆ ಮಾಡಬೇಕಾಯಿತು. ಪರಿಣಾಮ ಸುಲಿಗೆ ಮಾಡುತ್ತಿದ್ದ ನೂರಾರು ನರ್ಸಿಂಗ್ ಕಾಲೇಜುಗಳ ಮೇಲೆ ಹೈಕೋರ್ಟ್ ಗದಾ ಪ್ರಹಾರ ನಡೆಸಿ, ಇಂದು ಅಲ್ಪಮಟ್ಟಿಗಾದರೂ [illegible], ನಿರ್ದೇಶನಗಳನ್ನು ಪಾಲಿಸುವಂತಾಯಿತು. ಈ ಹೋರಾಟದ ಸಂದರ್ಭದಲ್ಲಿ ಎಸ್ಎಫ್ಐ ರಾಜ್ಯ ನಾಯಕತ್ವ ಒಳಗೊಂಡಂತೆ ಗೂಂಡಾಗಳ ದೌರ್ಜನ್ಯ, ಬೆದರಿಕೆ ಎದುರಿಸಬೇಕಾಯಿತು.

ಐಟಿಐ ಶುಲ್ಕ ಏರಿಕೆ, ಹಾಸ್ಟೆಲ್, ಶಾಲಾ ಕಾಲೇಜು ಸಮಸ್ಯೆಗಳ ವಿರುದ್ಧ ನಡೆಸಿದ ಪ್ರತಿಭಟನೆಯಿಂದ ನ್ಯಾಯ ಕಲ್ಪಿಸಲು ಸಾಧ್ಯವಾಗಿದೆ. ಇದಲ್ಲದೆ ಗುಲಬರ್ಗಾ ವಿಶ್ವವಿದ್ಯಾಲಯ ಚಲೋ ಸಂಘಟಿಸಿ, 2000 ವಿದ್ಯಾರ್ಥಿಗಳ 4 ಕಿ.ಮೀ. ಮೆರವಣಿಗೆ ನಡೆಸಿ ಹಲವು ಸಮಸ್ಯೆ ಬಗೆಹರಿಸಲಾಗಿದೆ. ಹಾವೇರಿ ಸರ್ಕಾರಿ ಪದವಿ ಕಾಲೇಜು ಸ್ಥಾಪನೆಗಾಗಿ ಮುಖ್ಯಮಂತ್ರಿ ಮನೆ ಮುಂದೆ ಧರಣಿ ನಡೆಸಿ ಸರ್ಕಾರಿ ಕಾಲೇಜು ಪಡೆಯಲಾಗಿದೆ. ದೇವದುರ್ಗದಲ್ಲಿ ಜಾಲಹಳ್ಳಿಗೆ ಪಿಯು ಕಾಲೇಜು ಸ್ಥಾಪನೆಗಾಗಿ ನಡೆದ ಹೋರಾಟ ಲಾಠಿ ಚಾರ್ಜ್ ಸುಳ್ಳು ಕೇಸುಗಳನ್ನು ಎಸ್ಎಫ್ಐ ಕಾರ್ಯಕರ್ತರು ಎದುರಿಸಿ ಕಾಲೇಜು ಪಡೆದರೆ, ಕೋಲಾರ ಜಿಲ್ಲೆಯಲ್ಲಿ ಹತ್ತಾರು ವಿಷಯಕ್ಕಾಗಿ ನಡೆಸಿದ ಹೋರಾಟಗಳಲ್ಲಿ ಚಿಂತಾಮಣಿ, ಶಿಡ್ಲಘಟ್ಟ, ಬಾಗೇಪಲ್ಲಿಯಲ್ಲಿ ಪೋಲೀಸರ ಲಾಠಿ ಪೆಟ್ಟುತಿಂದು ವಿದ್ಯಾರ್ಥಿಗಳಿಗೆ ನ್ಯಾಯ ಒದಗಿಸಿರುವಾಗ, ಆರ್‌ಎಸ್‌ಎಸ್, ಎಬಿವಿಪಿ ಸುಳ್ಳು ದೇಶಪ್ರೇಮಕ್ಕೆ ಎದುರಾಗಿ ಕೋಲಾರದಲ್ಲಿ ದೇಶಪ್ರೇಮಿ ಜಾಥಾ, ಶೈಕ್ಷಣಿಕ ಸಮಸ್ಯೆಗಳ ಪರಿಹಾರಕ್ಕಾಗಿ ಜಾಥಾಗಳನ್ನು ಸಂಘಟಿಸಿದೆ. ಡೊನೇಷನ್ ವಿರುದ್ಧ ಬಳ್ಳಾರಿಯ ಹೊಸಪೇಟೆ, ಗಂಗಾವತಿ, ಇತರ ಕಡೆ ನಡೆಸಿದ ಹೋರಾಟದಿಂದ ಖಾಸಗಿ ಶಿಕ್ಷಣಗಳ ವಂತಿಗೆ ಸುಲಿಗೆಗೆ ತಡೆ ಬಿದ್ದಿದೆ.

ರಾಜ್ಯದಲ್ಲಿ ಸೆಮಿಸ್ಟರ್ ಪರೀಕ್ಷಾ ಪದ್ಧತಿಯಲ್ಲಿನ ಅವ್ಯವಸ್ಥೆಗಳ ವಿರುದ್ಧ ರಾಜ್ಯಾದ್ಯಂತ ಪ್ರತಿಭಟನೆಗಳು ನಡೆದಿವೆ.

ಕೇಂದ್ರ ಸರ್ಕಾರದ ಶೇ. 60 ಓಯು ಅಂಕ ಗಳಿಸಿದರೆ ಮಾತ್ರ ದಲಿತ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿವೇತನ ಎಂಬ ನೀತಿ ಖಂಡಿಸಿ ರಾಜ್ಯವ್ಯಾಪಿ 24 ಗಂಟೆ ಧರಣಿ, ಬೆಂಗಳೂರಿನಲ್ಲಿ ನಡೆಸಿದ ಅನಿರ್ದಿಷ್ಟ ಧರಣಿಯಿಂದ ವಾಪಸ್ಸಾಗಿದೆ. ಹಾಸ್ಟೆಲ್ ಸಮೀಕ್ಷೆ, ದಲಿತ ಸಮೀಕ್ಷೆಯಿಂದ ಎತ್ತಲಾದ ಪ್ರಶ್ನೆಗಳ ಭಾಗವಾಗಿ ಇಂದು ರಾಜ್ಯಾದ್ಯಂತ ಹೆಚ್ಚುವರಿ ಭೋಜನಾ ವೆಚ್ಚದಲ್ಲಿ ಹಾಸ್ಟೆಲ್ ದಕ್ಕಿವೆ. 18 ಮತ್ತು 20 ರ ಪಂಚಾಯತ್ ಅನುದಾನವನ್ನು ದಲಿತ ವಿದ್ಯಾರ್ಥಿಗಳಿಗೆ ಪುಸ್ತಕ, ಶೈಕ್ಷಣಿಕ ಸೌಲಭ್ಯ ಒದಗಿಸಲು ಪರಿಣಾಮಕಾರಿಯಾಗಿ ಸಾಧ್ಯವಾಗಿದೆ.

ಇಷ್ಟೆಲ್ಲ ಸಂಘರ್ಷದೊಂದಿಗೆ ಹೋರಾಟ ರಾಜ್ಯದಲ್ಲಿ ನಡೆದಿವೆ ಎನ್ನುವಾಗಲೇ ಈಗಿರುವ ಬಿಜೆಪಿ ಸರ್ಕಾರ ಅತ್ಯಂತ ಅಪಾಯಕಾರಿಯಾಗಿದೆ. ಇಂತಹ ಸಂದರ್ಭದಲ್ಲಿ ಶೈಕ್ಷಣಿಕ ವ್ಯಾಪಾರೀಕರಣ, ಖಾಸಗೀಕರಣದ ವಿರುದ್ಧ ಹೋರಾಟದ ಜೊತೆಗೆ ಕೋಮುವಾದೀಕರಣ ವಿರುದ್ಧ ಪ್ರಬಲ ಆಂದೋಲನ ರೂಪಿಸುವ ಅಗತ್ಯತೆ, ಅನಿವಾರ್ಯತೆ ಇಂದಿನ ವಿದ್ಯಾರ್ಥಿ ಸಮುದಾಯದ ಮುಂದೆ ಇದೆ.

ನಾಯಕನಹಟ್ಟಿ : ಉದ್ಯೋಗ ಖಾತ್ರಿ ಅನುದಾನ ದುರುಪಯೋಗ

ಕೇಂದ್ರ ಸರ್ಕಾರದ ಮಹತ್ತರ ಯೋಜನೆಯಾದ ರಾಷ್ಟ್ರೀಯ ಉದ್ಯೋಗ ಖಾತ್ರಿ ಕಾಮಗಾರಿಯಲ್ಲಿ ದುಡಿದ ನೂರಾರು ಕೂಲಿಕಾರ್ಮಿಕರಿಗೆ ಕೂಲಿ ನೀಡದೆ ಗ್ರಾ.ಪಂ ಕಾಮಗಾರಿಯ ಅನುದಾನವನ್ನು ದುರುಪಯೋಗಪಡಿಸಿಕೊಂಡಿರುವುದನ್ನು ಖಂಡಿಸಿ, ನೂರಾರು ಕೂಲಿ ಕಾರ್ಮಿಕರು ಚಿತ್ರದುರ್ಗ ಜಿಲ್ಲೆಯ ಚಳ್ಳಕೆರೆ ತಾಲ್ಲೂಕಿನ ನಾಯಕನಹಟ್ಟಿ ಗ್ರಾ.ಪಂ ಮುಂದೆ ತೀವ್ರ ಪ್ರತಿಭಟನೆ ನಡೆಸಿದರು.


ಪ್ರತಿಭಟನೆ ಚಿತ್ರ

ಪ್ರತಿಭಟನೆಯ ನೇತೃತ್ವ ವಹಿಸಿದ್ದ ಸಿಐಟಿಯು ರಾಜ್ಯ ಮುಖಂಡ ಕೆ.ಮಹಾಂತೇಶ ಮಾತನಾಡಿ ಇಲ್ಲಿನ ಗ್ರಾಮ ಪಂಚಾಯ್ತಿ ಉದ್ಯೋಗ ಖಾತ್ರಿ ಯೋಜನೆ ಹಳ್ಳ ಹಿಡಿದಿದ್ದು, ಕಾಮಗಾರಿಯಲ್ಲಿ ಬೆವರು ಸುರಿಸಿ ದುಡಿದ ನೂರಾರು ಕೂಲಿಕಾರ್ಮಿಕರ ಹಣವನ್ನು ನುಂಗಿಹಾಕಿದೆ ಎಂದು ಟೀಕಿಸಿದರು. ಅಲ್ಲದೆ ದುಡಿಯುವ ಕೈಗಳಿಗೆ ನೂರು ದಿನಗಳ ಕೆಲಸ ನೀಡುವ ಬದಲು ಕೇವಲ 13 ದಿನಗಳು ಮಾತ್ರ ಕೆಲಸ ನೀಡಿದೆ. ಸರ್ಕಾರದ ಆದೇಶವನ್ನು ಉಲ್ಲಂಘಿಸಿ ಕಾಮಗಾರಿಯನ್ನು ಮನಬಂದಂತೆ ಮಾಡಿಸಿದ್ದು, ಜೆಸಿಬಿ ಯಂತ್ರಗಳನ್ನು ಬಳಸಿ ದುಡಿಯುವ ಬಡ ವರ್ಗದ ಜನಾಂಗಕ್ಕೆ ಅನ್ಯಾಯವೆಸಗಿದೆ. ಕೂಡಲೇ ಇವುಗಳ ಸಮಗ್ರ ತನಿಖೆಯಾಗಬೇಕು ಎಂದು ಅವರು ಒತ್ತಾಯಿಸಿದರು.

ಸಿಐಟಿಯು ಜಿಲ್ಲಾ ಕಾರ್ಯದರ್ಶಿ ಡಿ.ಎಂ.ಮಲಿಯಪ್ಪ ಮಾತನಾಡಿ, 'ನಾಯಕನಹಟ್ಟಿ' ಹೋಬಳಿ ಜಿಲ್ಲೆಯಲ್ಲಿಯೇ ತೀವ್ರ ಬರದ ಛಾಯೆಗೆ ಸಿಲುಕಿದೆ. ಕೃಷಿ ಕೂಲಿಕಾರ್ಮಿಕರು ಅನ್ನಕ್ಕಾಗಿ ಹಪಹಪಿಸುತ್ತಿರುವ ಸಂದರ್ಭದಲ್ಲಿ ಅವರಿಗೆ ನೂರು ದಿನಗಳ ಕಾಲ ಕೆಲಸ ನೀಡದೇ ಗ್ರಾಮ ಪಂಚಾಯ್ತಿ ದ್ರೋಹ ಬಗೆದಿದೆ. ಕೂಡಲೇ ಕೆಲಸ ಮಾಡಿರುವ ಕಾರ್ಮಿಕರ ಬ್ಯಾಂಕ್ ಖಾತೆಗಳಿಗೆ ಕೂಲಿ ಹಣವನ್ನು ತುಂಬುವ ಕಾರ್ಯವಾಗಬೇಕು. ಸರ್ಕಾರ ನಿಗದಿಗೊಳಿಸಿರುವ ಕನಿಷ್ಠ ಕೂಲಿಯನ್ನು ನೀಡುವ ಮೂಲಕ ಉದ್ಯೋಗ ಖಾತ್ರಿಗೆ ಚಾಲನೆ ನೀಡಬೇಕು ಎಂದು ಆಗ್ರಹಿಸಿದರು.

ನೂರಾರು ಮಹಿಳಾ ಕೂಲಿಕಾರ್ಮಿಕರು ಇಲ್ಲಿನ ಮಾರಮ್ಮ ದೇಗುಲದಿಂದ ಗ್ರಾಮದ ಪ್ರಮುಖ ಬೀದಿಗಳಲ್ಲಿ ಮೆರವಣಿಗೆ ನಡೆಸಿ ಗ್ರಾ.ಪಂ ಕಾರ್ಯವೈಖರಿಗೆ ಧಿಕ್ಕಾರ ಕೂಗಿದರು.

ನಂತರ ಗ್ರಾ.ಪಂ. ಆವರಣದಲ್ಲಿ ಧರಣಿ ನಡೆಸಿದರು. ಈ ಸಂದರ್ಭದಲ್ಲಿ ಸ್ಥಳಕ್ಕೆ ಆಗಮಿಸಿದ್ದ ತಾ.ಪಂ ಕಾರ್ಯನಿರ್ವಹಣಾಧಿಕಾರಿ ಡಾ.ಜಿ.ತಿಪ್ಪೇಸ್ವಾಮಿ ಪ್ರತಿಭಟನಾಕಾರರನ್ನು ಉದ್ದೇಶಿಸಿ, ಗ್ರಾ.ಪಂ. ವ್ಯಾಪ್ತಿಯಲ್ಲಿ ಕಾಮಗಾರಿ ಕೈಗೊಂಡು ಯೋಜನೆಗೆ ಚಾಲನೆ ನೀಡಲಾಗುವುದು ಎಂದು ಭರವಸೆ ನೀಡಿದರೂ ಪ್ರತಿಭಟನಾಕಾರರ ಆಕ್ರೋಶ ನಿಲ್ಲಲಿಲ್ಲ. ಬದಲಾಗಿ ಕೂಲಿ ಕೇಳಲು, ಕೆಲಸ ಕೇಳಲು ಪಂಚಾಯ್ತಿಗೆ ಬಂದ ಮಹಿಳೆಯರ ಬಗ್ಗೆ ಅಶ್ಲೀಲವಾಗಿ ಮಾತನಾಡಿದ ಅಧ್ಯಕ್ಷರು ಮತ್ತು ಪ.ಕಾರ್ಯದರ್ಶಿ ವಿರುದ್ಧ ತಿರುಗಿತು. ಈ ಬಗ್ಗೆ ಸ್ಥಳದಲ್ಲಿದ್ದ ಇ.ಓ. ರವರು ಪರಿಸ್ಥಿತಿ ಅರಿತು ಅಧ್ಯಕ್ಷರು ಹಾಗೂ ಕಾರ್ಯದರ್ಶಿಗೆ ಎಚ್ಚರಿಕೆ ನೀಡಬೇಕಾಯ್ತು.

ಸಾಮೂಹಿಕ ಅರ್ಜಿ ಸಲ್ಲಿಕೆ : ಹೋರಾಟದ ಕೊನೆಯಲ್ಲಿ ತಾಲ್ಲೂಕು ಕಾರ್ಯನಿರ್ವಹಣಾಧಿಕಾರಿ ಎದುರಲ್ಲೇ, ನೂರಾರು ಕೂಲಿಕಾರರು ತಮ್ಮ ಹೆಸರುಗಳನ್ನು ಗ್ರಾ.ಪಂ ಕಛೇರಿಯಲ್ಲಿ ನೋಂದಣಿ ಮಾಡಿಸಿ 15 ದಿನದೊಳಗೆ ನಮಗೆ ಉದ್ಯೋಗ ನೀಡಬೇಕು ಎಂದು ಆಗ್ರಹಪಡಿಸಿದರು. 15 ದಿನದೊಳಗೆ ಹೆಸರು ನೋಂದಾಯಿಸಿದ ಎಲ್ಲರಿಗೂ ಉದ್ಯೋಗ ನೀಡುವುದಾಗಿ ಅಧಿಕಾರಿಗಳು ಭರವಸೆ ನೀಡಿದರು.

15 ದಿನದೊಳಗೆ ಉದ್ಯೋಗ ನೀಡದಿದ್ದರೆ ಮತ್ತೆ ಹೋರಾಟವನ್ನು ಆರಂಭಿಸುವ ಎಚ್ಚರಿಕೆಯೊಂದಿಗೆ ಸಭೆ ಮುಕ್ತಾಯಗೊಂಡಿತು. ಚಳ್ಳಕೆರೆ ತಾಲ್ಲೂಕಿನ ಪ್ರಮುಖ ಪಟ್ಟಣವಾದ ನಾಯ್ಕನಹಟ್ಟಿ, ವಾರದ ಸಂತೆಯ ದಿನವೇ ಈ ಹೋರಾಟ ನಡೆದಿದ್ದರಿಂದ ಅಲ್ಲಿ ನೆರೆದಿದ್ದ ನೂರಾರು ಜನರಿಗೆ ಈ ಉದ್ಯೋಗ ಖಾತ್ರಿ ಬಗ್ಗೆ ಜಾಗೃತಿ ಮೂಡಿಸುವಲ್ಲಿ ಈ ಹೋರಾಟ ಯಶಸ್ವಿಯಾಯಿತು. ಈ ಹೋರಾಟದಲ್ಲಿ ಸಿಐಟಿಯು ಜಿಲ್ಲಾ ಅಧ್ಯಕ್ಷರಾದ ಬಿ.ನಾಗರಾಜ್, ಸಿಪಿಐ(ಎಂ) ಕಾರ್ಯದರ್ಶಿ ತಿಪ್ಪೇಸ್ವಾಮಿ, ಸ್ಥಳೀಯ ಮುಖಂಡರಾದ, ತಿಪ್ಪೇಸ್ವಾಮಿ ಹಾಗೂ ಮಹಿಳಾ ಮುಖಂಡರಾದ ಮಂಜಮ್ಮ ಮೊದಲಾದವರು ಪಾಲ್ಗೊಂಡಿದ್ದರು.

ಸಿಂಧನೂರು: ತಪ್ಪಡಿ ಬಡಿದೆಚ್ಚರಿಸಿದ ನಿವೇಶನ ರಹಿತರ ದಂಡು

ಸಾಗಿತು ನಿವೇಶನ ರಹಿತರ ದಂಡು ಕೂಗುತ್ತಾ ಕೊಡಲೇಬೇಕೆಂದು ನಿವೇಶನ. ತಪ್ಪಡಿಯ ಬಡಿಯುತ್ತ ತಾಳಕ್ಕೆ ನಡೆಯುತ್ತಾ ಡಿವೈಎಫ್ಐ ಬಾವುಟ ಎತ್ತಿ ಮೇಲೆ ಹಿಡಿಯುತ್ತ, ಸಿಂಧನೂರು ಪಟ್ಟಣ ಪಂಚಾಯ್ತಿದಿಂದ ಪುರಸಭೆಗೆ, ಪುರಸಭೆಯಿಂದ ನಗರಸಭೆಗೆ ಬಡ್ತಿ ಪಡೆದಿದ್ದು, ಜನಸಾಮಾನ್ಯರಿಂದ ಅವರಿಗೆ ಮೂಲ ಸೌಲಭ್ಯ ಒದಗಿಸುವ ಜವಾಬ್ದಾರಿ ನನ್ನದೆಂಬ ಕಬರಿಲ್ಲದ ನಗರಸಭೆಗೆ ಕೊನೆಗೆ ಡಿವೈಎಫ್ಐ ಸಂಘಟನೆ ಎಚ್ಚರಿಕೆ ಕೊಡುವ ದಾಟಿಯಲ್ಲಿ ನಗರದ ನಿವೇಶನ ರಹಿತರನ್ನು ಸಂಘಟಿಸಿ, ನಿವೇಶನಕ್ಕಾಗಿ ಅರ್ಜಿಗಳನ್ನು ಹಾಕಿಸುವ ಕಾರ್ಯಕ್ರಮ ಹಾಕಿಕೊಂಡಿದೆ. 01.07.08 ರಂದು ಮೊದಲನೇ ಹಂತದಲ್ಲಿ 307 ಅರ್ಜಿಗಳನ್ನು ಮೆರವಣಿಗೆಯ ಮೂಲಕ ಹೋಗಿ ನಗರಸಭೆಗೆ ಅರ್ಜಿ ಸಲ್ಲಿಸಲಾಗಿತ್ತು. ಎರಡನೇ ಹಂತದ ಕಾರ್ಯಕ್ರಮವನ್ನು 08.08.08ರಂದು ಸಂಘಟಿಸಲಾಗಿತ್ತು. ಈ ಕಾರ್ಯಕ್ರಮದಲ್ಲಿ ಸುಮಾರು 300 ಜನರು ಭಾಗವಹಿಸಿದ್ದರು. ಶಿಸ್ತುಬದ್ಧ ಮೆರವಣಿಗೆಯು ಪ್ರವಾಸಿ ಮಂದಿರದಿಂದ (ಐ.ಬಿ.) ಇಂದ ಸಾಗಿ ಪ್ರಮುಖ ಬೀದಿಗಳ ಮೂಲಕ ತಪ್ಪಡಿ ಬಡಿಯುತ್ತ ಘೋಷಣೆ ಕೂಗುತ್ತಾ ಹೋರಾಟ ಮೆರವಣಿಗೆಯು ಜನರ ಗಮನ ಸೆಳೆಯಿತು.

ಬುರ್ಖಾ ಧರಿಸಿದ ಮಹಿಳೆಯರು, ಸಿಂಧೋಳಿ ಮಹಿಳೆಯರು, ಕಾಡಸಿದ್ರು, ಪಕೀರ್‍ರು, ಕಲಾಯಿಗಾರರು, ತಮ್ಮ ತಮ್ಮ ಸಾಂಪ್ರದಾಯಿಕ ಉಡುಪುಧರಿಸಿ, ಮೆರವಣಿಗೆಯಲ್ಲಿ ಸಾಲಾಗಿ ಹೊರಟಿದ್ದು, ಮೆರವಣಿಗೆಯ ವಿಶಿಷ್ಟತೆಯನ್ನು ಎತ್ತಿ ತೋರಿಸುತ್ತಿತ್ತು. ನಗರಸಭೆ ಪ್ರವೇಶಿಸಿದ ಮೆರವಣಿಗೆಕಾರರು ಮುಖ್ಯದ್ವಾರದ ಮುಂದೆ ಕುರಿತು ಚಿಲಿಪಿಲಿ ಹಕ್ಕಿಗಳಂತೆ ಘೋಷಣೆ ಕೂಗಿದ್ದು, ಬಸ್ಸಿಗಾಗಿ ಕಾಯುತ್ತ ರಸ್ತೆಯಲ್ಲಿ ನಿಂತ ಜನರನ್ನು ಓಡಿ ಬರುವಂತೆ ಮಾಡಿತು. ಸಭೆಯನ್ನುದ್ದೇಶಿಸಿ ಕಾಂ:ನಾರಾಯಣ ಕಿಲ್ಲದ್, ಕೃಷಿ ಕಾರ್ಮಿಕ ಸಂಘಟನೆ ಸಂಚಾಲಕರು, ಮತ್ತು ಕಾಂ: ನರಸಿಂಹಪ್ಪ, ಸಿಐಟಿಯು ತಾಲ್ಲೂಕು ಕಾರ್ಯದರ್ಶಿ ಇವರು ಬೆಂಬಲಿಸಿ ಮಾತನಾಡಿದರು. ಕಾಂ:ಅಪ್ಪಣ್ಣ ಕಾಂಬ್ಳೆ ಡಿವೈಎಫ್ಐ ತಾಲ್ಲೂಕು ಅಧ್ಯಕ್ಷರು ಮಾತನಾಡಿದರು. ಕಾಂ: ಮಹೇಶ್ ವಂದಿಸಿದರು. ಕಾಂ:ಯಂಕಪ್ಪ ಹಮಾಲರ ಸಂಘದ ಅಧ್ಯಕ್ಷರು ಭಾಗವಹಿಸಿದ್ದರು.

ಕೋಕಾ ಎಂಬ ದೋಖಾ..

ಪುಟ 5 ರಿಂದ

ಆಧರಿಸಿ ಅಂದಿನ ರಾಜ್ಯ ಸರ್ಕಾರದ ಪೊಲೀಸರು POTA ಅಡಿ 'ಫಿಟ್' ಮಾಡಿದ್ದರು. ನಿರ್ದೋಷಿ ಎಂದು ಸಾಬಿತಾದ ನಂತರವೇ ಹೊರಬಂದದ್ದು.

ಪಾಪ ಬಾಂಬ್ ಇಟ್ಟು ಓಡಿ ಹೋಗುವ ಮಂದಿ ಎಲ್ಲಿಂದ ಸಿಗಬೇಕು ಈ ಪೊಲೀಸರಿಗೆ. ಏನಿದ್ದರು ಊರೊಳಗೆ ಇದ್ದು ಪ್ರಜಾಸತ್ತಾತ್ಮಕ ರೀತಿಯ ಆಚೆ-ಈಚೆ ಹೋರಾಟ ನಡೆಸುತ್ತಾ ಇರುವ ಮಂದಿಗಳೇ ಭಯೋತ್ಪಾದಕರಾಗಿ ಸಿಗಬೇಕು. ಖಚಿತ ಸಾಕ್ಷಿ ಆದಾರ ಇಲ್ಲದೇ ದೇಶದಲ್ಲಿನ ಅಪರಾಧಗಳ ಕಾನೂನು (IPC)ಅಪರಾಧಗಳ ಪ್ರಕ್ರಿಯಾ ಕಾನೂನು (Cr. PC) ಹಾಗೂ ಸಾಕ್ಷ್ಯಾಧಾರಗಳ ಕಾನೂನು (Indian Evidence Act) ಯಾವ ಆರೋಪಿಗೂ ಎಂತಹುದೇ ಅಪರಾಧಕ್ಕೂ ಗಲ್ಲು ಶಿಕ್ಷೆ ವಿಧಿಸದು. ಆದರೆ ಪೋಟಾದಡಿ ಅದು ಸಾಧ್ಯ. ಅದೇ ನೋಡಿ ಪೋಟಾ ಕಾಯ್ದೆಯ ಕರಾಳ ಭೀಕರತೆ. ಅದಕ್ಕೆ ಬಿಜೆಪಿಯವರು ಅದನ್ನು ಬ್ರಹ್ಮಾಸ್ತ್ರ ಎನ್ನುವುದು. ಆದರೂ ಅದು ಜಾರಿಯಲ್ಲಿದ್ದಾಗಲೂ ಯಾವುದೇ ಭಯೋತ್ಪಾದಕ ದಾಳಿಗಳು ನಿಂತಿರಲಿಲ್ಲ. ನಡೆಯುತ್ತಲೇ ಇದ್ದವು ಎಂಬುದಕ್ಕೆ ಇತಿಹಾಸವೇ ಇಂದು ನಮಗೆ ಸಾಕ್ಷಿ.

'ಅಮೆರಿಕದ ಲಿಂಕು'

ಅಮೆರಿಕದ 'ಭಯೋತ್ಪಾದಕತೆ ವಿರುದ್ಧದ ಸಮರ'ದ ಘೋಷಣೆಯೊಂದಿಗೆ ಹೆಣೆಯಲ್ಪಟ್ಟ 'ನಾಗರೀಕತೆಗಳ ನಡುವಿನ ಸಮರ'ದ ಉದ್ಘೋಷದ ನಡುವೆ ರೂಪಿತವಾದ ಕಾಯ್ದೆಗಳೇ ಇವು.

ಬಿಜೆಪಿಯ POTAಗೆ 'ನಾಗರೀಕತೆಗಳ ನಡುವಿನ ಸಮರ' ಹೆಚ್ಚು ಹೃದಯಕ್ಕೆ ಹತ್ತಿರವಾಗಿದ್ದರೆ, ಕಾಂಗ್ರೆಸ್‌ನ 'ಕೋಕಾ'ಗೆ ಜಗದಗಲ ಪಸರಿಸುತ್ತಿದ್ದ ಸಾಮ್ರಾಜ್ಯಶಾಹಿ ಜಾಗತೀಕರಣ ವಿರೋಧಿ ಹೋರಾಟದ ಅಲೆಗಳು, ಬೆಂಗಳೂರನ್ನು ಅಂತರಾಷ್ಟ್ರೀಯ ಬಂಡವಾಳದ ಕೇಂದ್ರವಾಗಿಸಿ - ಸಿಂಗಪುರ ಮಾಡುವ ತಹತಹ. ಅದಕ್ಕೆ ಒದಗಿ ಬರಬಹುದಾದ ಪ್ರತಿರೋಧ ದಮನಿಸಲು ಭಯೋತ್ಪಾದನೆ ನೆಪದಲ್ಲಿ ಜನ ಚಳುವಳಿ ದಮನಿಸುವ ಅಸ್ತ್ರದ ಅಗತ್ಯವಿತ್ತು. ಈ ಎರಡು ಪಕ್ಷಗಳ ಒಳಗಿನ ಅಂತರಾಳದ ಸಮಾನ ಆಶಯವು ಜನ ಚಳುವಳಿಯ ದಮನವಾಗಿದೆ. ಸದನದಲ್ಲಿ ನಮ್ಮ 'ಕೋಕಾ'ಗೆ ನಿಮ್ಮ ಬಣ್ಣ ಬಳಿಯಿರಿ ತೊದರೆ ಇಲ್ಲ ಎಂಬ ಕಾಂಗ್ರೆಸ್ ಶಾಸಕರ ವಾದ ಇದಕ್ಕೆ ಪುಷ್ಟಿ ನೀಡಿದೆ. ಕೋಕಾ - 2000 ಮಸೂದೆಯನ್ನು ಅಂದಿನ ಕಾಂಗ್ರೆಸ್ ಸರ್ಕಾರ ಮಂಡಿಸಿದಾಗ ರಾಜ್ಯ ಶಾಸನ ಸಭೆಯ ಯಾವೊಬ್ಬ ಶಾಸಕರು ತುಟಿಬಿಚ್ಚದೆ ಸರ್ವಾನುಮತದಿಂದ ಅಂಗೀಕಾರವಾಗಿದೆ. ಹೇಗಿದೆ ನೋಡಿ ಭಯೋತ್ಪಾದನೆ ಭೂತ ತೋರಿ ಉಗ್ರರ ಸದೆ ಬಡಿಯುವ ನಾಮಬಲದೊಂದಿಗೆ ಜನ ಚಳುವಳಿಗಳನ್ನು ಹಣಿಯುವ ಆಳುವ ಪಕ್ಷಗಳ ಸರ್ವಸಮ್ಮತಿ!

ಆಗ ಮೊದಲ ವಿರೋಧ ಬಂದಿದ್ದೆ ಜನ ಚಳುವಳಿಯ ಮುಂಚೂಣಿಯಲ್ಲಿರುವ ಸಿಪಿಐ(ಎಂ), ದಲಿತ ಸಂಘಟನೆಗಳ ಹಾಗೂ ಪ್ರಗತಿಪರ ಶಕ್ತಿಗಳಿಂದ, ಆದರೆ ಈ ಚಳುವಳಿಗಳ ಪ್ರತಿನಿಧಿಗಳಾರು ಅಂದಿನ ಶಾಸನ ಸಭೆಗೆ ಆಯ್ಕೆ ಆಗಿರಲಿಲ್ಲ.

ಭಾರತದ 51 ನೇ ಗಣರಾಜ್ಯ ವರ್ಷದಲ್ಲಿ ಕಾನೂನಾದ ಈ ಶಾಸನಕ್ಕೆ 61ನೇ ಸ್ವಾತಂತ್ರ್ಯೋತ್ಸವ ವರ್ಷದಲ್ಲಿ ಈ ಅಸ್ತ್ರ ಬಳಕೆಗೊಂದು ನೆಪವಾಗಿ ಸರಣಿ ಬಾಂಬ್ ಸ್ಫೋಟ ಅನುವಾಗಿದೆ, ಬಳಸಲೊಂದು ಸರ್ಕಾರ ಅನಾಗರಿಕ ಪಕ್ಷದ ಕೈಯಲ್ಲಿ- ಸಿಕ್ಕ ಅವಕಾಶಗಳನ್ನೆಲ್ಲಾ ದ್ವೇಷ ಬಿತ್ತಲು ಬಯಸುವ ಮಂದಿಯ ಕೈಯಲ್ಲಿದೆ.

ಕರಾಳ ಕ್ರೂರ ಕೋಕಾವನ್ನು ಭಯೋತ್ಪಾದಕರ ಹೆಸರಿನಲ್ಲಿ ಜನ ಚಳುವಳಿಗಳ ಮೇಲೆ ಬಳಸಲು ಕೋಕಾ ಹೆಸರಿನಲ್ಲಿ ಸಂವಿಧಾನಕ್ಕೆ, ಜನತೆಗೆ, ಪ್ರಜಾಪ್ರಭುತ್ವಕ್ಕೆ ಮಹಾನ್ ದೋಖಾ ಹಾಕಲು ಬಿಜೆಪಿ ಸರ್ಕಾರ ಮುಂದಾಗಿದೆ. ಎಚ್ಚರ ಅನಿವಾರ್ಯ ಅವಶ್ಯಕವಾಗಿದೆ.

○



ಅಭಿವೃದ್ಧಿ ಸರ್ಕಾರದ ಹಿಂದೆ ಕೋಮುವಾದಿಗಳ ಕರಾಳ ಹಸ್ತಗಳು

ಎಸ್.ವೈ.ಗುರುಶಾಂತ್

ಕರ್ನಾಟಕದಲ್ಲಿ ಇತ್ತೀಚಿನ ವಿಧಾನಪರಿಷತ್ ಚುನಾವಣೆಯಲ್ಲಿ ಬಿಜೆಪಿಗೆ ಪೂರ್ಣ ಬಹುಮತವನ್ನು ಜನತೆ ನೀಡಿಲ್ಲ. ಸರ್ಕಾರ ರಚಿಸಲು ಅಗತ್ಯವಾದ ಸಂಖ್ಯೆ ಇಲ್ಲದಿರುವಾಗ ಹಲವು ಆಮಿಷ ಒಡ್ಡಿ ಪಕ್ಷೇತರರು ಬೆಂಬಲಿಸುವಂತೆ ಮಾಡಿಕೊಂಡ ಬಳಿಕ ಸರ್ಕಾರ ಅಧಿಕಾರಕ್ಕೆ ಬಂದಿದೆ.

ಹಾಗೆ ನೋಡಿದರೆ ಬಿಜೆಪಿ ಗಳಿಸಿದ ಮತ ಶೇ.33 ಆದರೆ ಅದಕ್ಕೆ ವಿರುದ್ಧವಾಗಿ ಬಿದ್ದ ಮತಗಳು ಶೇ. 66. ಹೀಗೆ ಬಿಜೆಪಿ ಗಳಿಸಿದ ಮತಗಳು, ಸ್ಥಾನಗಳು ಸಹ ಹಿಂದುತ್ವದ ಅಜೆಂಡಾಕ್ಕೆ ನೀಡಿದ ಮತಗಳು ಅಲ್ಲ. ಅದರ ಗೆಲುವಿಗೆ ಹಲವಾರು ಕಾರಣಗಳೂ ಇವೆ. ಈ ವಿಷಯ ಸಂಘ ಪರಿವಾರಕ್ಕೂ ಸ್ಪಷ್ಟವಾಗಿ ಗೊತ್ತಿದೆ.

ಆದ್ದರಿಂದಲೇ ಈ ಸಂಗತಿಯ ಬಗ್ಗೆ ಅರಿವಿರುವ ಬಿಜೆಪಿಯೂ ಸಹ ಹಿಂದುತ್ವ ಅಜೆಂಡಾ ಜಾರಿಗೆ ತನ್ನ ಬದ್ಧತೆಯನ್ನು ಬಹಿರಂಗವಾಗಿ ಘೋಷಿಸದೇ 'ಅಭಿವೃದ್ಧಿ'ಗೆ ಬದ್ಧವಾದ ಸರ್ಕಾರವೆಂದು ನಂಬಿಸಲು ಹರಸಾಹಸ ಮಾಡುತ್ತಲೇ ಇದೆ.

ಆದರೆ ಈ ಸರ್ಕಾರದ ಹಿಂದಿರುವುದು ಸಂವಿಧಾನೇತರ ಶಕ್ತಿಯಾಗಿರುವ ರಾಷ್ಟ್ರೀಯ ಸ್ವಯಂ ಸೇವಕ ಸಂಘ. ಇದು ನಾಜಿ ಹಿಟ್ಲರನ ಫ್ಯಾಸಿಸಂನ್ನು ಭಾರತದಲ್ಲಿ ಹಿಂದುತ್ವದ ಹೆಸರಿನಲ್ಲಿ ಜಾರಿಗೊಳಿಸುವ ಭಯಾನಕ ಸಂಘಟನೆ. ಎಲ್ಲಾ ಚಟುವಟಿಕೆಗಳೂ ಹೊರಜಗತ್ತಿಗೆ ತಿಳಿಸುವುದಿಲ್ಲ. ಸಮಾಜಕ್ಕೆ, ಸರ್ಕಾರಕ್ಕೆ ಬದ್ಧವೂ- ಹೊಣೆಗಾರನೂ ಅಲ್ಲ. ಇಂತಹ ಆರ್‌ಎಸ್‌ಎಸ್ ರಾಜ್ಯ ಸರ್ಕಾರ (ಕೇಂದ್ರದಲ್ಲಿ) ದ ಹಿಂದಿನ ಶಕ್ತಿ, ಸೂತ್ರಧಾರಿ. ಈಗ ಕರ್ನಾಟಕದಲ್ಲಿ ಒದಗಿಬಂದಿರುವ ಅವಕಾಶಗಳನ್ನು ಬಳಸಿ 'ಹಿಂದುತ್ವ'ದ ಅಜೆಂಡಾ ಜಾರಿಗೆ, ತೀವ್ರ ಕೋಮುವಾದೀಕರಣಕ್ಕೆ ಅಹೋರತವಾಗಿ ಪ್ರಯತ್ನಿಸುತ್ತಿದೆ. ತನ್ನ ಅಜೆಂಡಾ ಜಾರಿಗೆ ಇಡೀ ಸಂಘ ಪರಿವಾರವನ್ನು ತೊಡಗಿಸಿದೆ. ಆಡಳಿತದ ವಿವಿಧ ವಿಭಾಗಗಳು - ಹಂತಗಳಲ್ಲಿ ಕೈಚಾಚಿದೆ. ಹೀಗಾಗಿ ಬಿಜೆಪಿ ಅಧಿಕಾರಕ್ಕೆ ಬಂದ ಹೊಸ್ತಿಲಿನಲ್ಲಿ ಮೌನವಾಗಿದ್ದ ಆರ್‌ಎಸ್‌ಎಸ್ ಕೆಲವೇ ದಿನಗಳಲ್ಲಿ ತನ್ನ ಚಟುವಟಿಕೆಗಳನ್ನು ಜಾತ್ಯಾತೀತತೆ, ಪ್ರಜಾಪ್ರಭುತ್ವದ ಮೇಲಿನ ಧಾಳಿಗಳನ್ನು ತೀವ್ರಗೊಳಿಸಿದೆ.

ಈ ನೂರು ದಿನಗಳಲ್ಲಿ ಅದು ನಡೆಸಿದ ಕಾರ್ಯಾಚರಣೆಯ ಕೆಲವು ಘಟನೆಗಳು ನಮ್ಮ ಮುಂದಿವೆ. ಅಂತಹ ಕೆಲವೆಂದರೆ

ಬಹಿರಂಗ ಬೆದರಿಕೆ

ಬಾಬಾಬುಡನ್‌ಗಿರಿಯಲ್ಲಿ ಆಚರಣೆಯಲ್ಲಿದ್ದ ಸೂಫಿ ಪರಂಪರೆಯನ್ನು ವಿಕೃತಗೊಳಿಸಿ ಬದಲಾಯಿಸುವ ಪ್ರಯತ್ನ ತೀವ್ರಗೊಂಡಿದೆ. ಹಿಂದುತ್ವ ಶಕ್ತಿಗಳು ನ್ಯಾಯಾಲಯದ ಆದೇಶವನ್ನು ತಮಗೆ ಅನುಕೂಲವಾಗುವಂತೆ ವ್ಯಾಖ್ಯಾನಿಸಿ ಗೊಂದಲವನ್ನು ನಿರ್ಮಿಸುತ್ತಿವೆ. ಸರ್ಕಾರ ತನ್ನ ಜವಾಬ್ದಾರಿಯನ್ನು ನಿರ್ವಹಿಸಲು ಮುಂದಾಗುತ್ತಿಲ್ಲ.

ರಾಜ್ಯದಲ್ಲಿ ಬಹಳಷ್ಟು ಕೋಲಾಹಲ ಎಬ್ಬಿಸಿದ್ದ 'ಆದಿ ಉಡುಪಿ ಬೆತ್ತಲೆ ಪ್ರಕರಣ' ದ ವಿಚಾರಣೆ ಉಡುಪಿ ತ್ವರಿತ ನ್ಯಾಯಾಲಯದಲ್ಲಿ ಅಂತಿಮಗೊಂಡು ಎಲ್ಲ 12 ಆರೋಪಿಗಳನ್ನು ಸಾಕ್ಷ್ಯಾಧಾರಗಳ ಕೊರತೆಯಿಂದ ಖುಲಾಸೆಗೊಳಿಸಿ ತೀರ್ಪು ನೀಡಿತು. ಪೋಲೀಸರು, ಸಿಓಡಿ ಅಧಿಕಾರಿಗಳು, ಪಬ್ಲಿಕ್ ಪ್ರಾಸಿಕ್ಯೂಟರ್ ಎಲ್ಲರೂ ಶಾಮೀಲಾಗಿ ಅಪರಾಧಿಗಳನ್ನು ರಕ್ಷಿಸುವಲ್ಲಿ ಯಶಸ್ವಿಯಾಗಿದ್ದಾರೆ. ಹಿಂದೂ ಯುವಸೇನೆಯವರು ಅಂದು ಉಡುಪಿಯಲ್ಲಿ ಮೆರವಣಿಗೆ ಮಾಡಿ, ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದ್ದಾರೆ. ಹಿಂದೂ ಯುವಸೇನೆಯ ಜಿಲ್ಲಾ ಕಾರ್ಯದರ್ಶಿ ಮಾತನಾಡಿ, 'ಗೋಹತ್ಯೆ ಮುಂದುವರೆದರೆ ಗಲ್ಲಿ ಗಲ್ಲಿಗಳಲ್ಲಿ ಬೆತ್ತಲೆ ಪ್ರಕರಣಗಳು ನಡೆಯಲಿವೆ' ಎಂದು ಬಹಿರಂಗ ಬೆದರಿಕೆ ಹಾಕಿದ್ದಾರೆ.

ಪ್ರಚೋದನಾಕಾರಿ ಹೇಳಿಕೆ, ಕೃತ್ಯಗಳು

ಬೆಂಗಳೂರು ಮಹಾನಗರದಲ್ಲಿ ಸಂಭವಿಸಿದ ಸರಣಿ ಬಾಂಬ್ ಸ್ಫೋಟದಿಂದ ನಗರವಾಸಿಗಳು ತೀವ್ರ ಆತಂಕಕ್ಕೆ ಒಳಗಾಗಿದ್ದರು. ಒಬ್ಬ ಮಹಿಳೆಯನ್ನು ಬಲಿ ತೆಗೆದುಕೊಂಡ ಈ ಸ್ಫೋಟಗಳ ಉದ್ದೇಶ ನಗರದಲ್ಲಿ ಶಾಂತಿಯನ್ನು ಕದಡುವುದೇ ಆಗಿತ್ತು. ಎಲ್ಲ ಸಂಘ ಸಂಸ್ಥೆಗಳು ಈ ಪ್ರಯತ್ನವನ್ನು ಖಂಡಿಸಿದವು. ಆದರೆ ಸ್ವತಃ ಮುಖ್ಯಮಂತ್ರಿ ಯಡಿಯೂರಪ್ಪನವರು 'ತಮ್ಮ ಯಶಸ್ವಿ ಆಡಳಿತವ್ನ ಸಹಿಸದವರ ಪಿತೂರಿ ಇದು' ಎಂದು ಹೇಳಿಕೆ ನೀಡುವ ಮೂಲಕ ಘಟನೆಗೆ ರಾಜಕೀಯ ಬಣ್ಣ ನೀಡಲು ಯತ್ನಿಸಿದರು. ಬಿಜೆಪಿ ನಾಯಕರು ಪ್ರಚೋದನಕಾರಿ ಹೇಳಿಕೆಗಳನ್ನು ಮಾಡಿದರು.

ಬೆಂಗಳೂರು ಮಹಾನಗರದ ಹೆಬ್ಬಾಳ ಮತ್ತು ಜೆ.ಸಿ.ನಗರದ ಮಸೀದಿಗಳ ಆವರಣದಲ್ಲಿ ಹಂದಿಯ ರುಂಡ ಹಾಕಿದ ಮೂವರು ಶ್ರೀರಾಮಸೇನೆ ಕಾರ್ಯಕರ್ತರನ್ನು ಪೋಲಿಸು ಬಂಧಿಸಿದ್ದಾರೆ. ಪ್ರಕರಣದಿಂದ ಪರಿಸ್ಥಿತಿ ಉದ್ವಿಗ್ನಗೊಂಡು ಕಲ್ಲು ತೂರಾಟ ನಡೆದಿತ್ತು. ಪೋಲೀಸರು ಲಾಠಿ ಪ್ರಹಾರ ಮತ್ತು ಗಾಳಿಯಲ್ಲಿ ಗುಂಡು ಹಾರಿಸಿದ್ದರು.

ಸುಳ್ಳು ವದಂತಿ, ಧಾಳಿ

ದರ್ಗಾ ಸಂಸ್ಕೃತಿಯ ಹಸಿರು ಧ್ವಜವನ್ನು ಪಾಕಿಸ್ಥಾನದ ಧ್ವಜವೆಂದು ಸುಳ್ಳು ವದಂತಿ ಹಬ್ಬಿಸಿ, ಸಂಘ ಪರಿವಾರದ ದುಷ್ಕರ್ಮಿಗಳು ಸಕಲೇಶಪುರದ ಮಸೀದಿಗೆ ನುಗ್ಗಿ ದಾಂಧಲೆ ಮಾಡಿದ್ದಾರೆ. ಅಲ್ಲಿದ್ದ ಧಾರ್ಮಿಕ ಗ್ರಂಥಗಳನ್ನು ಹೊರಗೆಸೆದಿದ್ದಾರೆ. ದಾಂಧಲೆ ಮಾಡಿದವರ ವಿರುದ್ಧ ಕ್ರಮ ಜರುಗಿಸುವ ಬದಲು ಪೋಲೀಸರು ಅಲ್ಪಸಂಖ್ಯಾತರ ವಿರುದ್ಧವೇ ಪ್ರಕರಣ ದಾಖಲು ಮಾಡಿದ್ದಾರೆ. ಕೆಲದಿನಗಳ ಹಿಂದೆ ತುಮಕೂರಿನಲ್ಲಿಯೂ ಇಂತಹ ಘಟನೆಯೊಂದು ನಡೆದಿತ್ತು.

ಐತಿಹಾಸಿಕ ಹಂಪಿಯನ್ನು ವಿವಾದದ ಕಣವನ್ನಾಗಿಸಿ, ಕೋಮು ವಿಭಜನೆ ತರಲು ಸತತವಾಗಿ ಪ್ರಯತ್ನಿಸಲಾಗುತ್ತಿದೆ. ಅನಗತ್ಯ ವಿವಾದಗಳನ್ನು ಹುಟ್ಟು ಹಾಕಲಾಗುತ್ತಿದೆ.

ಕಾರ್ಮಿಕ ಮಂತ್ರಿ ಬಚ್ಚೇಗೌಡ ಸರ್ಕಾರಿ ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿ 'ನನಗೆ ಮತ ಹಾಕದವರಿಗೆ ತಕ್ಕ ಪಾಠ ಕಲಿಸುತ್ತೇವೆ. ಮುಸಲ್ಮಾನರು ನನಗೆ ಮೋಸ ಮಾಡಿದ್ದಾರೆ' ಇತ್ಯಾದಿ ಮಾತುಗಳನ್ನು ಆಡುವ ಮೂಲಕ ಜನತೆಯಲ್ಲಿ ಕೋಮುವಾರು ವಿಭಜನೆಗೆ ಪ್ರಚೋದನೆ ನೀಡಿದ್ದಾರೆ. ಉಡುಪಿಯಲ್ಲಿ



ಉದ್ದಕ್ಕೆ ಚಾಚುತ್ತಿರುವ ಕೋಮುವಾದಿ ಕೈ

ದನಗಳ ವ್ಯಾಪಾರ ಮಾಡುತ್ತಿದ್ದ ಒಬ್ಬನನ್ನು ಬಜರಂಗದಳದ ಗುಂಡಾಗಳು ಕೊಲೆಮಾಡಿದ ಘಟನೆ ನಡೆದಿದೆ. ಕೊಲೆಯಾದವನು ಒಬ್ಬ ಹಿಂದೂ. ಮಂಗಳೂರಿನಲ್ಲಿ 4 ಇರಿತದ ಪ್ರಕರಣಗಳು ಇತ್ತೀಚಿಗೆ ನಡೆದಿವೆ.

ಕ್ರಿಶ್ಚಿಯನ್ ಅಲ್ಪಸಂಖ್ಯಾತರ ವಿರುದ್ಧ ಸಂಘ ಪರಿವಾರದ ದಾಳಿಗಳು ಹೆಚ್ಚಾಗಿವೆ. ಅವರ ಮೇಲೆ ಮತಾಂತರದ ಆರೋಪ ಹೊರಿಸಿ ದಾಳಿಗಳನ್ನು ಮಾಡಲಾಗುತ್ತಿದೆ. ಮಂಗಳೂರಿನಲ್ಲಿ ಮತ್ತು ದಾವಣಗೆರೆಯಲ್ಲಿ ಕ್ರಿಶ್ಚಿಯನ್ ಪ್ರಾರ್ಥನಾ ಸ್ಥಳಗಳನ್ನು ಧ್ವಂಸ ಮಾಡಲಾಗಿದೆ.

ಒರಿಸ್ಸಾದಲ್ಲಿ ಕ್ರಿಶ್ಚಿಯನ್ ಸಮುದಾಯದ ಮೇಲೆ ನಡೆಸಲಾದ ಹಿಂಸಾಚಾರವನ್ನು ಪ್ರತಿಭಟಿಸಲು ರಾಜ್ಯದಲ್ಲಿ ಕ್ರಿಶ್ಚಿಯನ್ ಸಂಸ್ಥೆಗಳು ಬಂದ್ ಆಚರಿಸಿದ್ದನ್ನು ಪ್ರಶ್ನಿಸಿ ರಾಜ್ಯದ ಶಿಕ್ಷಣ ಮಂತ್ರಿ ನೋಟೀಸ್ ನೀಡಿದ್ದು ಮತ್ತು ಅವುಗಳ ವಿರುದ್ಧ ಕ್ರಮ ಜರುಗಿಸುವ ಬೆದರಿಕೆ ಹಾಕಿದ್ದು ಕೋಮುವಾದಿ ಶಕ್ತಿಗಳಿಗೆ ಮತ್ತಷ್ಟು ಕುಮ್ಮಕ್ಕು ನೀಡಿದೆ.

ಕೆ.ಆರ್.ಪೇಟೆಯಲ್ಲಿ ಹರಿಯಾಣದಿಂದ ಬಂದಿದ್ದ 12 ಜನ ಮುಸ್ಲಿಂ ಧಾರ್ಮಿಕ ಕಾರ್ಯಕರ್ತರನ್ನು ಭಯೋತ್ಪಾದಕರೆಂದು ಬಣ್ಣಿಸಿ ಅವರನ್ನು ಬಂಧಿಸುವಂತೆ ಪೋಲೀಸರ ಮೇಲೆ ವಿಶ್ವ ಹಿಂದೂ ಪರಿಷತ್‌ನವರು ಒತ್ತಾಯತಂದರು. ತಹಶೀಲ್ದಾರ್‌ರರ ಎದುರು ಅವರನ್ನು ಹಾಜರುಪಡಿಸಿ, ವಿಚಾರಣೆ ನಡೆಸಿದ ಬಳಿಕ ಜಾಮೀನಿನ ಮೇಲೆ ಅವರನ್ನು ಬಿಡುಗಡೆ ಮಾಡಲಾಗಿತ್ತು. ಆ ಸಂದರ್ಭದಲ್ಲಿ ಎರಡೂ ಕೋಮುಗಳ ನಡುವೆ ಬಿಗುವಿನ ವಾತಾವರಣ ನಿರ್ಮಾಣವಾಗಿತ್ತು. ಬಂಧಿತರನ್ನು ಬಿಡುಗಡೆ ಮಾಡಿದ್ದನ್ನು ಪ್ರತಿಭಟಿಸಿ ಹಿಂದುತ್ವ ಸಂಘಟನೆಗಳು ಕೆ.ಆರ್.ಪೇಟೆ ಬಂದ್‌ಗೆ ಕರೆ ನೀಡಿ ಪ್ರಕ್ಷುಬ್ಧ ಪರಿಸ್ಥಿತಿ ನಿರ್ಮಿಸಿದರು. ಈ ಸಮಯದಲ್ಲಿ ಪ್ರಚೋದನಾಕಾರಿ ಘೋಷಣೆಗಳನ್ನು ಕೂಗಿದರು.

ರಾಯಚೂರು ಗಲಭೆ

ರಾಯಚೂರಿನಲ್ಲಿ ದುಷ್ಕರ್ಮಿಗಳು ಗಣೇಶ ಮಂಟಪಗಳಿಗೆ ಬೆಂಕಿ ಹಚ್ಚಿದ ಘಟನೆ ಸಂಭವಿಸಿದೆ. ಈ ಖಂಡನಾರ್ಹ ಘಟನೆಯ ಹಿಂದೆ ಇರುವವರನ್ನು ಪತ್ತೆ ಹಚ್ಚುವುದು ಅಗತ್ಯವಾಗಿ ಆಗಬೇಕು. ಘಟನೆಯನ್ನು ಖಂಡಿಸಿ ಹಿಂದುತ್ವ ಸಂಘಟನೆಗಳು ರಾಯಚೂರು ಬಂದ್‌ಗೆ ಕರೆ ನೀಡಿದಾಗ ಕಲ್ಲು ತೂರಾಟ, ಪೋಲೀಸ್ ಲಾಠಿ ಪ್ರಹಾರ ನಡೆದಿದೆ. ಹುಬ್ಬಳ್ಳಿಯಲ್ಲಿಯೂ ಗಣೇಶ ಮೆರವಣಿಗೆಯ ಸಮಯದಲ್ಲಿ ಕಲ್ಲು ತೂರಾಟ ನಡೆದಿದ್ದು ಉದ್ವಿಗ್ನ ಪರಿಸ್ಥಿತಿ ಉಂಟಾಗಿದೆ.

ಹಿಂದುತ್ವ ಶಕ್ತಿಗಳು ರಾಜ್ಯದ ಹಲವೆಡೆ ಹುಟ್ಟುಹಾಕುತ್ತಿರುವ ಗಲಭೆಗಳಿಗೆ ಬಿಜೆಪಿ ಕುಮ್ಮಕ್ಕು ನೀಡುತ್ತಿರುವುದಕ್ಕೆ ಒಂದು ರಾಜಕೀಯ ಉದ್ದೇಶವಿದೆ. ಮುಂಬರುವ ಲೋಕಸಭಾ ಚುನಾವಣೆಯ ಮೇಲೆ ಕಣ್ಣಿಟ್ಟೇ ರಾಜ್ಯದಲ್ಲಿ ಕೋಮು ಗಲಭೆಗಳನ್ನು ಹುಟ್ಟುಹಾಕಲಾಗುತ್ತಿದೆ.

ಕೋಕಾ ಜಾರಿಗೆ ಯೋಚನೆ

ಭಯೋತ್ಪಾದನೆಯನ್ನು ತಡೆಗಟ್ಟುವ ಹೆಸರಿನಲ್ಲಿ ಕೋಕಾ ಕರಾಳ ಕಾನೂನನ್ನು ಜಾರಿಗೆ ತರಲು ರಾಜ್ಯ ಬಿಜೆಪಿ ಸರ್ಕಾರ ಯೋಚಿಸುತ್ತಿದೆ. ಇಂತಹ ಕರಾಳ ಕಾನೂನುಗಳನ್ನು ಬಿಜೆಪಿ ಸರ್ಕಾರ ಧಾರ್ಮಿಕ ಅಲ್ಪಸಂಖ್ಯಾತರ ವಿರುದ್ಧ ಹಾಗೂ ಎಡ ಸಂಘಟನೆಗಳ ಕಾರ್ಯಕರ್ತರ ವಿರುದ್ಧ-ಪ್ರಜಾಸತ್ತಾತ್ಮಕ ಚಳುವಳಿಗಳನ್ನು ದಮನ ಮಾಡಲು ದುರ್ಬಳಕೆ ಮಾಡುವ ಅಪಾಯವಿದೆ.

ಗೋಕರ್ಣ ದೇವಸ್ಥಾನ ಹಸ್ತಾಂತರ ಹಗರಣ

ಗೋಕರ್ಣದ ಮಹಾಬಲೇಶ್ವರ ದೇವಸ್ಥಾನವನ್ನು ರಾಮಚಂದ್ರಾಪುರ ಮಠಕ್ಕೆ ಹಸ್ತಾಂತರ ಮಾಡಿದ ಹಗರಣವು ಬಿಜೆಪಿ ಸರ್ಕಾರದ ಒಂದು ಸಾಧನೆಯೇ ಆಗಿದೆ! ಬಹಳಷ್ಟು ಆದಾಯ ಬರುತ್ತಿರುವ ಈ ದೇವಸ್ಥಾನವನ್ನು ಒಂದು ಆರ್‌ಎಸ್‌ಎಸ್ ಪ್ರಭಾವದ ಮಠಕ್ಕೆ ಒಪ್ಪಿಸುವುದರಲ್ಲಿ ಆರ್‌ಎಸ್‌ಎಸ್ ಪಾತ್ರ ಪ್ರಮುಖವಾಗಿದೆ.ಒಂದು ಸಾರ್ವಜನಿಕ ದೇವಸ್ಥಾನವನ್ನು ಹವ್ಯಕ ಸಮುದಾಯಕ್ಕೆ ಸೇರಿದ ಮಠಕ್ಕೆ ಒಪ್ಪಿಸುವುದರಲ್ಲಿ ಯಡಿಯೂರಪ್ಪನವರ ಜಾತಿ ರಾಜಕೀಯ ಎದ್ದು ಕಾಣುತ್ತದೆ. ನಿಯಮಗಳನ್ನು ಗಾಳಿಗೆ ತೂರಿ, ಸ್ಥಳೀಯ ಜನರ ಪ್ರತಿರೋಧವನ್ನೂ ಕಡೆಗಣಿಸಿ ಸಾರ್ವಜನಿಕ ಸೊತ್ತುಗಳನ್ನು ಖಾಸಗಿ ಸಂಸ್ಥೆಗಳಿಗೆ ನೀಡುವ ಪ್ರಕ್ರಿಯೆ ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದಿರುವುದರಿಂದ ಮಾತ್ರ ಸಾಧ್ಯವಾಗಿದೆ.



ಬಿಜೆಪಿಯ ನೂರು ದಿನಗಳು

ಪುಟ 9ರಿಂದ

ಯೋಜನೆಗಳು, ಕಾರ್ಯಕ್ರಮಗಳೂ ಇದುವರೆಗೂ ಚಾಲನೆ ಪಡೆದಿಲ್ಲ.

ಯೋಜನೆಗಳಿಗೆ ಬೇಕಾಗುವ ಒಟ್ಟು ಹಣದಲ್ಲಿ 8,000 ಕೋಟಿ ರೂ.ಗಳನ್ನು ವಿವಿಧ ಮೂಲಗಳಿಂದ ಎತ್ತುವ ಸಾಲಗಳಿಂದ ಪಡೆಯಲಾಗುವುದು ಎಂದು ಹೇಳಲಾಗಿದೆ. ಈಗಾಗಲೇ 60,000 ಕೋಟಿ ರೂ.ಗಳಿಗೂ ಹೆಚ್ಚು ಸಾಲದ ಹೊರೆಯನ್ನು ಹೊತ್ತಿರುವ ರಾಜ್ಯದ ಮೇಲೆ ಇದು ಗಂಭೀರ ಪರಿಣಾಮ ಬೀರಲಿದೆ. ಅಭಿವೃದ್ಧಿ ಹೆಸರಿನಲ್ಲಿ ಮಾನವ ಅಭಿವೃದ್ಧಿಯನ್ನು ಇಲ್ಲಿ ಕಡೆಗಣಿಸಲಾಗಿದೆ. ಮೂಲ ಸೌಕರ್ಯಗಳನ್ನು ಒದಗಿಸುವ ಹೆಸರಿನಲ್ಲಿ ಅಪಾರ ಮೊತ್ತದ ಹಣ ಗುತ್ತಿಗೆದಾರರಿಗೆ ಹರಿದು ಬರುವಂತೆ ಮಾಡಲಾಗಿದೆ. ಅಭಿವೃದ್ಧಿ ಹೆಸರಿನಲ್ಲಿ ಖಾಸಗಿ ಸಹಭಾಗಿತ್ವಕ್ಕೆ ಹೆಚ್ಚೆಚ್ಚು ಆದ್ಯತೆ ನೀಡಲಾಗುತ್ತಿದೆ.

ಜನತೆಯ ಮೇಲೆ ಹೊರೆ:

ಕೇಂದ್ರ ಸರ್ಕಾರ ಪೆಟ್ರೋಲ್ ಡೀಸೆಲ್ ಬೆಲೆಗಳನ್ನು ಏರಿಸಿದಾಗ, ಇತರ ರಾಜ್ಯ ಸರ್ಕಾರಗಳೂ ಮಾರಾಟ ತೆರಿಗೆಯನ್ನು ಕಡಿತ ಮಾಡಿದ ಪ್ರಮಾಣದಲ್ಲಿ ಕರ್ನಾಟಕದಲ್ಲಿಯೂ ಕಡಿಮೆ ಮಾಡಿ ಜನರ ಮೇಲೆ ಬೆಲೆ ಏರಿಕೆಯ ಭಾರವನ್ನು ಸ್ವಲ್ಪಮಟ್ಟಿಗಾದರೂ ಕಡಿಮೆ ಮಾಡಬಹುದಿತ್ತು. ಆದರೆ ಬಿಜೆಪಿ ಸರ್ಕಾರ ಕೇವಲ ಸಾಂಕೇತಿಕ ಪ್ರಮಾಣದಲ್ಲಿ ಮಾರಾಟ ತೆರಿಗೆ ಕಡಿತ ಮಾಡಿ ಜನತೆಯ ಮೇಲೆ ಬೆಲೆ ಏರಿಕೆಯ ಹೊರೆ ಹೇರಿತು. ಡೀಸೆಲ್ ಬೆಲೆ ಏರಿಕೆಯ ಸಂದರ್ಭದಲ್ಲಿ, ಬಸ್ ದರ ಏರಿಕೆ ಮಾಡುವುದಿಲ್ಲ ಎಂದು ಹೇಳಿಕೆ ನೀಡಿದ್ದ ಸರ್ಕಾರ ಇದೀಗ ರಾತ್ರೋರಾತ್ರಿ ಬಸ್ ಪ್ರಯಾಣ ದರ ಏರಿಕೆ ಮಾಡಿ ಬೆಲೆ ಏರಿಕೆಯಿಂದ ತತ್ತರಿಸಿರುವ ಜನರಿಗೆ ಮತ್ತೊಂದು ಬರೆ ಎಳೆದಿದೆ.

ಬಿಜೆಪಿಯೇ ಪರಿಹಾರ! ಪೊಳ್ಳು ಘೋಷಣೆ:

ಅಗತ್ಯ ವಸ್ತುಗಳ ತೀವ್ರ ಬೆಲೆ ಏರಿಕೆಯಿಂದಾಗಿ ಜನತೆ ಪರಿದಾಡುವಂತಾಗಿದೆ. ಎಲ್ಲಿದೆ ಬಿಜೆಪಿ ಪರಿಹಾರ? 6 ಲಕ್ಷ ಬಿಪಿಎಲ್ ಕಾರ್ಡ್‌ಗಳನ್ನು ಕಡಿತ ಮಾಡಲು ಆಸಕ್ತಿ ವಹಿಸಿದ ಯಡಿಯೂರಪ್ಪ ಸರ್ಕಾರ ಇದುವರೆಗೂ ಹೊಸ ಬಿಪಿಎಲ್ ಕಾರ್ಡುಗಳನ್ನೇಕೆ ವಿತರಿಸಲಿಲ್ಲ?

ನಿಲ್ಲದ ರೈತರ ಆತ್ಮಹತ್ಯೆ-ಎಲ್ಲಿದೆ ಬಿಜೆಪಿ ಪರಿಹಾರ? ಸಾಂಸ್ಥಿಕ ಸಾಲ ಪಡೆಯಲಾಗದ ರಾಜ್ಯದ ಸುಮಾರು 56 ಲಕ್ಷ ರೈತರನ್ನು ಖಾಸಗಿ ಲೇವಾದೇವಿಗಾರರ ಸುಲಿಗೆಯಿಂದ ಬಿಡುಗಡೆಮಾಡಲು ಸರ್ಕಾರ ವಿಫಲವಾಗಿದೆ. ರಾಜ್ಯ ಎದುರಿಸುತ್ತಿರುವ ವಿದ್ಯುತ್ ಕೊರತೆಗೆ ಎಲ್ಲಿದೆ ಬಿಜೆಪಿ ಪರಿಹಾರ?

ಐಟಿ ಕಂಪನಿಗಳಿಗೆ, ಹೈ ಟೆನ್ಷನ್ ವಿದ್ಯುತ್ ಬಳಕೆದಾರರಿಗೆ ಲೋಡ್ ಶೆಡ್ಡಿಂಗ್ ಮಾಡದ ಈ ಸರ್ಕಾರ ಸಾಮಾನ್ಯ ಬಳಕೆದಾರರ ಮೇಲೆ, ರೈತರ ಮೇಲೆ ಲೋಡ್ ಶೆಡ್ಡಿಂಗ್ ಹೇರುತ್ತಿದೆ ಹಿಂದಿನ ಸರ್ಕಾರ ಹಗಲಿಗೆ 6 ತಾಸು ವಿದ್ಯುತ್ ಪೂರೈಕೆ ಮಾಡುತ್ತಿದ್ದುದನ್ನು 4 ತಾಸಿಗೆ ಇಳಿಸಿದೆ ಈ ಸರ್ಕಾರ.

ವಿದ್ಯುತ್ ಕೊರತೆಯನ್ನು ನೀಗಿಸಲು ಸರ್ಕಾರಕ್ಕೆ ನಿಜವಾದ ಕಾಳಜಿಯೇ ಇಲ್ಲ. ತದಡಿ(ಉ.ಕ) ನಾಗಾರ್ಜುನ (ಉಡುಪಿ) ಮತ್ತು ಚಾಮಲ್ಲಾಪುರ (ಮೈಸೂರು) ವಿದ್ಯುತ್ ಯೋಜನೆಗಳಿಗೆ ಬಿಜೆಪಿ ಪರಿವಾರದವರಿಂದಲೇ ವಿರೋಧ!



ಮಂಗಳೂರಿನಲ್ಲಿ ನೀರು ಕೇಳಿದರೆ ಲಾಠಿ ಪ್ರಹಾರ

ರೈತರ ಸಮಸ್ಯೆಗಳಿಗೆ ಸ್ಪಂದಿಸದ ಸರ್ಕಾರ :

ರೈತರಿಗೆ ಬೀಜ, ರಸಗೊಬ್ಬರಗಳನ್ನು ಪೂರೈಸುವಲ್ಲಿ ಸರ್ಕಾರ ಸಂಪೂರ್ಣ ವಿಫಲ. ಟೊಮೋಟೋ ಬೆಳೆದ ರೈತರು ಕೆ.ಜಿ. ಒಂದಕ್ಕೆ 5 ರೂ.ಬೆಂಬಲ ಬೆಲೆ ನೀಡಲು ಮನವಿ ಮಾಡಿದ್ದಾರೆ. 'ಸರ್ಕಾರ ಧರ್ಮ ಛತ್ರವಲ್ಲ' ಎಂದು ಛೇಡಿಸಿದ್ದು ಇದೇ ಮುಖ್ಯಮಂತ್ರಿ ಯಡಿಯೂರಪ್ಪ!

ಹಾಸನ ಜಿಲ್ಲೆಯ ಆಲೂಗಡ್ಡೆ ಬೆಳೆದು ಹಾನಿಗೀಡಾದ ರೈತರು ಪರಿಹಾರಕ್ಕಾಗಿ ಮನವಿ ಮಾಡಿದಾಗ ರೈತರ ಅಸಹಾಯಕತೆಯನ್ನು ರಾಜಕೀಯ ಸೇಡಿನ ದೃಷ್ಟಿಯಿಂದ ಕಂಡದ್ದು ಇದೇಮುಖ್ಯಮಂತ್ರಿ ಯಡಿಯೂರಪ್ಪ.

ನೆರೆ-ಬರ :

9 ಜಿಲ್ಲೆಗಳ ಸುಮಾರು 200 ಗ್ರಾಮಗಳು ಪ್ರವಾಹ ಪೀಡಿತವಾಗಿದೆ. ಇಪ್ಪತ್ತಕ್ಕೂ ಹೆಚ್ಚು ಸಾವುಗಳು ಸಂಭವಿಸಿವೆ. ನೂರಾರು ಜಾನುವಾರುಗಳು ಸತ್ತಿವೆ. 3000ಕ್ಕೂ ಹೆಚ್ಚು ಮನೆಗಳು ಹಾನಿಗೊಳಗಾಗಿವೆ. ಸಂತಸ್ತರಿಗೆ ಇದುವರೆಗೂ ಸರಿಯಾದ ಪರಿಹಾರ ತಲುಪಲಿಲ್ಲ. ಕಳೆದ ಬಾರಿಯೂ ಹೀಗೆ ಆಗಿತ್ತು. ಪ್ರವಾಹ ಪೀಡಿತ ಗ್ರಾಮಗಳಿಗೆ ಶಾಶ್ವತ ಪರಿಹಾರ ಒದಗಿಸುವ ಕೆಲಸ ಆಗಲೇ ಇಲ್ಲ.

ಬೆಂಗಳೂರು ನಗರದಲ್ಲಿ ಒಳಚರಂಡಿ ಅವ್ಯವಸ್ಥೆಯಿಂದಾಗಿ ಈ ಸಲವೂ ಮಳೆ ನೀರು ಮನೆಗಳಿಗೆ ನುಗ್ಗಿ ಸಾಕಷ್ಟು ಹಾನಿಯಾಗಿದೆ. ಸರ್ಕಾರ ಇತ್ತ ಗಮನ ಹರಿಸಲೇ ಇಲ್ಲ. ರಾಜ್ಯದ 85 ಕ್ಕೂ ಹೆಚ್ಚು ತಾಲ್ಲೂಕಗಳಲ್ಲಿ ಮಳೆಯಾಗದೆ ಬರ ಪರಿಸ್ಥಿತಿ ಉಂಟಾಗಿದೆ. ಕುಡಿಯುವ ನೀರಿನ ಕೊರತೆ ಉಂಟಾಗಿದೆ. ರಾಜ್ಯ ಸರ್ಕಾರ ಕೇಂದ್ರಕ್ಕೆ ವರದಿ ರವಾನಿಸಿ ಕೈ ತೊಳೆದುಕೊಂಡಿವೆ.

ಬರ ಪೀಡಿತ ಪ್ರದೇಶಗಳಲ್ಲಿ ದನಕರುಗಳಿಗೆ ಮೇವಿನ ಕೊರತೆ ಉಂಟಾಗಿವೆ. ಗೋರಕ್ಷಣೆಯ ಬಗ್ಗೆ ಬಹಳಷ್ಟು ಮಾತನಾಡುವ ಬಿಜೆಪಿ ಕಣ್ಣಿಗೆ ದನಕರುಗಳ ಮೇವಿನ ಸಮಸ್ಯೆ ಕಾಣುತ್ತಿಲ್ಲ.

ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಯೋಜನೆಯ ಅಡಿಯಲ್ಲಿ 741 ಕೋಟಿ ರೂ. ಹಣ ಲಭ್ಯವಿದ್ದರೂ ಯೋಜನೆಯನ್ನು ಸಮರ್ಪಕವಾಗಿ ಜಾರಿಗೆ ತಂದು ಕೆಲಸವಿಲ್ಲದೆ ನಗರ ಪ್ರದೇಶಗಳಿಗೆ ವಲಸೆ ಹೋಗುತ್ತಿರುವ ಗ್ರಾಮೀಣ ಕೂಲಿಕಾರರ ನೆರವಿಗೆ ಬರಲು ಸರ್ಕಾರ ಆಸಕ್ತಿ ವಹಿಸುತ್ತಿಲ್ಲ.

ದಲಿತ ವಿರೋಧಿ ಸರ್ಕಾರ

ಬಿಜೆಪಿ ಸರ್ಕಾರ ಮೇಲ್ಜಾತಿ ಮೇಲ್ವರ್ಗಗಳ ನೆಲೆಗಳಲ್ಲಿ ಗಟ್ಟಿಗೊಳ್ಳುತ್ತಿದ್ದಂತೆ ರಾಜ್ಯದಲ್ಲಿ ದಲಿತ ಸಮುದಾಯಗಳು ಅಭದ್ರತೆಯನ್ನು ಎದುರಿಸುವಂತಾಗಿದೆ. ದಲಿತರ ಮೇಲೆ ಸವರ್ಣೀಯರ ದೌರ್ಜನ್ಯಗಳು ಹೆಚ್ಚಾಗುತ್ತಿವೆ. ಅಂತರಜಾತಿ ಮದುವೆಯಾಗಲು ಮುಂದಾಗುವವರ ಮೇಲೆ ಹಲ್ಲೆ ಮಾಡಲಾಗುತ್ತಿದೆ. ಈ ಎಲ್ಲಾ ಸಂದರ್ಭಗಳಲ್ಲಿ ಪೋಲೀಸರು ಸವರ್ಣೀಯರ ಪರವಾಗಿಯೇ ನಿಲ್ಲುವುದು ಸಾಮಾನ್ಯವಾಗಿದೆ.

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ಅಭಿವೃದ್ಧಿಗಾಗಿ ವಿಶೇಷ ಘಟಕ ಯೋಜನೆ ಅಡಿಯಲ್ಲಿ ಖರ್ಚು ಮಾಡಬೇಕಾದ ಹಣವನ್ನು ಯಾವುದೇ ಮುಲಾಜಿಲ್ಲದೆ ಬೇರೆ ಉದ್ದೇಶಗಳಿಗಾಗಿ ಖರ್ಚು ಮಾಡಲಾಗುತ್ತಿದೆ.



ಮಹಿಳೆ, ವಿದ್ಯಾರ್ಥಿ ಯಾರನ್ನೂ ಬಿಡದ ಲಾಠಿ

ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗಾಗಿ ಹಾಸ್ಟೆಲ್‌ಗಳನ್ನು ಹೆಚ್ಚಿಸಲು, ಹಾಸ್ಟೆಲುಗಳಲ್ಲಿ ಅಗತ್ಯ ಸೌಕರ್ಯಗಳನ್ನು ಒದಗಿಸಿ ಹಾಸ್ಟೆಲ್ ವಿದ್ಯಾರ್ಥಿಗಳ ಸ್ಟೈಫಂಡ್ ಹೆಚ್ಚಿಸಲು ಸರ್ಕಾರಕ್ಕೆ ಆಸಕ್ತಿ ಇಲ್ಲ. ಪರಿಶಿಷ್ಟ ಜಾತಿ/ಪರಿಶಿಷ್ಟ ಪಂಗಡಗಳ ವಿದ್ಯಾರ್ಥಿಗಳಿಗೆ ಶಿಷ್ಯ ವೇತನ ಪಾವತಿ ಮಾಡದೆ ಸತ್ತಾಯಿಸಲಾಗುತ್ತಿದೆ.

ಅಧಿಕಾರಿಗಳಿಗೆ ಬಡ್ತಿ ನೀಡುವಾಗ, ಆಯಕಟ್ಟಿನ ಸ್ಥಾನಗಳಿಗೆ ದಲಿತ ಅಧಿಕಾರಿಗಳು ನೇಮಕವಾಗುವುದನ್ನು ತಪ್ಪಿಸಲು ಸರ್ಕಾರದ ಮಧ್ಯ ಪ್ರವೇಶ ಮುಂದುವರಿದಿದೆ. ಕಂಬಾಲಪಲ್ಲಿ ಪ್ರಕರಣದಲ್ಲಿ ನೊಂದ ದಲಿತ ಕುಟುಂಬಗಳ ಪುನರ್ವಸತಿ ಕಾರ್ಯಕ್ರಮ ಇದುವರೆಗೂ ಜಾರಿಗೆ ಬಂದಿಲ್ಲ. ಪ್ರಕರಣಕ್ಕೆ ಸಂಬಂಧಿಸಿ ಸರ್ಕಾರ ಮೇಲ್ಮನವಿ ಸಲ್ಲಿಸಿದ್ದರೂ ದಲಿತರಿಗೆ ನ್ಯಾಯ ಒದಗಿಸುವ ವಿಷಯದಲ್ಲಿ ಸರ್ಕಾರದ ಆಸಕ್ತಿ ಸಾಲದು.

ಶಿಕ್ಷಣ ರಂಗ :

ಖಾಸಗಿ ವಿಶ್ವ ವಿದ್ಯಾಲಯಗಳಿಗೆ, ವಿದೇಶಿ ವಿಶ್ವ ವಿದ್ಯಾಲಯಗಳಿಗೆ ಅವಕಾಶ ನೀಡುವ ಮೂಲಕ ಶಿಕ್ಷಣದ ಖಾಸಗೀಕರಣಕ್ಕೆ ಈ ಸರ್ಕಾರದ ಬದ್ಧತೆ ಬಯಲಾಗಿದೆ.

ಪಠ್ಯ ಪುಸ್ತಕಗಳ ಕೇಸರೀಕರಣಕ್ಕಾಗಿ ಸಂಘ ಪರಿವಾರದ ಬುದ್ಧಿ ಜೀವಿಗಳ ತಂಡವನ್ನು ಸರ್ಕಾರ ಈಗಾಗಲೇ ನೇಮಿಸಿದೆ.

ಖಾಸಗಿ ಸಂಸ್ಥೆಗಳು ಶಾಲೆಗಳಿಗೆ ಪೂರೈಸಿದ ಮಧ್ಯಾಹ್ನದ ಊಟವನ್ನು ಉಂಡು ಹಲವು ಕಡೆ ಶಾಲಾ ಮಕ್ಕಳು ಅಸ್ವಸ್ಥರಾಗಿದ್ದರೂ ಅಕ್ಷರ ದಾಸೋಹ ಯೋಜನೆಗಳನ್ನು ಖಾಸಗೀಕರಣಗೊಳಿಸುವ ಉದ್ದೇಶವನ್ನು ಈ ಸರ್ಕಾರ ಕೈಬಿಟ್ಟಿಲ್ಲ. ಬಿಸಿಯೂಟ ತಯಾರಿಸುವುದನ್ನು ಮಠಗಳಿಗೆ ಮತ್ತು ಬಿಜೆಪಿ ಪ್ರಭಾವವಿರುವ ಸಂಸ್ಥೆಗಳಿಗೆ ವಹಿಸಿಕೊಡುವ ಮೂಲಕ ಪುರೋಹಿತಶಾಯಿಯನ್ನು ಬಲಪಡಿಸಿದಂತಾಗಲಿದೆ ಮಾತ್ರವಲ್ಲ ಜಾತಿ ವಿನಾಶದ ಕರ್ಮವಾಗಿ ಅಡಿಗೆ ಮಾಡಲು ದಲಿತ ಮಹಿಳೆಯರನ್ನು ನೇಮಿಸಲು ಇದ್ದ ಅವಕಾಶಕ್ಕೆ ಹಿನ್ನಡೆಯಾಗುವುದು.

ಸರ್ಕಾರಿ ಶಾಲೆಗಳನ್ನು ಖಾಸಗಿ ಸಂಸ್ಥೆಗಳಿಗೆ ವಹಿಸಿಕೊಡಲು ಸರ್ಕಾರದ ಒಲವು ಹೆಚ್ಚಾಗಿದೆ. ○

ಆಡಳಿತ ಯಂತ್ರದ ದುರುಪಯೋಗ

ಮಹಿಳಾ ಆಯೋಗದ 800 ಫೈಲುಗಳ ನಾಪತ್ತೆ ಪ್ರಕರಣವನ್ನು ಮುಚ್ಚಿ ಹಾಕುವ ಪ್ರಯತ್ನ ನಡೆಯುತ್ತದೆ. ಈ ಫೈಲುಗಳಲ್ಲಿ ಯಡಿಯೂರಪ್ಪ ಬೆಂಬಲಿಗ ರೇಣುಕಾಚಾರ್ಯ ಮತ್ತು ನರ್ಸ್ ಜಯಲಕ್ಷ್ಮಿ ನಡುವಿನ ಪ್ರಕರಣಕ್ಕೆ ಸಂಬಂಧಿಸಿದ ಫೈಲುಗಳೂ ಸೇರಿದ್ದು ಫೈಲುಗಳು ನಾಪತ್ತೆಯಾಗುವುದರಲ್ಲಿ ಆಯೋಗದ ಅಧ್ಯಕ್ಷರ ಪಾತ್ರವನ್ನು ತನಿಖೆಗೆ ಒಳಪಡಿಸಲು ಸರ್ಕಾರ ಸಿದ್ಧವೇ?

ಪದ್ಮಪ್ರಿಯಾ ಅಸಹಜ ಸಾವು ಪ್ರಕರಣದಲ್ಲಿ ಸರ್ಕಾರ ಅಪರಾಧಿಗಳನ್ನು ರಕ್ಷಿಸಲು ಆಡಳಿತ ಯಂತ್ರದ ದುರ್ಬಳಕೆ ಮಾಡುತ್ತಿದೆ ಎಂದು ರಾಜ್ಯಾದ್ಯಂತ ಚರ್ಚೆಯಾಗುತ್ತಿದೆ.

ಹೊಸ ಸರ್ಕಾರ ರಚನೆಯಾಗುವ ಸಂದರ್ಭದಲ್ಲಿ ಕೆಲವು ಮಂತ್ರಿ ಸ್ಥಾನ ಆಕಾಂಕ್ಷಿಗಳಿಗೆ ಮಂತ್ರಿ ಸ್ಥಾನ ಸಿಗದಿದ್ದಾಗ ರಾಜ್ಯದ ವಿವಿಧಡೆ ಬಿಜೆಪಿಯ ಕಾರ್ಯಕರ್ತರೇ ಬೀದಿಗಿಳಿದು ಸಾರ್ವಜನಿಕ ಆಸ್ತಿ ಪಾಸ್ತಿಗಳಿಗೆ ಧಕ್ಕೆಯುಂಟು ಮಾಡಿದ್ದರೂ ಅವರ ವಿರುದ್ಧ ಕಾನೂನು ಕ್ರಮ ಜರುಗಿಸಲು ಸರ್ಕಾರ ಹಿಂದೇಟು ಹಾಕುವ ಮೂಲಕ ಆಡಳಿತ ಯಂತ್ರದ ದುರುಪಯೋಗ ಮಾಡಿದೆ.

ಜನಶಕ್ತಿ ಕನ್ನಡ ವಾರಪತ್ರಿಕೆ



ಜಯ

ಕುಲಾಂತರಿ ತಳಿಗಳು ಜೈವಿಕ ಪರಿಸರಕ್ಕೆ ಅಪಾಯಕಾರಿಯೇ ?

ಕುಲಾಂತರಿ ಹತ್ತಿಯ ವಿಚಾರದಲ್ಲಿನ ವಿವಾದ ಇನ್ನೂ ಇತ್ಯರ್ಥವಾಗದೇ ಇರುವಾಗಲೇ ಕುಲಾಂತರಿ ಬದನೆಯ ಪ್ರಶ್ನೆ ಎದ್ದು ಬಂದಿದೆ. ಕುಲಾಂತರಿ ತಂತ್ರಜ್ಞಾನ ಅಪಾಯಕಾರಿಯೇ?


ಕಳೆದ ವರ್ಷ, ಆಂಧ್ರಪ್ರದೇಶದಲ್ಲಿನ ಎರಡು ಜಿಲ್ಲೆಗಳಲ್ಲಿ ವಂಶವಾಹಿ ತಂತ್ರಜ್ಞಾನದಿಂದ ಸೃಷ್ಟಿಸಿದ ಹತ್ತಿ ಬೆಳೆಯನ್ನು ಮೇಯ್ದ ನೂರಾರು ಕುರಿಗಳು ಸತ್ತು ಬಿದ್ದವು ಎಂದು ವರದಿಯಾಯಿತು. ಅವುಗಳು ವಂಶವಾಹಿ ಮಾರ್ಪಾಟಾದ ತಳಿ ವಿಧಾನದಿಂದ ಬೆಳೆದ ಹತ್ತಿ ತಿಂದಿದ್ದರಿಂದಲೇ ಸತ್ತದ್ದು ಎಂಬ ಗುಮಾನಿ ಎಲ್ಲೆಡೆ ಎದ್ದಿತ್ತು. ಏಕೆಂದರೆ, ವಂಶವಾಹಿ ತಂತ್ರಜ್ಞಾನದ ಹತ್ತಿಯಲ್ಲಿ ಬೌಂಟ್ ಟಾಕ್ಸಿನ್ ಎಂಬ ವಿಷಕಾರಿ ಅಂಶ ಹೆಚ್ಚಿನ ಪ್ರಮಾಣದಲ್ಲಿದೆಯೆಂದು, ಅಲ್ಲದೆ ವಂಶವಾಹಿ ಮಾರ್ಪಾಟಾದ ತಳಿಗಳನ್ನು ಬೆಳೆ ಬೆಳೆಯಲು ಬಳಸುವ ಮೊದಲು ಅವುಗಳು ಜೀವಿಗಳ ಆರೋಗ್ಯ ಮತ್ತು ಪರಿಸರದ ಮೇಲೆ ಉಂಟುಮಾಡಬಲ್ಲ ಅಪಾಯಗಳ ಕುರಿತು ಹೆಚ್ಚಿನ ಸಂಶೋಧನೆ ನಡೆಯಬೇಕೆಂಬ ಹಲವಾರು ವಿಜ್ಞಾನಿಗಳ ಕೂಗು ಮುಂಚಿನಿಂದಲೇ ಇದೆ.

ವಂಶವಾಹಿ ಮಾರ್ಪಾಟಾದ ತಳಿಗಳು:

ನಿಸರ್ಗದತ್ತವಾಗಿ ಪಡೆದು ಸಂರಕ್ಷಿಸಿಕೊಂಡು ಬಂದಿರುವ ಬೀಜಗಳಿಂದ ನಾವು ಸದ್ಯಕ್ಕೆ ಬೆಳೆ ಬೆಳೆಯುತ್ತಿದ್ದೇವೆ. ಈ ಬೀಜಗಳು ಕೆಲವು ನಿರ್ದಿಷ್ಟ ಗುಣಸ್ವಭಾವಗಳನ್ನು ಹೊಂದಿದ್ದು, ನಿರ್ದಿಷ್ಟ ಪ್ರಮಾಣದ ಇಳುವರಿ ಮತ್ತು ಪೋಷಕಾಂಶಗಳನ್ನು ನೀಡುತ್ತಿವೆ. ಆದರೆ, ಇಂತಹ ನಿಸರ್ಗದತ್ತ ತಳಿಗಳಿಗಿಂತ ವಂಶವಾಹಿ ಮಾರ್ಪಾಟಾದ ತಳಿಗಳು (Genetically modified) ಹೆಚ್ಚಿನ ಇಳುವರಿ, ಹೆಚ್ಚಿನ ಪೋಷಕಾಂಶಗಳು, ಮತ್ತು ಹೆಚ್ಚಿನ ರೋಗ ನಿರೋಧಕ ಶಕ್ತಿಯನ್ನು ನೀಡಬಲ್ಲವು. ವಂಶವಾಹಿ ಮಾರ್ಪಾಟಾದ ಜೀವಿಗಳಿಂದ ತಯಾರಿಸಿದ ಆಹಾರ ಅಥವಾ ಬೆಳೆಯನ್ನು ವಂಶವಾಹಿ ಮಾರ್ಪಾಟಾದ ಬೆಳೆ ಎಂದು ಕರೆಯಲಾಗುತ್ತದೆ. ವಂಶವಾಹಿ ಮಾರ್ಪಾಟಾದ ಜೀವಿಗಳನ್ನು ವಂಶವಾಹಿ ತಂತ್ರಜ್ಞಾನದಿಂದ ನಿರ್ಮಿಸಲಾಗುತ್ತದೆ. ಜಗತ್ತಿನಲ್ಲಿ ಪ್ರಪ್ರಥಮ ಬಾರಿಗೆ ತಯಾರಾದ ವಂಶವಾಹಿ ಮಾರ್ಪಾಟು ಜೀವಿಯೆಂದರೆ 1973ರಲ್ಲಿ ಅಮೇರಿಕಾದಲ್ಲಿ ಸೃಷ್ಟಿಸಿದ ಇ-ಕೊಲಿ ಎಂಬ ಬ್ಯಾಕ್ಟೀರಿಯಾ. ನಂತರದಲ್ಲಿ ಹಲವಾರು ವಂಶವಾಹಿ ಮಾರ್ಪಾಟಾದ ಜೀವಿಗಳನ್ನು ನಿರ್ಮಿಸಿ ವೈದ್ಯಕೀಯ ಕ್ಷೇತ್ರದಲ್ಲಿ ಔಷಧಿ ತಯಾರಿಕೆಗೆ ಬಳಸಲಾಗುತ್ತಿದೆ. ಉದಾಹರಣೆಗೆ: ಮಧುಮೇಹ ರೋಗ ನಿವಾರಣೆಗೆ ಅಗತ್ಯವಿರುವ ಇನ್ಸುಲಿನ್, ಹೀಮೋಫೀಲಿಯಾ ರೋಗಿಗಳಲ್ಲಿ ರಕ್ತ ಸ್ರಾವವಾದಾಗ ರಕ್ತ ಹೆಪ್ಪುಗಟ್ಟಲು ಔಷಧಿ, ಇತ್ಯಾದಿ.

ವಂಶವಾಹಿ ಮಾರ್ಪಾಟಾದ ಜೀವಿಗಳು:

ವಿವಿಧ ಸಂಯುಕ್ತಗಳಿಂದ ಸಂಗ್ರಹಿಸಿದ ಡಿ.ಎನ್.ಎ. (ಡಿ ಆಕ್ಸಿ ರೈಬೋ ನ್ಯೂಕ್ಲಿಯಿಕ್ ಆಸಿಡ್)ಯನ್ನು ಸಂಯೋಜಿಸಿ ಒಂದು ಸಂಯುಕ್ತ ಡಿ.ಎನ್.ಎ. ಆಗಿ ಪರಿವರ್ತಿಸಲಾಗುತ್ತದೆ. (ಡಿ.ಎನ್.ಎ. ಎಂಬುದು ಸಕಲ ಜೀವಿಗಳಲ್ಲಿರುವ ಪ್ರತಿ ಜೀವಕೋಶದ ಮೂಲಾಧಾರ.) ತದನಂತರ ಹೀಗೆ ಹೊಸದಾಗಿ ರೂಪುಗೊಂಡ ಡಿ.ಎನ್.ಎ.ಯನ್ನು ಅಂದರೆ ಜೀನುಗಳನ್ನು ಜೀವಿಯೊಂದಕ್ಕೆ ವರ್ಗಾಯಿಸಿದಾಗ ಆ ಜೀವಿಯ ಮೂಲ ಡಿ.ಎನ್.ಎ.ಯ ಸಂರಚನೆಯೇ ಮಾರ್ಪಾಡಾಗುತ್ತಾ



ಹೋಗುತ್ತದೆ. ಹೊಸ ಡಿ.ಎನ್.ಎ. ಸಂರಚನೆಯಿಂದಾಗಿ ಆ ಜೀವಿಯ ಗುಣಸ್ವಭಾವಗಳನ್ನು ನಿರ್ಧರಿಸುವ ಜೀನುಗಳು ಮಾರ್ಪಾಡಾಗುತ್ತವೆ. ಅದರಂತೆ ಹೆಚ್ಚಿನ ಇಳುವರಿ, ಹೆಚ್ಚಿನ ಪೋಷಕಾಂಶಗಳು, ಮತ್ತು ಹೆಚ್ಚಿನ ರೋಗ ನಿರೋಧಕ ಶಕ್ತಿಯನ್ನು ನೀಡಬಲ್ಲ ಹೊಸ ಹೊಸ ಡಿ.ಎನ್.ಎ. ಸಂರಚನೆಗಳನ್ನು ಸಂಶೋಧಿಸಿ ವಂಶವಾಹಿ ಮಾರ್ಪಾಟಾದ ತಳಿಗಳನ್ನು ಸೃಷ್ಟಿಸಬಹುದು. ಆದರೆ, ಹೊಸ ಗುಣಲಕ್ಷಣಗಳನ್ನು ಹೊಂದಿರುವ ತಳಿಗಳು ಉತ್ಪಾದನೆಯಾದಾಗ ಅವು ಅಪಾಯಕಾರಿಯೂ ಇರಬಲ್ಲವಾದ್ದರಿಂದ ಇದನ್ನು ಬಳಸುವ ಮೊದಲಿಗೇ ಹಲವಾರು ವೈಜ್ಞಾನಿಕ ಪ್ರಯೋಗಗಳಿಂದ ಖಾತರಿ ಮಾಡಿಕೊಳ್ಳಬೇಕು. ಇದನ್ನು ಜೈವಿಕ ಸುರಕ್ಷತೆ ಎನ್ನಲಾಗುತ್ತದೆ. ಉದಾಹರಣೆಗೆ: 2005ರಲ್ಲಿ ಕೆನಡಾದ ಮಾನ್ಸಾಂಟೋ ಕಂಪನಿಯು ಇಲಿಗಳ ಮೇಲೆ ನಡೆಸಿದ ಪ್ರಯೋಗದ ವರದಿಯಂತೆ, ವಂಶವಾಹಿ ಮಾರ್ಪಾಟಾದ ಜೋಳವನ್ನು 90 ದಿನಗಳ ಕಾಲ ತಿಂದ ಇಲಿಗಳ ಕಿಡ್ನಿಯ ಗಾತ್ರ ಮತ್ತು ರಕ್ತದ ಪ್ರಮಾಣ ಬದಲಾಗಿತ್ತು.


ಕುಲಾಂತರಿ (ಟರ್ಮಿನೇಟೆಡ್ ಜೀನ್) ತಳಿಗಳು ಮತ್ತು ಪೇಟೆಂಟ್:

ಒಮ್ಮೆ ಬಿತ್ತಿದ ಬೀಜ ಫಸಲು ನೀಡಿದ ನಂತರ ಅದರ ಫಸಲಿನಿಂದ ಬರುವ ಬೀಜಗಳಲ್ಲಿ ಮತ್ತೆ ಫಲ ಕೊಡುವ ಸಾಮರ್ಥ್ಯವಿಲ್ಲದಿರುವಂತಹ ಗುಣವನ್ನು ಕೆಲವು ವಂಶವಾಹಿ ಮಾರ್ಪಾಟಾದ ತಳಿಗಳಲ್ಲಿ ಬಹುರಾಷ್ಟ್ರೀಯ ಕಂಪನಿಗಳು ಅಳವಡಿಸಿವೆ. ಅಂತಹ ತಳಿಗಳನ್ನು ಟರ್ಮಿನೇಟೆಡ್ ತಳಿಗಳು ಎಂದು ಕರೆಯಲಾಗುತ್ತದೆ. ಅದಕ್ಕೆ ಪೇಟೆಂಟ್ ಕೂಡ ಪಡೆದಿವೆ. ಹಾಗಾದಲ್ಲಿ ರೈತ ತನ್ನ ಫಸಲಿನ ಬೀಜವನ್ನು ಬದಿಗಿಟ್ಟು, ಪ್ರತಿ ಸಲ ಬಹುರಾಷ್ಟ್ರೀಯ ಕಂಪನಿಗಳ ಅಂಗಡಿ ಮುಂದೆ ಕ್ಯೂ ನಿಲ್ಲಬೇಕಾಗುತ್ತದಲ್ಲದೆ, ದುಬಾರಿ ಬೆಲೆ ತೆರಬೇಕಾಗುತ್ತದೆ.

ಕೆನಡಾದ ರೈತನೊಬ್ಬನ ಹೊಲದ ಕೆಲಭಾಗದಲ್ಲಿ ವಂಶವಾಹಿ ಮಾರ್ಪಾಟಾದ ತಳಿಯ ಎಣ್ಣೆಕಾಳುಗಳ ಗಿಡ ಬೆಳೆದಿದ್ದವಂತೆ. ಅಲ್ಲಿನ ಮಾನ್ಸಾಂಟೋ ಕಂಪನಿಯು ಆ ರೈತನ ಮೇಲೆ ಕೋರ್ಟಿನಲ್ಲಿ ದಾವೆ ಹೂಡಿ ತಾನು ಪೇಟೆಂಟ್ ಪಡೆದಿರುವ ವಂಶವಾಹಿ ಮಾರ್ಪಾಟಾದ ತಳಿಯ ಬೀಜಗಳನ್ನು ಆತ ರಾಜಧನ ನೀಡದೆ ಬಳಸಿದ್ದಾನೆಂದು ದೂರಿತು. ಆ ಕಂಪನಿಯಿಂದ ಬೀಜ ಕೊಂಡು ಬೆಳೆದಿದ್ದ ಪಕ್ಕದ ಗದ್ದೆಯ ಇನ್ನೊಬ್ಬ ರೈತ ಕಟಾವು ಮಾಡುವಾಗ ಅಥವಾ ಫಸಲು ಸಾಗಿಸುವಾಗ ಚೆಲ್ಲಿದ್ದ ಬೀಜದಿಂದಾಗಿಯಷ್ಟೆ ತನ್ನ ಗದ್ದೆಯಲ್ಲಿ ಕಂಪನಿಯ ಬೀಜದ ಬೆಳೆ ಬೆಳೆದಿರಬೇಕೆಂದೂ, ತಾನೇನೂ ಉದ್ದೇಶಪೂರ್ವಕವಾಗಿ ಬೆಳೆದಿಲ್ಲವೆಂದು ಆ ರೈತ ವಾದಿಸಿದನಾದರೂ ಅಪಾರ ದಂಡ ತೆರಬೇಕಾಯಿತು. ಇದರಿಂದ ಉತ್ತೇಜಿತಗೊಂಡ ಕಂಪನಿಯು ಕೆನಡಾದಾದ್ಯಂತ ಸಾವಿರಾರು ರೈತರ ಮೇಲೆ ದಾವೆ ಹೂಡಿ ದಂಡ ಪರಿಹಾರ ಸುಲಿಯಿತು.

ಭಾರತದಲ್ಲಿ ವಂಶವಾಹಿ ಮಾರ್ಪಾಟಾದ ಬೆಳೆಗಳಿಗೆ ಪ್ರವೇಶ:

ಪ್ರಸ್ತುತದಲ್ಲಿ ಭಾರತ ಸರ್ಕಾರ ಕೇವಲ ಹತ್ತಿ ಮತ್ತು ಬದನೆಕಾಯಿ ತಳಿಗಳನ್ನು ವಂಶವಾಹಿ ಮಾರ್ಪಾಟಾದ ಬೆಳೆಯ ಪ್ರಯೋಗ ನಡೆಸಲು ಬಹುರಾಷ್ಟ್ರೀಯ ಕಂಪನಿಗಳಿಗೆ ಅನುಮತಿ ನೀಡಿದೆ. ಆದರೆ, ಪೂರ್ಣ ಸುರಕ್ಷತೆಯನ್ನು ಖಾತರಿ ಪಡಿಸಿಕೊಳ್ಳದೆ ಹತ್ತಿ ವಂಶವಾಹಿ ಮಾರ್ಪಾಟಾದ ಬೆಳೆ ಪ್ರಯೋಗ ನಡೆಸಲು ಅನುಮತಿ ನೀಡಿರುವುದರಿಂದ ಇದನ್ನು ಬೆಳೆಯುವಾಗ ಪ್ರಾಣಿಗಳು, ಪಕ್ಷಿಗಳು ಮತ್ತು ಗಾಳಿಯಿಂದ ನಡೆಯುವ ಪರಾಗಸ್ಪರ್ಶದಿಂದಾಗಿ ಇದರ ಅಪಾಯಕಾರಿ ಇರಬಹುದಾದ ಜೀನುಗಳು ಬೇರೆ



ಬೆಳೆ ಅಥವಾ ಹೊಲ ಗದ್ದೆಗಳಿಗೆ ವರ್ಗಾವಣೆಯಾಗಬಲ್ಲ ಸಂಭವನೀಯತೆ ಇರುತ್ತದೆ.

ನಮ್ಮ ಸರ್ಕಾರಿ ಸಂಶೋಧನಾ ಕೇಂದ್ರಗಳಿಗೆ ಗರ ಬಡಿದಿದೆಯೇ?

ಕಳೆದ ವರ್ಷ ಆಂಧ್ರಪ್ರದೇಶದಲ್ಲಿ ಕುರಿಗಳು ಸತ್ತಾಗ, ಸತ್ತ ಕುರಿಗಳ ಸ್ಯಾಂಪಲ್‌ಗಳನ್ನು ವಂಶವಾಹಿನಿ ತಂತ್ರಜ್ಞಾನ ಅನುಮೋದನಾ ಸಮಿತಿಯು (ಜಿಇಎಸಿ - ಈ ಸಮಿತಿಯಲ್ಲಿ ಸುಪ್ರೀಂ ಕೋರ್ಟ್ ತನ್ನ ಪ್ರತಿನಿಧಿಯಾಗಿ ಪಿ.ಭಾರ್ಗವ ಎಂಬುವರನ್ನು ನೇಮಿಸಿದೆ) ಕುರಿಗಳ ಸಾವಿಗೆ ಕಾರಣ ತಿಳಿಯಲು ಭಾರತೀಯ ಪಶುಸಂಗೋಪನಾ ಸಂಶೋಧನಾ ಸಂಸ್ಥೆಗೆ ಕಳುಹಿಸಿಕೊಟ್ಟಿತು. ಕೆಲವು ವಾರಗಳ ನಂತರ, ತಾನು ಸದರಿ ಸಂಶೋಧನಾ ಸಂಸ್ಥೆಯಿಂದ ಕುರಿಗಳ ಸಾವನ್ನು ಕುರಿತಂತೆ ವರದಿಯನ್ನು ಪಡೆದುಕೊಂಡಿದ್ದು, ಅದರಂತೆ ಕುರಿಗಳ ಸಾವು ವಂಶವಾಹಿ ತಂತ್ರಜ್ಞಾನದಿಂದ ಬೆಳೆದ ಹತ್ತಿಯಿಂದ ಉಂಟಾಗಿಲ್ಲ, ಕುರಿಗಳು ಸತ್ತಿರುವುದು ನೈಟ್ರೇಟ್ಸ್ ಮತ್ತು ನೈಟ್ರೈಟ್ಸ್ ಎಂಬ ರಾಸಾಯನಿಕಗಳ ಸೇವನೆಯಿಂದ ಎಂದು ವಂಶವಾಹಿನಿ ತಂತ್ರಜ್ಞಾನ ಅನುಮೋದನಾ ಸಮಿತಿಯು ಹೇಳಿಕೊಂಡಿತು.

ಕುರಿ ಮತ್ತು ಇಲಿ ಒಂದೇ ಎನ್ನುವ ನಮ್ಮ ಸಂಶೋಧನಾ ಸ್ಥಿತಿ:

ಆದರೆ ಜಿಇಎಸಿಯ ಈ ಉತ್ತರದಿಂದ ಸಂತೃಪ್ತರಾಗದ ಸರ್ಕಾರೇತರ ಸಂಸ್ಥೆಯ ಡಾ: ರಾಮದಾಸ್‌ರವರು ಎಂಬುವರು ಮಾಹಿತಿ ಹಕ್ಕು ಅಧಿನಿಯಮದ ಮೇರೆಗೆ ಭಾರತೀಯ ಪಶುಸಂಗೋಪನಾ ಸಂಶೋಧನಾ ಸಂಸ್ಥೆಗೊಂದು ಅರ್ಜಿ ಗುಜರಾಯಿಸಿ, ಸದರಿ ಸಂಶೋಧನಾ ಸಂಸ್ಥೆಯು ವಂಶವಾಹಿ ಮಾರ್ಪಾಟಾದ ಹತ್ತಿಯಲ್ಲಿರುವ 'ಬೌಂಟ್ ಟಾಕ್ಸಿನ್' ಪ್ರಮಾಣದ ಕುರಿತಾಗಿ ಜಿಇಎಸಿಗೆ ಸಲ್ಲಿಸಿರುವ ವರದಿಯ ವಿವರಗಳನ್ನು ತನಗೂ ನೀಡಬೇಕೆಂದು ಕೇಳಿಕೊಂಡರು. ಆದರೆ ಸಂಶೋಧನಾ ಸಂಸ್ಥೆಯಿಂದ ಬಂದ ಉತ್ತರ ಎಂತಹವರನ್ನೂ ದಿಗ್ಭ್ರಮೆಗೊಳಿಸಬಲ್ಲದು: ಅದೇನೆಂದರೆ, ವಂಶವಾಹಿ ಮಾರ್ಪಾಟಾದ ಹತ್ತಿಯಲ್ಲಿರುವ 'ಬೌಂಟ್ ಟಾಕ್ಸಿನ್'ನ್ನು ತಿಂದಿರುವ ಕುರಿಗಳ ಕುರಿತಂತೆ ತಾನು ಯಾವುದೇ ಪ್ರಯೋಗಗಳನ್ನು ನಡೆಸಿಲ್ಲವೆಂದು, ಈ ಕುರಿತಂತೆ ಯಾವುದೇ ವರದಿಯನ್ನು ತಾನು ಜಿಇಎಸಿ ಗೆ ಕಳುಹಿಸಿಲ್ಲವೆಂದು ಸಂಶೋಧನಾ ಸಂಸ್ಥೆಯು ಸ್ಪಷ್ಟಪಡಿಸಿತು.

ಇದರಿಂದ ಬೇಸ್ತುಬಿದ್ದ ಡಾ: ರಾಮದಾಸ್ ಸೀದಾ ಜಿಇಎಸಿ ಗೆ ಅರ್ಜಿ ಸಲ್ಲಿಸಿ ಸಂಶೋಧನಾ ಸಂಸ್ಥೆಯಿಂದ ಪಡೆದಿರುವ ವರದಿ ಕೊಡಿ ಎಂದು ಹಿಂದೆ ಬಿದ್ದರು. ಆಗ ತಾನು ಪಡೆದಿರುವ ವರದಿಯನ್ನು ಜಿಇಎಸಿ ಯು ಡಾ. ರಾಮದಾಸ್‌ರವರಿಗೆ ನೀಡಿತು. ಅದರ ಸಾರಾಂಶವೆಂದರೆ: 'ವಂಶವಾಹಿ ಮಾರ್ಪಾಟಾದ ಹತ್ತಿಯಲ್ಲಿರುವ 'ಬೌಂಟ್ ಟಾಕ್ಸಿನ್' ನ್ನು ತಿಂದ ಇಲಿಗಳ ಸ್ಥಿತಿ ಕುರಿತ ಪ್ರಯೋಗವು ಇನ್ನೂ ಪ್ರಗತಿಯಲ್ಲಿದೆ.! ಜಿಇಎಸಿ ಯ ಪ್ರಯತ್ನಗಳ ಹಿಂದೆ ಪ್ರಯೋಗ ಪರೀಕ್ಷೆಗಳ ವಿಧಿ ವಿಧಾನಗಳಿಲ್ಲದೆ ಪರವಾನಗಿ ಪಡೆಯಲೆತ್ನಿಸುತ್ತಿರುವ ಬಹುರಾಷ್ಟ್ರೀಯ ಕಂಪನಿಗಳ ಒತ್ತಡವಿರುವುದು ಸ್ಪಷ್ಟ.

ಯೂರೋಪ್ ಆದಿಯಾಗಿ ಹಲವಾರು ರಾಷ್ಟ್ರಗಳು ವಂಶವಾಹಿ ಮಾರ್ಪಾಟು ಬೆಳೆಗಳನ್ನು ಬೆಳೆಯಲು, ಪ್ರಯೋಗ ನಡೆಸಲು ಸಂಪೂರ್ಣ ನಿರ್ಬಂಧ ಹೇರಿವೆ. ಇಷ್ಟಾದ ಮೇಲೂ ವಂಶವಾಹಿ ಮಾರ್ಪಾಟು ತಳಿಗಳ ಕುರಿತ ವೈಜ್ಞಾನಿಕ ಸಂಶೋಧನೆ ಪ್ರಯೋಗಗಳ ಮೇಲೆ ನಿರ್ಬಂಧ ಹೇರುವುದೇನೂ ಅಗತ್ಯವಿಲ್ಲ. ವಂಶಶಾಹಿ ಮಾರ್ಪಾಟು ವಿಜ್ಞಾನದಿಂದ ಮನುಕುಲಕ್ಕೆ, ಆಹಾರ ಉತ್ಪಾದನೆ, ಆರೋಗ್ಯ ರಕ್ಷಣೆ ಇತ್ಯಾದಿ ಇತ್ಯಾದಿ ಯಾವ ಯಾವ ಪ್ರಯೋಜನಗಳಿವೆಯೋ ಅದನ್ನು ಪಡೆದುಕೊಳ್ಳುವ ಮುಕ್ತ ಮನಸ್ಸನ್ನು ನಾವು ಹೊಂದಿರಬೇಕಾದದ್ದು ಅಗತ್ಯ. ಆದರೆ ಯಾವುದೇ ಸಂಶೋಧನೆಯನ್ನು ಬಳಕೆಗೆ ತರುವ ಮುಂಚೆ ಅದು ಜೈವಿಕ ಪರಿಸರದ ಮೇಲೆ ಬೀರುವ ಪರಿಣಾಮಗಳ ಕುರಿತು ವಸ್ತುನಿಷ್ಠ ಅಧ್ಯಯನ ಆಗಲೇ ಬೇಕಾಗುತ್ತದೆ. ಈ ನಿಟ್ಟಿನಲ್ಲಿ ಯಾವುದೇ ಬಗೆಯ ಪೂರ್ವಾಗ್ರಹಗಳಿಗೂ ಅವಕಾಶವಿರಬಾರದು. ಹಾಗೆಯೇ ಬಹುರಾಷ್ಟ್ರೀಯ ಕಂಪನಿಗಳ ದುರ್ಲಾಭದ ಆಸೆಯ ಒತ್ತಡವೂ ಇರಬಾರದು.



ಸರಕಾರ ಸಾರ್ವಜನಿಕ ಭೂಮಿಯನ್ನು ಹರಾಜು ಹಾಕುವುದನ್ನು ನಿಲ್ಲಿಸಿ, ಅದೇ ಭೂಮಿಯನ್ನು ನಿವೇಶನ ರಹಿತ ಬಡವರಿಗೆ ಹಂಚಬೇಕು ಎಂದು ಒತ್ತಾಯಿಸಿ ಸಿಪಿಐ(ಎಂ) ನೇತೃತ್ವದಲ್ಲಿ ಹಲವು ಪ್ರಗತಿಪರ ಸಂಘಟನೆಗಳ ಮೂರನೇ ಹಂತದ ಪ್ರತಿಭಟನೆ ಎಂದಿನಂತೆ ಸರ್ಕಾರ ನೂರಾರು ಪ್ರತಿಭಟನಾಕಾರರನ್ನು ಬಂಧಿಸಿದೆ.







ಬೆಂಗಳೂರಿನಲ್ಲಿ ಸೆ. 5 ರಂದು ನಡೆದ ವಿಶ್ವ ಬಿಲಿಯರ್ಡ್ಸ್ ಚಾಂಪಿಯನ್ ಶಿಪ್ ಫೈನಲ್‌ನಲ್ಲಿ ಗೀತ್ ಸೇಥಿ ಅವರನ್ನು ಮಣಿಸಿ ಸತತ ಮೂರನೇ ಬಾರಿ ಪ್ರಶಸ್ತಿ ಗೆದ್ದ ಪಂಕಜ್ ಅಡ್ವಾಣಿಯವರು



ಅಮೆರಿಕ ಓಪನ್ ಗ್ರಾಂಡ್‌ಸ್ಲಾಮ್ ಟೆನಿಸ್ ಟೂರ್ನಿಯ ಮಿಶ್ರ ಡಬಲ್ಸ್ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದಾಗ ಲಿಯಾಂಡರ್ ಫೇಸ್ ಮತ್ತು ಜಿಂಬಾಬ್ವೆಯ ಕಾತಾ ಬ್ಲೇಕ್ ಜೋಡಿ

ಕವನ

ಮತ್ತೆ ನೆನಪಾಗುತ್ತಾರೆ ಮೇಷ್ಟ್ರ

ಗಾಂಧಿ-ಅಂಬೇಡ್ಕರ್‌ರೊಡನೆ ಮಾತು ಮುಗಿಸಿ
ನೆಹರು-ಶಾಸ್ತ್ರಿಯವರೊಂದಿಗೆ ಎಲೆಯಡಿಕೆ
ಜಗಿದು
ಕುಶಲ ವಿಚಾರಿಸಿ ಬಂದವರ ಹಾಗೆ
ಕನಸಿನ ಕಿನ್ನರಲೋಕಕೊಯ್ದ ಮೇಷ್ಟ್ರು
ವಾಸ್ತವಕೆ ಕರೆ ತಂದಿದ್ದು ಅವರಲ್ಲ
ನೆಹರು ಜುಬ್ಬಾದೊಳಗಿನ ಹರಿದ ಬನಿಯನ್ನಿನ
ತೂತುಗಳು!!
ಬಿಗ್ ಬಜಾರು-ಜನತಾ ಬಜಾರುಗಳ
ಗೌಜು-ಗದ್ದಲದ ನಡುವೆ
ನನ್ನೂರ ಸಂತೆಯಲ್ಲಿ
ಬದನೆಕಾಯಿ ಮಾರುವ ಅಜ್ಜಿಯೆದುರಿಗೆ
ಚೌಕಾಶಿ ಮಾಡುತ ನಿಂತ ಮೇಷ್ಟ್ರು
ಥಟ್ಟನೆ ನೆನಪಾಗುತ್ತಾರೆ...
ಮೊಬೈಲು ಫೋನಿಗೆ ಕಿವಿಯಾನಿಸಿ ನಿಂತ
ಕಾಲೇಜು ಹುಡುಗರು
ಬರುವವರೆಂದು ಕಾದು ಕುಳಿತ
ಸರ್ಕಾರಿ ಲೈಬ್ರರಿಯ ಪುಸ್ತಕಗಳ ಹಾಗೆ!
ಮುರಿದ ಕನ್ನಡಕ ಸರಿಪಡಿಸುತ
ನಿಂತ ಮೇಷ್ಟ್ರು
ಥಟ್ಟನೆ ನೆನಪಾಗುತ್ತಾರೆ..
ಡಿಸ್ಕೋ-ಥೆಕ್‌ಗಳ ಅಬ್ಬರದಲ್ಲಿ
ಟ್ರಾಫಿಕ್ಕಿನ ಗದ್ದಲದಲ್ಲಿ
ಯಾವುದೋ ರಾಗವೊಂದು
ಆಲಾಪನೆಗೈಯ್ಯುತ್ತಾ ತೇಲಿಬಂದಂತೆ...
ಸಂಜೆ ಲಾಟೀನಿನ ಗಾಜು ಒರೆಸುತ
ಕುಳಿತ ಮೇಷ್ಟ್ರು
ಎದ್ದು ಬಂದು ಮೈದಡವಿ ತಲೆನೇವರಿಸಿದಂತೆ
ಮತ್ತೆ ನೆನಪಾಗುತ್ತಾರೆ ಮೇಷ್ಟ್ರು.....

– ಬಿ.ಶ್ರೀನಿವಾಸ

JANASHAKTHI KANNADA VARA PATRIKE : Printed by G.N.NAGARAJ, No 12. 18th Cross, S.R.Nagar, BANGALORE-560027 Published by: G.N.NAGARAJ, No 12. 18th Cross, S.R.Nagar, BANGALORE-560027, Karnataka on behalf of / owned by COMMUNIST PARTY OF INDIA (MARXIST) and Printed at : Kriya Prakashana, 12. 18th Cross, S.R.Nagar, BANGALORE - 560 027 Karnataka (State) and Published at BANGALORE No 12.18th Cross, S.R.Nagar, BANGALORE-560027 Editor S.Y.GURURSHANTH, No12. 18th Cross, S.R.Nagar, BANGALORE - 560027
Editor : S.Y.GURUSHANTH